
ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 25 ಸಂಚಿಕೆ 48
ನವಂಬರ್ 30, 2003 ಬೆಲೆ ರೂ. 3.00






ದತ್ತ ಜಯಂತಿ : ಸೌಹಾರ್ದತೆ ಅವನತಿ?



ಶಿಕ್ಷಣದ ವ್ಯಾಪಾರ

ವಿದ್ಯಾರ್ಥಿಗಳ ಮಹಾಮುಷ್ಕರ



ಬಿಜೆಪಿ ಭೂತದ ಬಾಯಲ್ಲೀಗ 'ಹರಹರಾ ಜುದೇವ್'!


ಚಂದ್ರಯಾನದತ್ತ ಚೀನಾ



'ನಮ್ಮ ಪ್ರೀತಿಯ ರಾಮು':
ಅಂಧನೊಬ್ಬನ ಬವಣೆಯ ಕಥೆ

ನಕ್ಸಲ್: ಕೊಂದು ಕೂಗುತ್ತಿರುವ ಪೊಲೀಸರು

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ

52



ಹಿಂದಿನ ಸಂಚಿಕೆಯಲ್ಲಿ ಕೇವಲ ಒಂದೆರೆಡು ಮೈಲುಗಳ ದೂರದಲ್ಲಿದ್ದ ಶತ್ರು ಸೈನಿಕರ ಶಿಬಿರ, ಹೋರಾಟಗಾರರನ್ನು ರಕ್ಷಿಸುವಲ್ಲಿ ದನಗಾಹಿಗಳು ಮತ್ತು ರೈತರು ಶತ್ರು ಸೈನಿಕರನ್ನು ದಿಕ್ಕು ತಪ್ಪಿಸುತ್ತಿದ್ದರ ಬಗ್ಗೆ, ಬರ್ಮಾ ಹೋರಾಟ, ರಶ್ಯಾ ರೈತರ ಬಗ್ಗೆ, ಮಾವೋ, ಸ್ಟಾಲಿನ್ ಬಗ್ಗೆ ಕೇಳುತ್ತಿದ್ದ ಕುರಿ ಕಾಯುವ ಹುಡುಗ, ಸಂಗಾತಿಗಳ ನಡುವೆ ಕ್ರಿಯಾಶೀಲ ಅಧ್ಯಯನ ವೃತ್ತ ಆರಂಭವಾದದ್ದು ಮತ್ತು ತಮಗೆ ಅನ್ಯಾಯ ಮಾಡುತ್ತಿದ್ದವರ ವಿರುದ್ಧ ಕೊತಕೊತನೆ ಕುದಿಯುತ್ತಿದ್ದ ರೈತರ ರಕ್ತ ಈ ಬಗ್ಗೆ ಓದಿರುವಿರಿ. ಮುಂದೆ.....

ಕನ್ನಡಕ್ಕೆ: **ವಿಶ್ವ ಕುಂದಾಪುರ**

ಸಂಘಟಿತ ಬಲದ ಬಗ್ಗೆ ರೈತರಲ್ಲಿ ಮೂಡಿದ ಅರಿವು

ಮನೆಯಲ್ಲೇ ತಯಾರಿಸಿದ ಉದ್ದನೆಯ ಚಾರೂಟ್‌ಗಳನ್ನು ಸೇದುತ್ತಿದ್ದ ಹಾಗೂ ಸಂಗಾತಿಗಳಿಗೆ ಉದಾರವಾಗಿ ತಂಬಾಕೆಲೆ ನೀಡುತ್ತಿದ್ದ ರೈತರನ್ನು ನೋಡುತ್ತಿದ್ದಾಗ, ನನ್ನ ಜೀವನಪರ್ಯಂತ ನೋಡುತ್ತಿದ್ದ ಆ 'ಹಳೆಯ ರೈತ' ಕಾಣೆಯಾಗಿದ್ದನ್ನು ನಾನು ಗಮನಿಸಿದೆ.

ಕೈಮುಗಿದು ನಿಂತು ತನ್ನ ಶೋಷಕರು ಹಾಗೂ ಪೀಡಕರನ್ನು ಸ್ವಾಗತಿಸುತ್ತಿದ್ದ, ಭೂಮಾಲಿಕರ ಏಟಿನಿಂದಾದ ಗಾಯ ಹೊತ್ತಿದ್ದು ತನಗೆ ಹಿಂಸೆ ನೀಡುವವರನ್ನು ಮುಖವನ್ನೆತ್ತಿಯೂನೋಡದ, ಕ್ರೂರ ಪ್ರಾಣಿಗಳಷ್ಟೇ ನೀಡಬಹುದಾದ ಹಿಂಸೆಯನ್ನು ಕೊಟ್ಟಾಗ್ಯೂ ತನ್ನ ಹರಕು ಮುರುಕು ಗುಡಿಸಲು ಸೇರಿಕೊಂಡು ತನ್ನ ಮಾಲಿಕನನ್ನು ರೇಗಿಸಿದ್ದಕ್ಕಾಗಿ 'ನನ್ನನ್ನು ಕ್ಷಮಿಸು ಶಿವನೆ' ಎಂದು ದೇವರನ್ನು ಬೇಡಿಕೊಳ್ಳುತ್ತಿದ್ದ 'ಆ ರೈತ' ಈಗೆಲ್ಲಿ? 'ನನ್ನನ್ನು ಕ್ಷಮಿಸು ಪರಮೇಶ್ವರಾ! ನನ್ನ ಮಾಲಿಕನಿಗೆ, ನನ್ನ ತಂದೆಗೆ, ದೇವರ ಕೃಪೆಗೆ ಪಾತ್ರನಾಗುವಂತೆ ಮಾಡು' ಎಂದು ಬೇಡುತ್ತಿದ್ದರು. ಹೌದು ಈಗ ಆ ರೈತ ಇಲ್ಲ, ಆ ಜಮಾನಾ ಮುಗಿದಿದೆ. ತೆಲಂಗಾಣದಿಂದ ಆತ ಉತ್ತಮ ಪಯಣ ಆರಂಭಿಸಿದ್ದಾನೆ.

ಆ ರೈತನ ಜಾಗದಲ್ಲಿ ಪುನರುಜ್ಜೀವನಗೊಂಡ, ಉತ್ಸಾಹಶೀಲ ರೈತ ಜನಿಸಿದ್ದಾನೆ. ಶೋಷಕರು ಹಾಗೂ ಬಿಳಿಟೋಪಿ- ಖಾದಿ ಬಟ್ಟೆಯ ದರೋಡೆಕೋರರ ದಮನವನ್ನು ಬಾಯಿ ಮುಚ್ಚಿಕೊಂಡು ಸಹಿಸುವವರಲ್ಲ ಇವರು. ಆತ ನನ್ನ ಪುತ್ರ, ಪುತ್ರಿಯರನ್ನು ದೂರದ ಬೆಟ್ಟ, ಅರಣ್ಯಗಳಿಗೆ ಕಳಿಸುತ್ತಿದ್ದಾನೆ. ಶೋಷಕರನ್ನು ಎದುರಿಸಲು, ತನ್ನ ಹಿಂದಿನ ಭೂಮಾಲಿಕರಿಂದ ವಶಪಡಿಸಿಕೊಂಡ ಜಮೀನಿನಲ್ಲಿ ಆತ ಊಳುತ್ತಿದ್ದಾನೆ. ಶತ್ರುವನ್ನು ಪರಿಣಾಮಕಾರಿಯಾಗಿ ಎದುರಿಸಲು ಅನೇಕ ರಾಜಕೀಯ ಮತ್ತು ಮಿಲಿಟರಿ ಅಂಶಗಳನ್ನು ಆತ ಇನ್ನೂ ಅರಿತಿಲ್ಲ. ರೈತರಿಗೆ ನಾಯಕತ್ವ ನೀಡಲು ದುಡಿಯುವ ವರ್ಗವಿದೆ. ಸ್ವತಃ ಈ ಕಾರ್ಮಿಕ ವರ್ಗಕ್ಕೂ ಅನೇಕ ರಾಜಕೀಯ ಹಾಗೂ ಮಿಲಿಟರಿ ಪರಿಕಲ್ಪನೆಗಳ ಸ್ಪಷ್ಟ ಅರಿವಿಲ್ಲ. ಆದರೂ ಅವರು ರಣರಂಗದಲ್ಲಿ ದೃಢವಾಗಿ ನಿಂತಿದ್ದಾರೆ. ರೈತರೊಂದಿಗೆ ಸದಾಕಾಲ ಹೆಗಲಿಗೆ ಹೆಗಲು ಕೊಟ್ಟು ಹೋರಾಡುತ್ತಿದ್ದಾರೆ, ಮುನ್ನಡೆಸುತ್ತಿದ್ದಾರೆ. ಬೇರೆ ವಿಭಾಗದವರು ರೈತರ ಕೈಬಿಟ್ಟರೂ ಕಾರ್ಮಿಕವರ್ಗ ಮಾತ್ರ ಹಾಗೆ ಮಾಡದು.



ಆತ ಅತಿವೇಗದಲ್ಲಿ ಕಲಿಯುತ್ತಿದ್ದಾನೆ, ಆತನಿಗೆ ನಾಯಕತ್ವ ನೀಡುವ ಕಾರ್ಮಿಕ ವರ್ಗ ಕೂಡ ಹಾಗೇ ಕಲಿಯುತ್ತಿದೆ. ಶೋಷಿತ ಮನುಕುಲದ ಜಾಗತಿಕ ಹೋರಾಟದೊಂದಿಗೆ ರೈತವರ್ಗಕ್ಕೆ ಸಂಪರ್ಕ ಕಲ್ಪಿಸಿಕೊಟ್ಟಿದ್ದೇ ದುಡಿಯುವ ವರ್ಗ. ರೈತರ ಸಂಘಟಿತ ಶಕ್ತಿಯ ಬಗ್ಗೆ ಅವರಲ್ಲಿ ಪ್ರಜ್ಞೆಯನ್ನು ಬೆಳೆಸಿದ್ದೇ ಕಾರ್ಮಿಕ ವರ್ಗ. ತನ್ನ ತಲೆ ಒಡೆದವರ, ಶಾಂತಿ-ನೆಮ್ಮದಿ ನಾಶ ಮಾಡಿದ, ಮನೆಗಳನ್ನು ಧ್ವಂಸ ಮಾಡಿದ ಜನರನ್ನು ಕ್ಷಮಿಸೆಂದು ಆಶೀರ್ವದಿಸೆಂದು ದೇವರನ್ನು ನಿರ್ಲಿಪ್ತವಾಗಿ ಪ್ರಾರ್ಥಿಸುವ ಬದಲು ಒಗ್ಗಟ್ಟಾಗಿ ಶಸ್ತ್ರ ಕೈಗೆತ್ತಿಕೊಂಡರೆ ಅದೆಂಥ ಮಹಾಶಕ್ತಿ ಯಾಗುತ್ತದೆ ಎಂದು ರೈತರ ಬಲದತ್ತ ಬೊಟ್ಟುಮಾಡಿ ತೋರಿಸಿದ್ದೇ ದುಡಿಯುವ ವರ್ಗ. ಭವಿಷ್ಯವು ರೈತರದ್ದೇ ಆಗಿದೆಯೆಂದು ಖಾತರಿಪಡಿಸಿದ್ದು ಕೂಡ ದುಡಿಯುವ ವರ್ಗವೇ.

ಈ ಕೃಶಶರೀರದ ರೈತರು ಹಾಗೂ ಯುವ ಕುರಿಗಾಹಿ ನನ್ನ ತಲೆಯಲ್ಲಿ ಸೃಷ್ಟಿಸಿದ ಅಭಿಪ್ರಾಯ ಗಳಿವು. ಮುಂದಿನ ದಿನಗಳಲ್ಲಿ ಪ್ರದೇಶಗಳಲ್ಲಿ ಇನ್ನಷ್ಟು ಸುತ್ತಾಡಿದಾಗ ಈ ಅಭಿಪ್ರಾಯ ಸರಿಯೆಂಬುದು ಮತ್ತಷ್ಟು ದೃಢಪಟ್ಟಿತು. ರೈತರ ಸಂಕುಚಿತ ದೃಷ್ಟಿಕೋನದ ಬಲೂನು ಒಡೆದಿತ್ತು, ತಮ್ಮ ಸಂಘಟಿತ ಬಲದ ಬಗ್ಗೆ ಅವರಲ್ಲಿ ಅರಿವು ಮೂಡಿತ್ತು. ರೈತರಿಗೆ ನಾಯಕತ್ವ ನೀಡುವುದಾಗಿ ಹೇಳಿ ನಟಿಸಿದವರು, ಇತರರು ಕೈ ಕೊಟ್ಟರೂ ದುಡಿಯುವ ವರ್ಗ ಮಾತ್ರ ಅವರ ಜತೆ ದೃಢವಾಗಿ ನಿಂತು ಶೋಷಕರ ದಬ್ಬಾಳಿಕೆಯನ್ನು ಎದೆಗುಂದದೆ ಸಹಿಸಿತು. ಇಂಥ ಸಂದರ್ಭದಲ್ಲೂ ಅದು ರೈತರ ಕೈಬಿಡಲಿಲ್ಲ. ರೈತರ ಹಾಗೂ ಕಾರ್ಮಿಕರ ಏಕತೆಯ ಖಾತರಿಯಾದ ಹಾಗೂ ಸ್ಥಿರವಾದ ಅಡಿಪಾಯ ಸೃಷ್ಟಿಯಾಗುವುದು ಇಂಥ ಸನ್ನಿವೇಶಗಳಲ್ಲೇ ರೈತರಿಗೆ ಕಾರ್ಮಿಕ ವರ್ಗದ ಪ್ರಾಮಾಣಿಕತೆಯನ್ನು ಒರೆಗಲ್ಲಿಗೆ ಹಚ್ಚಲು ಆಗಿರುವುದು ಇಲ್ಲಿಯೆ. ಇದೊಂದು ಅದ್ಭುತ ಗಳಿಕೆ ಯಾಗಿದೆ. ನಾನು ಸದಸ್ಯನಾಗಿರುವ ಪಕ್ಷದ ಗರಿಮೆಯಾಗಿದೆ ಇದು. ಇಂಥ ಪಕ್ಷದ ಸದಸ್ಯನಾಗಿರುವುದಕ್ಕೆ ನನಗೆ ಗೌರವವೆನಿಸುತ್ತದೆ.

ಕುರಿಗಾಹಿಯ ವಿಶ್ವಾಸ

ಏರಿಯಾ ಕೇಂದ್ರ ಕಛೇರಿಯಿಂದ ಕೇವಲ ಒಂದು ಮೈಲು ದೂರದಲ್ಲಿ ನಾವಿದ್ದು ಒಂದು ದಿನ ಕಾದೆವು. ಹಾಗೆ ಮಾಡುವುದು ಅನಿವಾರ್ಯ ವಾಗಿತ್ತು. ಯಾಕೆಂದರೆ ಅವರು ಎಲ್ಲಿದ್ದಾರೆನ್ನುವುದು ಏರಿಯಾ ಹೆಡ್‌ಕ್ವಾರ್ಟರ್‌ನ ದೂತನನ್ನು ಬಿಟ್ಟು ಬೇರೆ ಯಾರಿಗೂ ಗೊತ್ತಿರಲಿಲ್ಲ. ಏರಿಯಾ ಹೆಡ್‌ಕ್ವಾರ್ಟರ್‌ಗಾಗಿ ದೂತ ಬೆಟ್ಟಗುಡ್ಡಗಳಲ್ಲಿ ಅಲೆಯುತ್ತಿದ್ದಾಗ ನಾವು ಸಪಾಟಾದ ಬೆಟ್ಟವೊಂದರ ತುದಿಯಲ್ಲಿ ಕುಳಿತಿದ್ದೆವು. ಅಲ್ಲಿ ಕುರಿಗಾಹಿ ಹುಡುಗ ಮುದುಕ ಸ್ಟಾಲಿನ್ ಹೇಗಿದ್ದರೆಂದು ಕೇಳಿದ. ಇಡೀ ಜಗತ್ತಿನ 'ಕುರಿಗಾಗಿ' ಸಮುದಾಯ ವಿಮೋಚನೆಗೊಳ್ಳುವವರೆಗೆ ನಾನು ಬದುಕಿರುತ್ತೇನೆ ಎಂದು ಆತ ಭಾವಿಸಿದ. ಕೇವಲ ಕೆಲವು ವರ್ಷಗಳ ಹಿಂದೆ ಆತನ ತಾಯಿ ಏನನ್ನು ನಿರೀಕ್ಷಿಸಿರಲಿಲ್ಲವೋ ಅಂಥ ಭಾಷೆಯನ್ನು ಆತ ಮಾತನಾಡಿದ. ಕ್ರಾಂತಿಯ ಬಗ್ಗೆ, ಮಾವೋ, ಹೋಚಿಮಿನ್ ಕುರಿತು, ಬರ್ಮಾದ ವಿಮೋಚನೆಯ ವಿಚಾರವಾಗಿ ಆತ ಮಾತಾಡಿದ. ಸಾಮ್ರಾಜ್ಯಶಾಹಿ ನೊಗಡನ್ನು ಕಿತ್ತೆಸೆದ ದೇಶಗಳ ಹೆಸರನ್ನು ಪಟಪಟನೆ ಹೇಳತೊಡಗಿದ. "ನಾವು ಕೂಡ ಬೇಗನೆ ಸ್ವತಂತ್ರರಾಗುತ್ತೇವೆ" ಎಂದು ಆತ ನನಗೆ ಆಶ್ವಾಸನೆ ನೀಡಿದ. ನಂತರ ಕುರಿಗಳನ್ನು ಕಾಯಲು ಹೋದ.

ನನ್ನ ಮುಂದೆ ಕುಳಿತಿದ್ದ ರೈತರು ಕೃಶರಾಗಿದ್ದರು. ಆದರೆ ಅವರಾಡುವ ಮಾತುಗಳು ಶತಶತಮಾನಗಳಿಂದ ಸುಪ್ತವಾಗಿದ್ದ ಕ್ರಾಂತಿಯ ಜ್ವಾಲೆಯನ್ನು ಸೂಸುತ್ತಿದ್ದವು. ಅವರು ಸಾಧು ಸ್ವಭಾವದವರು, ಸೌಜನ್ಯಶೀಲರಾಗಿದ್ದರು. ಜಂಭ ಬಡಾಯಿ ಕೊಚ್ಚಿಕೊಳ್ಳಲು ಅವರಿಂದಾಗುತ್ತಿರಲಿಲ್ಲ. ಅವರು ಮಾತಾಡುತ್ತಿದ್ದುದೇ ಕಡಿಮೆ, ಆದರೆ ಅವರ ನುಡಿಗಳು ಉಲ್ಲಾಸದಿಂದ ತುಂಬಿ ತುಳುಕುತ್ತಿದ್ದವು.

ಮುಂದುವರಿಯುವುದು

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ನವೆಂಬರ್ 28,2003**
  ಬಳ್ಳಾರಿ ಜಿಲ್ಲಾ ಸಿಐಟಿಯುನಿಂದ 'ಬೇಡಿಕೆ ದಿನ' ಸಿಐಟಿಯು ಜಿಲ್ಲಾ ಸಮ್ಮೇಳನದ ಕರೆ.
- **ನವೆಂಬರ್ 29-2003**
  ಎಸ್.ಎಫ್.ಐ. ದ.ಕ. ಜಿಲ್ಲಾ ಸಮ್ಮೇಳನ, ಮಂಗಳೂರು.
- **ನವೆಂಬರ್ 29,30-2003**
  ಕರ್ನಾಟಕ ಸಮಾಜಿಕ ವೇದಿಕೆ (ಕೆ.ಎಸ್.ಎಫ್) ರಾಜ್ಯ ಮಟ್ಟದ ಸಮ್ಮೇಳನ ಇಂದಿರಾ ಗಾಜಿನ ಮನೆ, ಹುಬ್ಬಳ್ಳಿ.
- **ಡಿಸೆಂಬರ್ 2, 2003.**
  ಬಾಬಾ ಬುಡನ್‌ಗಿರಿ ದತ್ತಪೀಠದ ಕೋಮು ಸೌಹಾರ್ದತೆ ಸಾರಲು, ಸಂಘಪರಿವಾರದ ದತ್ತಮಾಲೆ, ದತ್ತ ಜಯಂತಿ ಆಚರಣೆ ನಿರ್ಬಂಧಕ್ಕೆ ಆಗ್ರಹಿಸಿ, ರಾಜ್ಯದಾದ್ಯಂತ ಧರಣಿ.
- **ಡಿಸೆಂಬರ್ 2, 2003.**
  ದಕ್ಷಿಣ ಭಾರತ ವಿದ್ಯುತ್ ನೌಕರರ ಹಾಗೂ ಇಂಜಿನಿಯರುಗಳ ಸಮನ್ವಯ ಸಮಿತಿ. ಕೇಂದ್ರ ವಿದ್ಯುತ್ ಮಸೂದೆ - 2003 ರ ಜನವಿರೋಧಿ ಅಂಶಗಳನ್ನು ವಿರೋಧಿಸಿ ಪ್ರತಿಭಟನೆ.
- **ಡಿಸೆಂಬರ್ 6, 2003**
  ಎಸ್.ಎಫ್.ಐ. ಉಡುಪಿ ಜಿಲ್ಲಾ ಸಮ್ಮೇಳನ, ಹೋಟೆಲ್ ಶ್ರೀರಾಮ್ ರೆಸಿಡೆನ್ಸಿ, ಉಡುಪಿ.
- **ಡಿಸೆಂಬರ್ 9 ರಿಂದ 13, 2003**
  ಸಿಐಟಿಯು ಅಖಿಲ ಭಾರತ ಸಮ್ಮೇಳನ ರಾಮಲಕ್ಷ್ಮಿ ಪ್ಯಾರಡೈಸ್, ನಂ. 174, ಜಿ.ಎನ್.ಟಿ.ರಸ್ತೆ, ಮಾಧವರಾಮ್, ಚೆನ್ನೈ-600110.
- **ಡಿಸೆಂಬರ್ 11, 2003**
  ಖಾಸಗಿ ವಿದ್ಯಾಸಂಸ್ಥೆಗಳಲ್ಲಿ ಶುಲ್ಕ ಮತ್ತು ಪ್ರವೇಶವನ್ನು ಕ್ರಮಬದ್ಧಗೊಳಿಸಲು ಕೇಂದ್ರ ಶಾಸನಕ್ಕೆ ಆಗ್ರಹಿಸಿ ವಿದ್ಯಾರ್ಥಿಗಳ ಪ್ರಜಾಪ್ರಭುತ್ವ ಹಕ್ಕುಗಳಿಗೆ ಒತ್ತಾಯಿಸಿ ಅಖಿಲ ಭಾರತ ವಿದ್ಯಾರ್ಥಿ ಮುಷ್ಕರ

ಐಕ್ಯರಂಗ

4 ದಶಗಳ ಹಿಂದೆ

1ನೇ ನವೆಂಬರ್ 1964

ಭಾರತ ಕಮ್ಯುನಿಸ್ಟ್ ಪಾರ್ಟಿಯ ಕಲ್ಕತ್ತಾ ಅಧಿವೇಶನ ಆರಂಭ

ಭಾರತ ಕಮ್ಯುನಿಸ್ಟ್ ಪಾರ್ಟಿಯ 7ನೇ ಕಾಂಗ್ರೆಸ್ (ಮಹಾಧಿವೇಶನ) ಅಕ್ಟೋಬರ್ 31 ರಿಂದ ನವೆಂಬರ್ 7 ರ ತನಕ 8 ದಿನಗಳ ಕಾಲ ಕಲ್ಕತ್ತಾದಲ್ಲಿ ಜರುಗುವುದು.

ದೇಶದೊಳಗಿನ ತೀವ್ರ ಆಹಾರಾಭಾವ ಪರಿಸ್ಥಿತಿ, ಬೆಲೆಯೇರಿಕೆ ಪ್ರಶ್ನೆಗಳ ಕುರಿತು ಅಧಿವೇಶನದಲ್ಲಿ ತೀವ್ರ ಪರಿಶೀಲನೆ ನಡೆಸಲಾಗುವುದು. ಅಂತೆಯೇ ಈಗ ಕೇಂದ್ರ ಸರ್ಕಾರ ಮತ್ತು ಯೋಜನಾ ಮಂಡಳಿಯು ಮುಂದಿಟ್ಟಿರುವ ನಾಲ್ಕನೇ ಯೋಜನೆಯನ್ನು ಕುರಿತೂ ಅಧಿವೇಶನ ಚರ್ಚಿಸಲಿರುವುದು. ಆಗ್ನೇಯ ಏಷ್ಯಾದಲ್ಲಿನ ಪರಿಸ್ಥಿತಿ, ಜಾಗತಿಕ ಕಮ್ಯುನಿಸ್ಟ್ ಚಳುವಳಿ ಇತ್ಯಾದಿಗಳನ್ನು ಕುರಿತು ಅಧಿವೇಶನದಲ್ಲಿ ಚರ್ಚಿಸಲಾಗುವುದು.

ಭಾರತ, ಚೀನಾ ಗಡಿ ವಿವಾದದ ಕುರಿತಾಗಿ ಅಧಿವೇಶನವು ಒಂದು ಸ್ಪಷ್ಟವಾದ ನಿರ್ಣಯ ಕೈಗೊಳ್ಳಲಿದೆ.

* * *

ಎರಡು ಅಧ್ಯಕ್ಷೀಯ ಚುನಾವಣೆಗಳು

ನಮ್ಮ ನೆರೆಯ ಪಾಕಿಸ್ತಾನದಲ್ಲಿ, ದೂರದ ಸಂಯುಕ್ತ ಅಮೆರಿಕಾದಲ್ಲಿ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ಹೋರಾಟಗಳು ಭರದಿಂದ ನಡೆಯುತ್ತಲಿವೆ.

ಪಾಕಿಸ್ತಾನದಲ್ಲಿ ಅಧ್ಯಕ್ಷ ಅಯೂಬ್ ಮತ್ತು ಮಿಸ್ ಫಾತಿಮಾ ಜಿನ್ನಾ ಇವರು ಅಧ್ಯಕ್ಷ ಸ್ಥಾನದ ಸ್ಪರ್ಧಿಗಳು

* * *

ಕ್ರುಶ್ಚೋವ್ ನಿರ್ಗಮನದ ಬಳಿಕ

ಸೋವಿಯತ್ ಒಕ್ಕೂಟದ ಪ್ರಧಾನಿ ಹಾಗೂ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಸ್ಥಾನದಿಂದ ಕ್ರುಶ್ಚೋವ್‌ರವರ ನಿರ್ಗಮನವು, ಕ್ರುಶ್ಚೋವ್ ಧೋರಣೆಯನ್ನು ಅನುಸರಿಸುತ್ತಿದ್ದ ಕೆಲವು ಕಮ್ಯುನಿಸ್ಟ್ ಪಕ್ಷಗಳಲ್ಲಿ ಪ್ರತ್ಯೇಕವಾಗಿ ಪಶ್ಚಿಮ ಯುರೋಪಿನ ಕಮ್ಯುನಿಸ್ಟ್ ನಾಯಕರದಲ್ಲಿ ಸ್ವಲ್ಪ ಗೊಂದಲ ತಂದಿದೆ.

* * *

'ಐಕ್ಯರಂಗ' ಪತ್ರಿಕೆಯ ಬಗ್ಗೆ

ದಕ್ಷಿಣ ಕನ್ನಡ ಜಿಲ್ಲೆಯ ಪಾರ್ಟಿಯು 'ಐಕ್ಯರಂಗ' ವಾರಪತ್ರಿಕೆಯನ್ನು ಹೊರಡಿಸಿ ಪ್ರಾಂತದ ಪಾರ್ಟಿಗೂ ನಮ್ಮ ಚಳುವಳಿಗೂ ಅಪಾರ ಸೇವೆ ಸಲ್ಲಿಸಿರುವುದನ್ನು ಈ ಸಮ್ಮೇಳನವು ಹೃತ್ಪೂರ್ವಕವಾಗಿ ಸ್ವಾಗತಿಸುತ್ತದೆ. ಇಂದಿನ ಪರಿಸ್ಥಿತಿಯಲ್ಲಿ ಇದರ ಮಹತ್ವವು ಅಪಾರವಾಗಿದೆ. ಈ ಪತ್ರಿಕೆಗೆ ನಮ್ಮ ಪ್ರಾಂತ ಎಲ್ಲಾ ಪಾರ್ಟಿ ಸದಸ್ಯರೂ ಹೃತ್ಪೂರ್ವಕ ಬೆಂಬಲ ನೀಡಬೇಕೆಂದೂ ಅದಕ್ಕೆ ಅಧಿಕ ಸಂಖ್ಯೆಯಲ್ಲಿ ಚಂದಾದಾರರನ್ನು ಸೇರಿಸಬೇಕೆಂದೂ, ಅತ್ಯಧಿಕ ಪ್ರಮಾಣದಲ್ಲಿ ಮಾರಾಟ ಮಾಡಬೇಕೆಂದೂ, ಅದಕ್ಕೆ ಯೋಗ್ಯ ವರದಿಗಳನ್ನು ಕಳುಹಿಸಿಕೊಡಬೇಕೆಂದೂ ಈ ಸಮ್ಮೇಳನವು ವಿನಂತಿಸುತ್ತದೆ.

* * *

ಪ್ರಧಾನಿ ಶಾಸ್ತ್ರಿಗಳ ಕಣ್ಣು ಮುಂದೆಯೇ ವ್ಯಾಪಾರಿ ವರ್ಗದ ಪುಂಡಾಟಿಕೆ

ನವದೆಹಲಿಯ ನ್ಯಾಯಬೆಲೆ ಚಳುವಳಿಗೆ ದೆಹಲಿ ಆಡಳಿತೆಯ ಅಸಹಕಾರ.

ಕಾರ್ಕಳದಲ್ಲಿ ಶಂಕಿತ ನಕ್ಸಲೀಯರ ಹತ್ಯೆ: ಪೊಲೀಸರ ಅತಿರೇಕ

ನವೆಂಬರ್ 18 ರ ತಣ್ಣನೆಯ ನೀರವ ರಾತ್ರಿ. ಬೆಳಕು ಕಾಣಲು ಇನ್ನೂ ಮೂರು ತಾಸುಗಳು ದೂರ. ಕಾರ್ಕಳದ ಹೊಸ್ಮಾರು ಬಳಿಯ ಈದು ಗ್ರಾಮದ ರಾಮಪೂಜಾರಿ ಮನೆಯ ಕೊಟ್ಟಿಗೆಯಲ್ಲಿ ಅಡಗಿ ಕುಳಿತಿದ್ದ ಪೋಲೀಸರು ಗುಂಡು ಹಾರಿಸಿ ಇಬ್ಬರು ಯುವತಿಯರನ್ನು ಕೊಂದಿದ್ದಾರೆ. ಇನ್ನೊಬ್ಬಾಕೆ ಗಾಯಗೊಂಡು ಆಸ್ಪತ್ರೆ ಸೇರಿದ್ದಾಳೆ. ಹಠಾತ್ತನೆ ದಾಳಿಯಿಂದ ನೆಲಕ್ಕುರುಳಿ ಸುಮತಿ ಅಲಿಯಾಸ್ ಪಾರ್ವತಿ (27) ಉಷಾ ಅಲಿಯಾಸ್ ಹಾಜಿಮಾ (25) ರನ್ನು ಕೊಂದ ಪೋಲೀಸರು ಏನನ್ನೋ ಸಾಧಿಸಿದವರಂತೆ ಬೀಗುತ್ತಿದ್ದಾರೆ. ಈ ಎಳೆಯ ಹರೆಯದ ಜೀವಗಳನ್ನು ಕೊಂದಿದ್ದಾದರೂ ಏಕೆ?

ಅವರು ನಕ್ಸಲಿಯರು..... "ಕುದುರೆಮುಖ ಗಣಿಗಾರಿಕೆಯನ್ನು ವಿರೋಧಿಸಿದ್ದರು, ರಾಷ್ಟ್ರೀಯ ಉದ್ಯಾನವನಕ್ಕಾಗಿ ಒಕ್ಕಲೆಬ್ಬಿಸುತ್ತಿದ್ದ ಬುಡಕಟ್ಟು ಹಾಗೂ ಅಲ್ಲಿನ ನಿವಾಸಿಗಳನ್ನು ಸಂಘಟಿಸಿ ಸರ್ಕಾರದ ವಿರುದ್ಧ ಬಂಡೇಳಲು ಕರೆ ನೀಡುತ್ತಾ ಸಂಘಟನೆ ಕಟ್ಟಲು ಓಡಾಡುತ್ತಿದ್ದರು" ಇದು ಸರ್ಕಾರ, ಅದರ ಪೋಲೀಸರು ಕೊಡುತ್ತಿರುವ ಕಾರಣ - ಅಪರಾಧದ ಪಟ್ಟಿ! ಅವರು ನಕ್ಸಲಿಯರಿರಬಹುದು. ಅವರ ಸಿದ್ಧಾಂತ, ರಾಜಕೀಯ ನಿಲುವು - ಕಾರ್ಯವಿಧಾನ ಒಪ್ಪದಿರ ಬಹುದು. ಆದರೆ ನಕ್ಸಲಿಯರೆಂದ ಮಾತ್ರಕ್ಕೆ ಹೇಗೆ ಬೇಕಾದರೂ ದಂಡಿಸ ಬಹುದೇ? ಹೊಂಚಿ ಕೊಲ್ಲಬಹುದೇ? ಅವರು ನಾಗರಿಕ - ಮನುಷ್ಯನೇ ಅಲ್ಲವೇ? ಈ ದೇಶದ ಪ್ರಜೆಗಳಲ್ಲವೇ? ಎಂಬ ಪ್ರಶ್ನೆಗಳು ಏಳುತ್ತವೆ. ಈದು ಮನೆಯಲ್ಲಿ ಬೀಡು ಬಿಟ್ಟಿದ್ದ ತಂಡ ಮಾಡಿದ್ದ ಅಪರಾಧವೇನು? ಎಷ್ಟು ಪ್ರಮಾಣದಲ್ಲಿ ಇದರಲ್ಲಿ ಭಾಗಿಗಳು... ಪರಿಶೀಲಿಸುವ ಇರಾದೆಯೇ ಇಲ್ಲ. ಗಣಿಗಾರಿಕೆ ವಿರೋಧಿಸಿದರೆ, ಅಕ್ರಮ ವಾಸಿಗಳು, ಬುಡಕಟ್ಟು ಜನರನ್ನು ಒಕ್ಕಲೆಬ್ಬಿಸಬೇಡಿ ಎಂದು ಹೋರಾಟಕ್ಕೆ ಕರೆ ನೀಡಿದರೆ ಅದು ಅಪರಾಧವಾಗುತ್ತದೆಯೇ? ಇದಕ್ಕೆ ಕೊಲ್ಲಲು ಕಾನೂನು ಹೇಳುತ್ತದೆಯೇ? ಇಂತಹ ಚಳುವಳಿಗಳಲ್ಲಿ ಭಾಗಿಯಾಗಿದ್ದಾರೆಂದೇ ಕೊಲ್ಲುವುದು ಖಂಡನೀಯ. ಕರ್ನಾಟಕದ ಪೋಲೀಸರ ವರ್ತನೆ ಅತಿರೇಕದ್ದು!

ಇಲ್ಲಿ ಅಪರಾಧವೆಸಗಲಾಗಿದ್ದರೆ ಅದನ್ನು ಸಮರ್ಥಿಸುವ ಪ್ರಶ್ನೆ ಇಲ್ಲ. ಆ ಕಾರ್ಯಕರ್ತರ ತಂಡ ಎಸಗಿದ ಅಪರಾಧ ಪ್ರಮಾಣ ಅನುಸರಿಸಿ ಬೇಕಾದರೆ ಕಾನೂನಾತ್ಮಕ ಕ್ರಮ ವಹಿಸಲಿ.



ಬಂಧಿಸಲಿ, ವಿಚಾರಣೆಗೆ ಒಳಪಡಿಸಲಿ. ಶಿಕ್ಷೆಯನ್ನು ನಿರ್ಧರಿಸಲಿ. ಆದರೆ ಪೊಲೀಸ್ ಪಡೆಗೆ ಇದಾವುಗಳ ಬಗ್ಗೆ ಕಾಳಜಿ, ಗಮನವೇ ಬೇಕಿರಲಿಲ್ಲ. ಕಳೆದ ಮೂರು ತಿಂಗಳುಗಳಿಂದ ಅವರ ಚಲನವಲನ ಗಮನಿಸಿದ್ದಾರಂತೆ! ಇಲ್ಲೇ ಇಷ್ಟೊತ್ತಿಗೇ ಬರುತ್ತಾರೆಂಬ ಖಚಿತ ಸುಳಿವೂ

ಈ ವಾರ ಕರ್ನಾಟಕ
ಒಂದು ನೋಟ
ಎಸ್.ವೈ.ಗುರುಶಾಂತ್

ಇತ್ತಂತೆ! ಅಂದರೆ ಬಹಳ ಸುಲಭವಾಗಿ ವಿಶೇಷ ಪ್ರಯತ್ನದಿಂದ ಅವರುಗಳನ್ನು ಬಂಧಿಸ ಬಹುದಿತ್ತು. ಮಧ್ಯರಾತ್ರಿಯಲ್ಲಿ ಮಲಗಿರುವಾಗಲೇ ಆಧುನಿಕ ರಾಸಾಯನಿಕ ಗಳ್ನು ಬಳಸಿ ಬಂಧಿಯನ್ನಾಗಿಸಬಹುದಿತ್ತು. ಆದರೆ ಈ ಪೊಲೀಸ್ ವ್ಯವಸ್ಥೆಗೆ ಇವಾವೂ ಬೇಕಿರಲಿಲ್ಲ. ಗೊತ್ತಿರುವ ಒಂದೇ ಭಾಷೆ ಕೊಲ್ಲುವುದು, ಬರ್ಬರವಾಗಿ. ಏನೂ ಯಾವ ಠಾಣೆಗಳಲ್ಲಿಯೂ ಅಪರಾಧದ ದೂರುಗಳಿಲ್ಲದ ಈ ಯುವಜನ ಕಾರ್ಯಕರ್ತರನ್ನು ಕೊಂದ ಕ್ರಮ ಬರ್ಬರ ಹತ್ಯೆ. ಹೀಗೆ ನಾಗರಿಕ ಕಾನೂನು, ಹಕ್ಕುಗಳನ್ನು 'ಶಂಕಿತ' ನಕ್ಸಲಿಯರ ಹೆಸರಿನಲ್ಲಿ ಗಾಳಿಗೆ ತೂರಿ ಕೊಂದು ಹಾಕಲಾಗಿದೆ.

ಇಂತಹ ಘನಂದಾರಿ ಕೃತ್ಯ ಎಸಗಲೆಂದು ಬಹಳ ದಿನಗಳ ತಯಾರಿಯೂ ಇದ್ದಂತೆ ಕಾಣುತ್ತದೆ. ಕಳೆದ 3-4 ತಿಂಗಳಿಂದ ಪತ್ರಿಕೆಗಳಲ್ಲಿ ನಕ್ಸಲಿಯರ ಬಗ್ಗೆ ರಾಗರಂಜಿತವಾಗಿ ಸುದ್ದಿ ಹಬ್ಬಿಸುತ್ತಲೇ ಬಂದದ್ದು ಇದಕ್ಕಾಗಿಯೇ ಎನಿಸುತ್ತದೆ. ಸಾರ್ವಜನಿಕರನ್ನು ತಪ್ಪುದಾರಿಗೆಳೆಯಲೇ ಎಂದಿರಬೇಕು ಎಂಬ ಭಾವನೆಯಲ್ಲಿ ಅರ್ಥವಿದೆ. ಆಂಧ್ರದ ಕ್ರೂರಿ ಚಂದ್ರಬಾಬು ನಾಯ್ಡು ಮಾದರಿ ಎನ್‌ಕೌಂಟರ್ ಎಂಬ ಹುಸಿ ಗುಂಡಿನ ಚಕಮಕಿ ನಾಟಕ ಹೊಸೆದಿರುವುದು ಅಲ್ಲಿನ ಘಟನೆಗಳನ್ನು ಗಮನಿಸಿದರೆ ಅರ್ಥವಾಗುತ್ತದೆ! ಇಲ್ಲಿ ಮುಖ್ಯಮಂತ್ರಿ ಕೃಷ್ಣರವರು ಒಂದು ಪ್ರಶ್ನೆಗೆ ಸ್ಪಷ್ಟನೆ ನೀಡಲೇಬೇಕು. ಉತ್ತರ ಹೇಳಲೇಬೇಕು. ಇಂತಹ ಬರ್ಬರ, ಅತಿರೇಕದ ವರ್ತನೆ ಯನ್ನು ತನ್ನ ಸರ್ಕಾರ ನೀತಿಯಾಗಿಯೇ ಅಂಗೀಕರಿಸಿದೆಯೇ? ಎಂದು.

ಆದ್ದರಿಂದ ಕೃಷ್ಣರ ಸರ್ಕಾರ ಈ ಘಟನೆ ಕುರಿತು ಆಳವಾದ ತನಿಖೆಗೆ ಆದೇಶಿಸಬೇಕು. ಇಂತಹ ಅತಿರೇಕಗಳನ್ನು ತಡೆಯಲೇಬೇಕು. ತಪ್ಪಿತಸ್ತರಿಗೆ ಶಿಕ್ಷೆ ಆಗಲೇಬೇಕು. ಈ ಅಪರಾಧ ಎಸಗಿತ ಕೂಡಲೇ 66 ಕೋಟಿ ರೂಪಾಯಿಗಳ ವಿಶೇಷ ಪ್ಯಾಕೇಜನ್ನು ಸರ್ಕಾರ ಪ್ರಕಟಿಸಿದೆ. ಎಂತಹ ನಾಚಿಕೆಗೇಡು, ಅಮಾನವೀಯ. ಹತ್ಯೆಯ ಕಾರಣಗಳನ್ನು ಮುಚ್ಚಿಕೊಳ್ಳಲು, ಸಮಸ್ಯೆಗಳಿಂದ ಭಾದಿತರ ಆಕ್ರೋಶಕ್ಕೆ ಆಮಿಷ ಒಡ್ಡಲು ಬಯಸಿದೆ ಸರ್ಕಾರ. ನೂರಾರು ವರುಷಗಳಿಂದ ವಾಸವಾಗಿರುವ ಆದಿವಾಸಿ-ಬುಡಕಟ್ಟು ಇತರೆ ಜನರನ್ನು ಒಕ್ಕಲೆಬ್ಬಿಸಲು,

ಪುಟ 4ಕ್ಕೆ

ವಿಧಾನ ಪರಿಷತ್ ಚುನಾವಣೆ: ಕಾಂಗ್ರೆಸ್ ಬಿಜೆಪಿ ಸೋಲಿಸಿ

ಡಿಸೆಂಬರ್ 1 ರಂದು ವಿಧಾನಪರಿಷತ್‌ನ ಕೆಲವು ಸ್ಥಾನಗಳಿಂದ ಚುನಾವಣೆ ನಡೆಯಲಿದೆ. ಜಿಲ್ಲಾ, ತಾಲ್ಲೂಕು, ಗ್ರಾಮ ಪಂಚಾಯತಿ, ಮುನಿಸಿಪಾಲಿಟಿ, ಪುರಸಭೆ ಮುಂತಾದ ಸ್ಥಳೀಯ ಸಂಸ್ಥೆಗಳ ಸದಸ್ಯರು ಈ ಚುನಾವಣೆಯಲ್ಲಿ ಮತದಾರರು. ಒಟ್ಟು ಖಾಲಿಯಾದ 25 ಸ್ಥಾನಗಳಿಗೆ ಆಯ್ಕೆ ಆಗಲಿದ್ದಾರೆ.

ಇದು ಮೇಲ್ಮನೆಗೆ ನಡೆಯಲಿರುವ ಚುನಾವಣೆಯಾದರೂ ರಾಜಕೀಯ ಸ್ಪೂರ್ತಿಯ ಪೈಪೋಟಿ ಸಹಜವೇ. ಇಂತಹ ಚುನಾವಣೆಗಳೂ ಕೂಡ ಪಕ್ಷಗಳ ಬಲಾಬಲಗಳ ಪ್ರತಿಫಲನವಾಗಲಿದ್ದು ಗೆಲುವಿಗಾಗಿ ಬಿರುಸಿನ ತಯಾರಿಗಳು ಕಾಣುತ್ತವೆ. ವಿಶೇಷವಾಗಿ ಇತರೆ ಚುನಾವಣೆಗಳಲ್ಲಿ ಕಾಣುವಂತಹ 'ಮತದಾರ'ರನ್ನು ಸೆಳೆಯಲು ಪಕ್ಷದ ನೆಲೆಯಲ್ಲದೇ ಹಣ, ಜಾತಿಗಳ, ಆಮಿಷದ ಪೈಪೋಟಿಗಳು ವಿಜೃಂಭಿಸಲಿವೆ.

ಈ ಚುನಾವಣೆಯಲ್ಲಿ ಪ್ರಧಾನವಾಗಿ ಸ್ಪರ್ಧೆ ಇರುವುದೇ ಕಾಂಗ್ರೆಸ್, ಜನತಾದಳ(ಎಸ್), ಎಐಪಿಜೆಡಿ ಕೆಲವು ಜಿಲ್ಲೆಗಳಲ್ಲಿ ಬಿಜೆಪಿ. ಬಿಜೆಪಿಯನ್ನು ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಮಣ್ಣು ಮುಕ್ಕಿಸಿದ್ದರೂ ಎಲ್ಲಾ ಕಡೆಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿ ತನ್ನ ಕೋಮುವಾದಿ 'ರಾಜಕೀಯವನ್ನು ಹರಡಲು ಶತಾಯಗತಾಯ ಯತ್ನಿಸಿದೆ.

ಕಳೆದ ನಾಲ್ಕು ವರುಷಗಳಿಂದಲೂ ಅಧಿಕಾರ ನಡೆಸುತ್ತಿರುವ ಕೃಷ್ಣರ ನೇತೃತ್ವದ ಕಾಂಗ್ರೆಸ್ ಸರ್ಕಾರ ಜನಸಾಮಾನ್ಯರ ಪ್ರಶ್ನೆಗಳನ್ನು ಬಗೆಹರಿಸಲು ಕಿಂಚಿತ್ತೂ ಯತ್ನಿಸದೆ ವಿಫಲವಾಗಿದೆ ಮಾತ್ರವಲ್ಲ, ಪರಿಸ್ಥಿತಿಯನ್ನು ಉಲ್ಬಣಗೊಳಿಸಿದೆ. ರೈತರು ಆತ್ಮಹತ್ಯೆಗೀಡಾಗುತ್ತಿದ್ದಾರೆ. ಕೃಷಿಕೂಲಿಕಾರರು ಹಸಿವಿನ ಸಾವು ಅನುಭವಿಸುತ್ತಿದ್ದಾರೆ. ಆರ್ಥಿಕವಾಗಿ - ಸಾಮಾಜಿಕವಾಗಿಯೂ ದಿವಾಳಿಯೆಬ್ಬಿಸಿದೆ. ವಿದೇಶಿ ಸಾಲದ ಗುಲಾಮನನ್ನಾಗಿಸಿದೆ. ಜನರ ಪಾಲಿಗೆ ಕಂಟಕವಾಗಿದೆ. ಇನ್ನೊಂದೆಡೆ ಕಾಂಗ್ರೆಸ್‌ಗೆ ತಾನೇ ಪರ್ಯಾಯವೆಂಬ ಹುಸಿ ಭ್ರಮೆ ಹುಟ್ಟಿಸಲು ಯತ್ನಿಸುತ್ತಿರುವ ಬಿಜೆಪಿ ಕೇಂದ್ರದ ದೇಶದ್ರೋಹಿ ನೀತಿಗಳು ರಾಜ್ಯ ಜನರನ್ನು ಬಲಿ ತೆಗೆದುಕೊಳ್ಳುತ್ತಿರುವಾಗ 'ವಾಜಪೇಯಿ ಸರ್ಕಾರದ ಸಾಧನೆಗಳ ಶಂಖ ಊದುತ್ತಾ ವಂಚಿಸುತ್ತಾ ಸಾಗಿದೆ, ಮಾತ್ರವಲ್ಲ ಆ ದುರ್ನೀತಿಗಳ ಅಪಾಯ ಮರೆಸಲು ಅಧಿಕಾರದ ಮೆಟ್ಟಿಲೇರಲು ಫ್ಯಾಸಿಸ್ಟ್ ಮಾದರಿಯ ಕೋಮು ಗಲಭೆ ಹುಟ್ಟುಹಾಕುತ್ತಾ ಸಮಾಜವನ್ನು, ದೇಶವನ್ನು ವಿಭಜಿಸಲು ಹೊರಟಿದೆ. ಹೀಗೆ ಕಾಂಗ್ರೆಸ್ ಮತ್ತು ಬಿಜೆಪಿಗಳನ್ನು ಸೋಲಿಸುವುದು ನಾಡಿನ ಹಿತದ ದೃಷ್ಟಿಯಲ್ಲಿ ಅತಿ ಮಹತ್ವದ್ದು.

ಇಂತಹ ಹಿನ್ನೆಲೆಯಲ್ಲಿ ಇವೆರಡಕ್ಕು ಪರ್ಯಾಯವನ್ನು ಬೆಂಬಲಿಸಿ ಬಲಗೊಳಿಸಬೇಕು. ಜನತಾದಳದ ಉಭಯ ಬಣಗಳ ವಿಲೀನದ ಶಕ್ತಿ ಮತ್ತು ಎಡಪಕ್ಷಗಳು ಒಂದು ಪರ್ಯಾಯ ತರಲು ಸಾಧ್ಯವಿದೆ. ಇಂತಹ ಯತ್ನದಲ್ಲಿ ಜನತಾದಳ(ಎಸ್)ಗೆ ಕಣ್ಣೋಟ - ಆಶಯ, ರಾಜಕೀಯ ದೃಷ್ಟಿ ಇದೆ. ಆದರೆ ಎಐಪಿಜೆಡಿ ಸನ್ನಿವೇಶದ ಗಂಭೀರತೆ ಪರಿಗಣಿಸದೇ, ಡೋಲಾಯಮಾನದ, ಹಲವು ಬಾರಿ ಅಪಾಯಕಾರಿ ನಿಲುಮೆ ಕೈಗೊಳ್ಳುತ್ತಿದೆ.

ಈ ಸಂದರ್ಭದಲ್ಲಿ ರಾಜ್ಯದಲ್ಲಿ ಕಾಂಗ್ರೆಸ್-ಬಿಜೆಪಿ ಸೋಲಿಸಿ ಧರ್ಮನಿರಪೇಕ್ಷಿತ ಮೂರನೇ ಪರ್ಯಾಯ ರೂಪಿಸಲು ಜನತಾದಳ(ಎಸ್)ಗೆ ಎಲ್ಲಾ ಜಿಲ್ಲೆಗಳಲ್ಲಿಯೂ ಬೆಂಬಲಿಸಬೇಕಿದೆ. ಗೆಲುವಿಗೆ ಶ್ರಮಿಸಬೇಕಿದೆ.

ಜನತಾದಳ(ಎಸ್) ಗೆ ಸಿ.ಪಿ.ಐ(ಎಂ) ಬೆಂಬಲ

ಸ್ಥಳೀಯ ಸಂಸ್ಥೆಗಳಿಂದ ರಾಜ್ಯ ವಿಧಾನ ಪರಿಷತ್ತಿಗೆ ಡಿಸೆಂಬರ್ 1,2003 ರಂದು ನಡೆಯುವ ಚುನಾವಣೆಗಳಲ್ಲಿ ಜನತಾದಳ(ಜಾತ್ಯತೀತ) ಪಕ್ಷದ ಅಭ್ಯರ್ಥಿಗಳಿಗೆ ಬೆಂಬಲಿಸಲು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ನಿರ್ಧರಿಸಿದೆ.

ಕೋಮುವಾದಿ ಬಿಜೆಪಿ, ಜನವಿರೋಧಿ ಕಾಂಗ್ರೆಸ್‌ಗಳಿಗೆ ಪರ್ಯಾಯವಾಗಿ ರಾಜ್ಯದಲ್ಲಿ ಜಾತ್ಯತೀತ ಶಕ್ತಿಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಮುಂಬರುವ ವಿಧಾನ ಪರಿಷತ್ತಿನ ಚುನಾವಣೆಯಲ್ಲಿ ಜನತಾದಳ(ಎಸ್)ನ ಅಭ್ಯರ್ಥಿಗಳಿಗೆ ಬೆಂಬಲ ನೀಡಲು ಸಿ.ಪಿ.ಐ.(ಎಂ) ನಿರ್ಣಯಿಸಿದೆ.

ರಾಜ್ಯದಲ್ಲಿ ಈ ದಿಕ್ಕಿನಲ್ಲಿ ಬದಲಾವಣೆ ಬಯಸುವ ಎಲ್ಲಾ ಶಕ್ತಿಗಳು ಸಹ ಜನತಾದಳ(ಎಸ್)ನ್ನು ಬೆಂಬಲಿಸಬೇಕೆಂದು ಕೋರಿದೆ.

ಯಾವುದೇ ಹೆಸರಿನ ದತ್ತಜಯಂತಿ ಕೂಡದು

ಸೌಹಾರ್ದತೆಯ ಸಂಕೇತವಾದ ಪ್ರಶಾಂತ ನಿಸರ್ಗ ಪ್ರದೇಶದಲ್ಲೀಗ ಮತ್ತೇ ದ್ವೇಷದ ದಳ್ಳುರಿ ಕೆನ್ನಾಲಿಗೆ ಚಾಚುತ್ತಿದೆ. ಕರ್ನಾಟಕದಲ್ಲಿರುವ ಕೋಮು ಸೌಹಾರ್ದತೆಯ ಸಂಕೇತ ಗಳಲ್ಲೊಂದಾಗಿರುವ ಹಿಂದೂ-ಮುಸ್ಲಿಂ ಜನರು ಒಟ್ಟಾಗಿ ಪೂಜಿಸುವ ಕೇಂದ್ರಗಳನ್ನು ನಾಶಗೊಳಿಸದೇ ವೈಧಿಕಶಾಹಿ, ಫ್ಯಾಸಿಸ್ಟ್ ಸ್ವರೂಪದ ಹಿಂದುತ್ವದ ಅಜೆಂಡಾವನ್ನು ಜಾರಿಗೊಳಿಸುವುದು ಕಷ್ಟವೆಂದು ಬಗೆದು ಅಂತಹ ಶರಣರ, ಸೂಫಿ-ಸಂತರ ಶ್ರದ್ಧಾಕೇಂದ್ರಗಳನ್ನು ವಿಧ್ವಂಸಗೊಳಿಸಲು ಕಾರ್ಯಸೂಚಿ ಇಟ್ಟುಕೊಂಡು ಹೊರಟಿದೆ ಸಂಘ ಪರಿವಾರ. ಅದರ ಆಕ್ರಮಣವೀಗ ಬಾಬಾಬುಡನ್ ಸ್ವಾಮಿ ದತ್ತ ಪೀಠದ ದರ್ಗಾದತ್ತ ಕೇಂದ್ರೀಕೃತ ವಾಗಿದೆ. ಹೀಗಾಗಿ ಇಲ್ಲದ ವಿವಾದಗಳನ್ನೆತ್ತಿ ಸತತವಾಗಿ ಘರ್ಷಣೆ, ದ್ವೇಷ, ಉದ್ರಿಕ್ತತೆ ಹುಟ್ಟು ಹಾಕಲಾಗುತ್ತಿದೆ. ಅಂತಹದ್ದರಲ್ಲಿ ಈ ದತ್ತಮಾಲೆ, ದತ್ತ ಜಯಂತಿ ಎಂಬ ಸಲ್ಲದ ಆಚರಣೆಗಳು. ಈ ವರುಷವೂ ದತ್ತ ಜಯಂತಿ ಆಚರಿಸಲು ಡಿಸೆಂಬರ್ 6 ರಿಂದ 8 ರವರೆಗೆ ನಿಗದಿಗೊಳಿಸಿದೆ.

ಈ ದತ್ತಜಯಂತಿ ಎಂಬುದು ಹಿಂದಿನ ಅನೇಕ ಶತಮಾನಗಳಲ್ಲಿಯೂ ಇಲ್ಲದ ಹೊಸ ಆಚರಣೆ. ಈಚೆಗೆ ಈ ಖಾವೀಪಡೆ ತನ್ನ ವಿದ್ವೇಷದ ರಾಜಕಾರಣಕ್ಕೆ ಈ ಜಯಂತಿಯನ್ನು ಶೋಧಿಸಿದೆ. ನಾಲ್ಕು ವರುಷಗಳಿಂದ ಮಾಲೆ ಹಾಕುವುದು, ನಂತರದ ಒಂದು ತಿಂಗಳ ಬಳಿಕ ದತ್ತ ಜಯಂತಿ ಆಚರಿಸುತ್ತಿದೆ. ಇದು ಬಾಬಾ ಬುಡನ್‌ಗಿರಿಯ ಪರಂಪರೆಯಲ್ಲಿಯೇ ಇಲ್ಲದ್ದು.

ಅಲ್ಲಿರುವ ಆಚರಣೆ ಒಂದೇ. ಅದು ವರುಷಕ್ಕೊಮ್ಮೆ ಮಾರ್ಚ್ ತಿಂಗಳಲ್ಲಿ ನಡೆವ 'ಉರುಸ್'. ಈ ಉರುಸ್‌ಗೆ ಚಿಕ್ಕಮಗಳೂರು ಹಾಗೂ ರಾಜ್ಯದ ಅನೇಕ ಜಿಲ್ಲೆಗಳಿಂದ ಸಾವಿರಾರು ಭಕ್ತರು ಬರುತ್ತಾರೆ. ದರುಶನ ಮಾಡುತ್ತಾರೆ. ಹರಕೆ ಕೊಟ್ಟು ಹೋಗುತ್ತಾರೆ. ಹಿಂದೂ-ಮುಸ್ಲಿಂ ಮುಂತಾದ ಎಲ್ಲಾ ಧರ್ಮಿಯರು ಹಲವು ಜಾತಿಗಳಿಗೆ ಸೇರಿದವರು. ಆದರೆ ಈ ದತ್ತ ಜಯಂತಿ ಹಿಂದೂಗಳ ಪೂಜಾ ಹಕ್ಕು ಸ್ಥಾಪಿಸಲು ಖಾವೀಪಡೆ ಹೇಳುತ್ತದೆ. ಹಿಂದೂಗಳಿಗೆ ಅಲ್ಲಿನ ಪೂಜೆಯ ಅವಕಾಶ-ಹಕ್ಕು ಅಭಾದಿತವಾಗಿದೆ. ಹೀಗಿರುವಾಗ ಸಂಘ ಪರಿವಾರದ ವಿಶೇಷ ಹಕ್ಕಿನ ಕೇಳಿಕೆ ಅರ್ಥಹೀನ. ಈ ಖಾವೀಪಡೆ ಪೂಜಾ ಹಕ್ಕಿನ ಅವಕಾಶ ಹೂಡಿಕೆಯಲ್ಲಿ ಕೋಮುಸೌಹಾರ್ದದ ಉರುಸ್ ಪರಂಪರೆಯನ್ನು ನಾಶಗೊಳಿಸಿ, ವಿಭಜನೆ ತರಲು ಯತ್ನಿಸುತ್ತಿದ್ದರೆ, ದತ್ತ ವಿಗ್ರಹ ಸ್ಥಾಪನೆ, ಹಿಂದೂ ಪೂಜಾರಿ ನೇಮಕ, ಎಲ್ಲರಿಗೂ ಅನ್ವಯಿಸುವಂತಹ ಸಜ್ಜದ್ ನನ್ನು ತೊಲಗಿಸಲು ದತ್ತ ಯಜ್ಞದಂತಹ ಕ್ರಮಗಳನ್ನು ಸ್ಥಾಪಿಸಿ ಅದನ್ನು ಒಂದು ಧರ್ಮೀಯರಿಗೆ - ಕೋಮಿಗೆ ಸೀಮಿತ ಗೊಳಿಸಲು ಮುಂದಾಗಿರುವುದು. ಅಂತಿಮವಾಗಿ ಈ ದತ್ತಜಯಂತಿ ಹೆಸರಿನಲ್ಲಿ ಸಾವಿರಾರು ಜನರನ್ನು ಸಂಘಟಿಸಿ ಅಯೋಧ್ಯಯಲ್ಲಿ ಮಾಡಿದಂತೆ 'ದರ್ಗಾ-ಪೀಠ'ವನ್ನು ನಾಶಗೊಳಿಸುವುದು ಅವರ ಗುರಿ.

ಈ ದೀರ್ಘಕಾಲದ ದುಷ್ಟ ಅಜೆಂಡಾವನ್ನು ಎಲ್ಲರೂ ಅರಿಯುವುದು ಮತ್ತು ಮುಖ್ಯವಾಗಿ ಅದರ ವಾಹಕವಾಗಿರುವ ದತ್ತ ಜಯಂತಿ ಎಂಬ ಹಿಂದೆಂದೂ ಇಲ್ಲದ ಆಚರಣೆಯನ್ನು ನಿರ್ಬಂಧಿಸುವುದು ಅತ್ಯಗತ್ಯ. ಈಗಿರುವ ಬಾಬಾಬುಡನ್‌ಗಿರಿ ದರ್ಗ-ಪೀಠ ಗುಹೆಯಲ್ಲಿ ಏನಾದರೂ ಬದಲಾವಣೆ ಮಾಡುವುದು, 1993 ರ ಕೇಂದ್ರ ಕಾನೂನಿಗೆ (ಪೂಜಾ ಸ್ಥಳಗಳನ್ನು ಯಥಾಸ್ಥಿತಿ ಕಾಯುವ ನಿರ್ದೇಶನದ ಕಾಯ್ದೆ) ವಿರುದ್ಧವಾದುದು.

ಈ ಒಟ್ಟು ಹಿನ್ನೆಲೆಯಲ್ಲಿ 'ಉರುಸ್' ಒಂದೇ ನಡೆಯಬೇಕಾದ ಆಚರಣೆ. ಅದಕ್ಕೆ ಮಾತ್ರ ಸರ್ಕಾರ ಅವಕಾಶ ಕೊಡಬೇಕು. ನಿತ್ಯಜೀವನದಲ್ಲಿ ದರ್ಶನಕ್ಕೆ ಅಡ್ಡಿಯೇನಿಲ್ಲ. ಆದ್ದರಿಂದ ಈ ದತ್ತಜಯಂತಿಯ ಆಚರಣೆಯನ್ನು ಸರ್ಕಾರ ನಿರ್ಬಂಧಿಸಬೇಕು. (ಇಂತಹ ಸ್ಪಷ್ಟ ನಿಲುವು ತಳೆಯದೇ ಕೋಮುವಾದಿಗಳ ಓಲೈಕೆಗೆ ಮುಂದಾಗಿದೆ). ಯಾವ ಜಾತ್ಯತೀತ, ಪ್ರಗತಿಪರರೂ ಅಂತಹ ಯಾವುದೇ, ಸ್ವರೂಪದ, ಯಾವುದೇ ಹೆಸರಿನಲ್ಲಿ 'ದತ್ತಜಯಂತಿ' ಮಾಡುವುದು ಸರಿಯಲ್ಲ, ಸಲ್ಲದು.

ಸಿರುಗುಪ್ಪ ತಾಲೂಕು ಕೃಷಿ ಕೂಲಿಕಾರರ ಪ್ರಥಮ ಸಮ್ಮೇಳನ

ನೆಲ್ಲು ಕೊಯ್ಯುವ ಯಂತ್ರ ತಡೆಯಲು ನಿರ್ಧಾರ

ನೆಲ್ಲು (ಭತ್ತ) ಕೊಯ್ಯುವ ಸಮಯ ಹತ್ತಿರವಾಗುತ್ತಿದ್ದು ಶ್ರೀಮಂತ ಭೂಮಾಲೀಕರು ಕೂಲಿಕಾರರಿಗೆ ಕೆಲಸ ಕೊಡುವುದನ್ನು ತಪ್ಪಿಸಲು ನೆಲ್ಲು ಕೊಯ್ಯುವ ಯಂತ್ರಗಳನ್ನು ಬಾಡಿಗೆಗೆ ತಂದು ಬಳಸುವುದನ್ನು ತಡೆಯಲು ಕೂಲಿಕಾರರೆಲ್ಲರು ಒಂದಾಗಬೇಕೆಂದು ನವಂಬರ್ 7 ಮತ್ತು 8 ರಂದು ಸಿರುಗುಪ್ಪದಲ್ಲಿ ನಡೆದ ತಾಲೂಕು ಕೃಷಿ ಕೂಲಿಕಾರರ ಪ್ರಥಮ ಸಮ್ಮೇಳನವು ಕರೆನೀಡಿದೆ. ಸಿರುಗುಪ್ಪ ತಾಲೂಕಿನ ಬಹಳಷ್ಟು ಪ್ರದೇಶ ನೀರಾವರಿಗೆ ಒಳಪಟ್ಟಿದ್ದರೂ ಕಳೆದ ಎರಡೂ ಮೂರು ವರ್ಷಗಳ ಭೀಕರ ಬರ ಈ ಪ್ರದೇಶವನ್ನೂ ತಟ್ಟದೆ ಇರಲಿಲ್ಲ. ಈ ವರ್ಷ ಕಾಲುವೆಗಳಲ್ಲಿ ನೀರು ಹರಿಯಲು ಆರಂಭವಾದಾಗ ಭತ್ತದ ಮೊದಲ ಬೆಳೆಯ ಅವಧಿ ಮುಗಿದಿತ್ತು. ಮಾತ್ರವಲ್ಲ ಎರಡನೇ ಬೆಳೆಗೂ ಸಾಕಷ್ಟು ವಿಳಂಬವಾಗಿತ್ತು. ತಡವಾಗಿಯಾದರೂ ದೊರೆತ ನೀರಿನಿಂದ ರೈತರು ಭತ್ತ ಬೆಳೆದಿದ್ದಾರೆ. ಬೆಳೆ ಚೆನ್ನಾಗಿಯೇ ಇದೆ. ಆದರೆ ಕೊಯ್ಲು ಸಮಿಪಿಸುತ್ತಿದ್ದಂತೆ ಈ ಭಾಗದ ಕೃಷಿ ಕೂಲಿಕಾರರು ಹರ್ಷಚಿತ್ತರಾಗುವ ಬದಲು ಆತಂಕಕ್ಕೆ ಒಳಗಾಗಿದ್ದಾರೆ. ಪಂಜಾಬನಿಂದ ಹಾಗೂ ಆಂಧ್ರದಿಂದ ಬರುವ ಕೊಯ್ಲು ಯಂತ್ರಗಳು ತಮ್ಮ ಬದುಕನ್ನು ಕಿತ್ತುಕೊಳ್ಳಲು ಬರಲಿರುವುದು ಅವರ ಆತಂಕಕ್ಕೆ ಕಾರಣವಾಗಿದೆ.

ಬಹಿರಂಗ ಎಚ್ಚರಿಕೆ

ಕಳೆದ ಐದಾರು ವರ್ಷಗಳಿಂದ ಸಂಘಟಿತರಾಗುತ್ತಾ ತಮ್ಮ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಾ ಬಂದಿದ್ದ ಬಳ್ಳಾರಿ ಜಿಲ್ಲೆ ಸಿರುಗುಪ್ಪ ತಾಲೂಕಿನ ಕೃಷಿಕೂಲಿಕಾರರು ತಮ್ಮ ಸಂಘಟನೆ ಮತ್ತು ಚಳುವಳಿಯನ್ನು ಇನ್ನಷ್ಟು ಪರಿಣಾಮಕಾರಿಯಾಗಿಸುವುದು ಹೇಗೆ ಎಂದು ಚರ್ಚಿಸುವ ಉದ್ದೇಶದಿಂದ ತಾಲೂಕ ಮಟ್ಟದ ಪ್ರಥಮ ಸಮ್ಮೇಳನವನ್ನು ಹಮ್ಮಿಕೊಂಡಿದ್ದರು. ಸಮ್ಮೇಳನದ ಅಂಗವಾಗಿ ಮೆರವಣಿಗೆ ಹಾಗೂ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ರಾರಾವಿ, ಮುದ್ದಟನೂರು, ಕೆ. ಬೆಳಗಲಿ, ಕೆ. ಸೂಗೂರು, ಶಿರಿಗೇರಿ, ತೆಕ್ಕಲಕೋಟೆ, ಬೂದುಗುಪ್ಪ, ಕರೂರು, ತಾಳೂರು, ಬಲಕುಂದಿ, ಕೆಂಚನಗುಡ್ಡ, ದೇಶನೂರ ಮೊದಲಾದ ಗ್ರಾಮಗಳಿಂದ ಟ್ರಾಕ್ಟರುಗಳಿಗೆ ಬ್ಯಾನರುಗಳನ್ನು ಕಟ್ಟಿಕೊಂಡು ಬಂದಿದ್ದ ಐದಾರು ನೂರು ಜನ ಕೂಲಿಕಾರರು ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿ ತಾಲೂಕ ತಹಶಿಲ್ದಾರರ ಕಛೇರಿ ಎದುರು ಬಂದು ಸೇರಿದರು. ಪೂರ್ವಸೂಚನೆ ನೀಡಿದ್ದಾಗ್ಯೂ ತಹಶಿಲ್ದಾರರು ಕಛೇರಿಯಲ್ಲಿ ಲಭ್ಯವಿಲ್ಲದಿದ್ದುದು ಮೆರವಣಿಗೆಯಲ್ಲಿ ಬಂದಿದ್ದ ಕೂಲಿಕಾರರನ್ನು ಕೆರಳಿಸಿತು. ತಹಶಿಲ್ದಾರರು ಸ್ಥಳಕ್ಕೆ ಬರುವವರೆಗೂ ಅಲ್ಲಿಯೇ ಧರಣಿ ಸತ್ಯಾಗ್ರಹ ಹೂಡಲು ನಿರ್ಧರಿಸಿದ ಕೂಲಿಕಾರರು ತಮ್ಮ ಪ್ರತಿಭಟನಾ ಸಭೆಯನ್ನು ಮುಂದುವರೆಸಿದರು. ಕೂಲಿಕಾರ ಸಂಘದ ಮುಖಂಡರುಗಳಾದ ಈ. ಆರ್. ಯಲ್ಲಪ್ಪ ಮತ್ತು ಎನ್. ಕುಮಾರ್ ಸತ್ಯಾಗ್ರಹಗಳನ್ನು ಉದ್ದೇಶಿಸಿ ಮಾತನಾಡಿದರು. ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ಕಾಮ್ರೆಡ್ ನಿತ್ಯಾನಂದಸ್ವಾಮಿ ಅವರು ಮಾತನಾಡುತ್ತಾ ಈ ಸಲ ನೆಲ್ಲು ಕೊಯ್ಯಲು ಬರುವ ಯಂತ್ರಗಳನ್ನು ಪ್ರತಿಯೊಂದು ಗ್ರಾಮದಲ್ಲಿಯೂ ತಡೆದು ವಾಪಸ್ ಕಳುಹಿಸಬೇಕು. ಎಂದು ಘೋಷಿಸಿದಾಗ ಅಲ್ಲಿ ನೆರೆದಿದ್ದ ಕೂಲಿಕಾರ ಮಹಿಳೆಯರು ಮತ್ತು ಪುರುಷರು ಜೋರಾಗಿ ಚಪ್ಪಾಳೆತಟ್ಟಿ ತಮ್ಮ ಒಪ್ಪಿಗೆಯನ್ನು ಸೂಚಿಸಿದರು.

ಅಷ್ಟೊತ್ತಿಗೆ ತಹಶಿಲ್ದಾರರು ಸ್ಥಳಕ್ಕೆ ಬಂದು ಪ್ರತಿಭಟನಾಕಾರರಿಂದ ಮನವಿಯನ್ನು ಸ್ವೀಕರಿಸಿದರು. ತಾಲೂಕಿನ ಪ್ರಮುಖ ರೈತರನ್ನು ಕರೆಯಿಸಿ, ಕೆಲಸವಿಲ್ಲದೆ ಕಂಗಾಲಾಗಿರುವ ಕೂಲಿಕಾರರಿಗೆ ಕೆಲಸ ಕೊಡುವುದನ್ನು ಬಿಟ್ಟು ಯಂತ್ರಗಳನ್ನು ಬಳಸಿ ಕೊಯ್ಲು ಕೆಲಸ ಮಾಡದಂತೆ ಎಚ್ಚರಿಕೆ ನೀಡಬೇಕೆಂದು ಮನವಿಯಲ್ಲಿ ಒತ್ತಾಯಿಸಲಾಗಿತ್ತು. ಮನವಿಯನ್ನು ಸ್ವೀಕರಿಸಿದ ತಹಶಿಲ್ದಾರರು ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಿ ರೈತರು ಯಂತ್ರಗಳನ್ನು ಬಳಸುವುದನ್ನು ತಡೆಯಲು ಕ್ರಮಕೈಗೊಳ್ಳುವುದಾಗಿ ಭರವಸೆ ನೀಡಿದರು.

ಹಣೆಬರಹ ಕಾರಣವಲ್ಲ

ರಾಜ್ಯದಲ್ಲಿ ಸುಮಾರು ಒಂದು ಕೋಟಿಯಷ್ಟಾಗುವ ಕೃಷಿ ಕೂಲಿಕಾರರ ಅಮಾನವೀಯ ಬದುಕಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಧೋರಣೆಗಳು ಕಾರಣವೇ ಹೊರತು ಅವರ ಹಣೆಬರಹ ಕಾರಣವಲ್ಲ" ಎಂದು ಎರಡನೇ ದಿನ ಬೆಳಿಗ್ಗೆ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಕಾಮ್ರೇಡ್ ನಿತ್ಯಾನಂದಸ್ವಾಮಿ ಹೇಳಿದರು. "ಕೇಂದ್ರ ಸರ್ಕಾರದ ಉದಾರೀಕರಣದ ನೀತಿಯು ಫಲವಾಗಿ ದೇಶದ ಪರಂಪರಾಗತ ಕೃಷಿಯು ಬಿಕ್ಕಟ್ಟಿಗೆ ಒಳಗಾಗಿ ಒಂದುಕಡೆ ರೈತರು ದಿವಾಳಿಯಾಗುತ್ತಿದ್ದರೆ ಇನ್ನೊಂದುಕಡೆ ರೈತರನ್ನೇ ಅವಲಂಬಿಸಿರುವ ಕೃಷಿಕೂಲಿಕಾರರು ಉಪವಾಸ ವನವಾಸ ಅನುಭವಿಸುತ್ತಿದ್ದಾರೆ. ಬಡ ರೈತರು ಭೂಮಿ ಕಳೆದುಕೊಂಡು ಕೂಲಿಕಾರರಾಗುತ್ತಿದ್ದಾರೆ. ಗೇಣಿದಾರರು ಒಕ್ಕಲೆಬ್ಬಿಸಲ್ಪಟ್ಟು ಕೂಲಿಕಾರರ ಸಂಖ್ಯೆಯನ್ನು ಬೆಳೆಸುತ್ತಿದ್ದಾರೆ. ಮುಚ್ಚಿದ ಕಾರ್ಖಾನೆ ಗಳ ಕಾರ್ಮಿಕರು ಸಹ ಹಳ್ಳಿಗಳಿಗೆ ಹಿಂತಿರುಗಿ ಕೂಲಿಕಾರರ ದಂಡು ಸೇರುತ್ತಿದ್ದಾರೆ. ಕೂಲಿಕಾರರ ಸಂಖ್ಯೆ ಹೆಚ್ಚಾದಂತೆ ಕೆಲಸದ ದಿನಗಳು ಕಡಿಮೆ ಯಾಗುತ್ತವೆ. ಸಿಗುವ ಕೂಲಿ ಕಡಿಮೆಯಾಗುತ್ತದೆ. ಇದರ ಜೊತೆಯಲ್ಲಿ ಬೇತಾಳದಂತೆ ಬೆನ್ನುಹತ್ತಿದ ಬರ, ಕೂಲಿಕಾರರು ತಮ್ಮ ಮನೆಮಾರು ತೊರೆ ಯುವಂತೆ ಮಾಡಿದೆ. ವಲಸೆ ಹೋದಲ್ಲಿಯೂ ಕೆಲಸಸಿಗದೆ ನರಳುವಂತಾಗಿದೆ. ಇಂತಹ ಸಂಕಷ್ಟದ ಸಮಯದಲ್ಲಿ ಸರ್ಕಾರ ಅವರ ರೇಷನ್ ಕಾರ್ಡುಗಳನ್ನು ಕಿತ್ತುಕೊಳ್ಳಲು ಹೊರಟಿದೆ. ಭಾರತ ಸರ್ಕಾರದ ಉಗ್ರಾಣಗಳಲ್ಲಿ ಲಕ್ಷಗಟ್ಟಲೆ ಟನ್ ಆಹಾರ ಧಾನ್ಯ ಇಲಿಹೆಗ್ಗಣಗಳ ಪಾಲಗುತ್ತಿರುವಾಗ ಇತ್ತ ಬಡ ಕೂಲಿಕಾರರು ಹಸಿವೆಯನ್ನು ತಾಳಲಾರದೆ ಆತ್ಮಹತ್ಯೆ ಮಾಡಿಕೊಳ್ಳುವಂತಾಗಿದೆ. ಆದರೆ ರೈತರ ಹಾಗೂ ಕೂಲಿಕಾರರ ಸಮಸ್ಯೆಗಳಿಗೆ ಆತ್ಮಹತ್ಯೆ ಪರಿಹಾರವಾಗದು. ಸಂಘಟಿತ ಹೋರಾಟಗಳಿಂದ ಸರ್ಕಾರಗಳ ಧೋರಣೆಗಳನ್ನು ಬದಲಾಯಿಸಲು ಸಾಧ್ಯವಿದೆ. ಸರ್ಕಾರಿಗಳು ತಮ್ಮ ಜನವಿರೋಧಿ ದೋರಣೆಗಳನ್ನು ಬದಲಾಯಿಸದಿದ್ದರೆ ಅಂತಹ ಸರ್ಕಾರಗಳನ್ನೇ ಬದಲಾಯಿಸುವುದು ಸಾಧ್ಯವಾಗಬೇಕು" ಎಂದರು. ಇದಕ್ಕೂ ಮೊದಲು ಅಖಿಲ ಭಾರತ ಕೃಷಿಕೂಲಿಕಾರರ ಸಂಘದ ಧ್ವಜವನ್ನು ಕಾಮ್ರೇಡ್ ಆರ್. ಯಲ್ಲಪ್ಪ ಆರೋಹಣ ಮಾಡಿದರು. ಸಮ್ಮೇಳನದ ಕಲಾಪಗಳನ್ನು ನಡೆಸಲು ಸಂಗಾತಿಗಳಾದ ಹೊಸೂರಪ್ಪ ಯಲ್ಲಪ್ಪ ಮತ್ತು ಶರಣಮ್ಮ ಅವರನ್ನು ಒಳಗೊಂಡ ಅಧ್ಯಕ್ಷೀಯ ಮಂಡಳಿಯನ್ನು ಆಯ್ಕೆಮಾಡಲಾಯಿತು.

ಗ್ರಾಮ ಘಟಕಗಳನ್ನು ಬಲಪಡಿಸಲು ನಿರ್ಧಾರ

ತಾಲೂಕಿನ ಕೃಷಿ ಕೂಲಿಕಾರರ ಪರಿಸ್ಥಿತಿ ಹಾಗೂ ಕಳೆದ ನಾಲ್ಕಾರು ವರ್ಷಗಳಿಂದ ನಡೆಸಲಾದ ಚಟುವಟಿಕೆಗಳ ವರದಿಯನ್ನು ಕಾಮ್ರೆಡ್ ಎನ್. ಕುಮಾರ್ ಮಂಡಿಸಿದರು. 7 ಜನ ಮಹಿಳೆಯರೂ ಸೇರಿದಂತೆ ಒಟ್ಟು 22 ಜನ ಪ್ರತಿನಿಧಿಗಳು ವರದಿಯ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ್ದರು.

ಮುಂದಿನ ಸಮ್ಮೇಳನದ ಒಳಗಾಗಿ ತಾಲೂಕಿನ ಎಲ್ಲ 84 ಹಳ್ಳಿಗಳಿಗೂ ಕೂಲಿಕಾರರ ಸಂಘದ ಸದಸ್ಯತ್ವವನ್ನು ವಿಸ್ತರಿಸಿ ಗ್ರಾಮ ಘಟಕಗಳನ್ನು ಬಲ ಪಡಿಸಬೇಕೆಂದು ನಿರ್ಧರಿಸುವುದರೊಂದಿಗೆ ವರದಿಯನ್ನು ಅಂಗೀಕರಿಸಲಾಯಿತು.

ಕೃಷಿ ಕೆಲಸಗಳಲ್ಲಿ ಮತ್ತು ಸರ್ಕಾರಿ ಕಾಮಗಾರಿಗಳಲ್ಲಿ ಯಂತ್ರಗಳ ಬಳಕೆಯನ್ನು ನಿಷೇಧಿಸಬೇಕು, ಎಲ್ಲ ಕೂಲಿಕಾರ ಕುಟುಂಬಗಳಿಗೆ ಹಳದಿ ಪಡಿತರ ಕಾರ್ಡುಗಳನ್ನು ವಿತರಣೆಮಾಡಿ ರೂ. ರೂ. 2.50 ದರದಲ್ಲಿ ಅಕ್ಕಿಯನ್ನು ಪೂರೈಕೆ ಮಾಡಬೇಕು. ಹಸಿವಿನ ಸಾವು ಪ್ರಕರಣಗಳಿಗೂ ಒಂದು ಲಕ್ಷ ರೂಪಾಯಿ ಪರಿಹಾರ ನೀಡಬೇಕು, ಸರ್ಕಾರಿ ಭೂಮಿ ಅತಿಕ್ರಮಣ ಪ್ರಕರಣಗಳನ್ನು ಸಕ್ರಮಗೊಳಿಸಿ ಪಟ್ಟಾ ನೀಡಬೇಕು ಎಂದು ಒತ್ತಾಯಿಸುವ ನಿರ್ಣಯಗಳನ್ನು ಅಂಗೀಕರಿಸ ಲಾಯಿತು. ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಕಾಮ್ರೆಡ್ ಯು. ಬಸವರಾಜ ಅವರು ಸಮ್ಮೇಳನಕ್ಕೆ ಶುಭ ಕೋರಿ ಮಾತನಾಡುತ್ತಾ ಕೂಲಿಕಾರರ ಹೋರಾಟಕ್ಕೆ ರೈತರ ಬೆಂಬಲವನ್ನು ಘೋಷಿಸಿದರು. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ತಾಲೂಕ ಸಮಿತಿಯನ್ನು ಆಯ್ಕೆ ಮಾಡುವುದರೊಂದಿಗೆ ಸಮ್ಮೇಳನ ಮುಕ್ತಾಯವಾಯಿತು. ಸಮಿತಿ ನೂತನ ಅಧ್ಯಕ್ಷರಾಗಿ ಈ.ಆರ್.ಯಲ್ಲಪ್ಪ, ಉಪಾಧ್ಯಕ್ಷರುಗಳಾಗಿ ಹೊಸೂರಪ, ಉರುಕುಂದಪ್ಪ, ಜಯರಾಂ, ಕಾಳಪ್ಪ, ಕಾರ್ಯದರ್ಶಿಯಾಗಿ ಎನ್. ಕುಮಾರ್, ಸಹಕಾರ್ಯದರ್ಶಿಗಳಾಗಿ ಸೋಮಪ್ಪ, ಗಾದಿಲಿಂಗಪ್ಪ, ಸುರೇಶ್ ಮತ್ತು 4 ಮಹಿಳೆಯರನ್ನು ಒಳಗೊಂಡಂತೆ ಒಟ್ಟು 13 ಸದಸ್ಯರ ಸಮಿತಿಯನ್ನು ಅಯ್ಕೆಮಾಡಲಾಯಿತು.

■ ಎನ್. ಕುಮಾರ್

ಭಾಗ್ಯಜ್ಯೋತಿ ವಿದ್ಯುತ್ ಬಳಕೆದಾರರಿಂದ ರಾಮದುರ್ಗ ತಹಶೀಲ ಕಛೇರಿ ಮುತ್ತಿಗೆ

ಭಾಗ್ಯಜ್ಯೋತಿ ಸಂಪರ್ಕಗಳಿಗೆ ಬಲವಂತವಾಗಿ ಮೀಟರ್ ಅಳವಡಿಸಿ ವಿಧಿಸಿಲಾದ ಸಾವಿರಾರು ರೂಪಾಯಿ ಬಾಕಿ ಬಿಲ್‌ಗಳನ್ನು ಮನ್ನಾಮಾಡ ಬೇಕೆಂದು ಒತ್ತಾಯಿಸಿ ಭಾಗ್ಯಜ್ಯೋತಿ ವಿದ್ಯುತ್ ಬಳಕೆದಾರರು ಬೆಳಗಾಂವ ಜಿಲ್ಲೆ ರಾಮದುರ್ಗ ತಾಲೂಕ ತಹಶಿಲ್ದಾರರ ಕಛೇರಿಗೆ ಮುತ್ತಿಗೆ ಹಾಕಿ ಬಾರೀ ಪ್ರದರ್ಶನ ನಡೆಸಿದರು. "ಧಿಕ್ಕಾರ, ಧಿಕ್ಕಾರ, ಸರ್ಕಾರಕ್ಕೆ ಧಿಕ್ಕಾರ" ಅವರ ಒಡಲಾಳದಿಂದ ಸಿಡಿದು ಬರುತ್ತಿದ್ದ ಈ ಘೋಷಣೆ ತಹಶಿಲ್ದಾರರ ಕಛೇರಿಯ ಕೋಣೆ ಕೋಣೆಯಲ್ಲಿ ಪ್ರತಿಧ್ವನಿಸುತ್ತಿತ್ತು. ಮೂರು ನಾಲ್ಕು ವರ್ಷಗಳ ಬರದ ಭವಣೆಗೆ ಸಿಕ್ಕಿ ತತ್ತರಿಸಿದ ಜನಗಳು ! ಬೆಳೆ ಇಲ್ಲ, ಬೆಲೆ ಇಲ್ಲ, ಉದ್ಯೋಗ ಇಲ್ಲ, ಸಂಪಾದನೆ ಇಲ್ಲ, ಮನೆ ಎಂಬ ಗುಡಿಸಲಲ್ಲಿ ಮಿಣುಕುತ್ತಿದ್ದ ದೀಪವನ್ನೂ ಕಿತ್ತುಕೊಳ್ಳುವ ಸರ್ಕಾರದ ದೋರಣೆಯಿಂದ ಅವರು ರೋಸಿಹೋಗಿದ್ದರು.

"ನಿಮ್ಮಲ್ಲಿ ಕುಲ್ಕರ್ಣಿಯರು ಯಾರಾದರೂ ಇದ್ದರೆ ಕೈ ಎತ್ತಿ" ಎಂದರು ಸಿಪಿಐ(ಎಂ) ಪಕ್ಷದ ದುರೀಣ ರಾದ ವಿ.ಪಿ. ಕುಲಕರ್ಣಿ ಎಲ್ಲೆಡೆ ಮೌನ ಆವರಿಸಿತು. ಪ್ರದರ್ಶನದಲ್ಲಿ ಪಾಲ್ಗೊಂಡವರೆಲ್ಲಾ ತಬ್ಬಿಬ್ಬಾದರು. "ನಿಮ್ಮಲ್ಲಿ ಯಾರಾದರೂ ಪಾಟೀಲರು ಇದ್ದರೆ ಕೈ ಎತ್ತಿ" ಎಂದರು ಕುಲಕರ್ಣಿ ಯವರು. ಯಾರೂ ಕೈ ಎತ್ತಲಿಲ್ಲ. "ಹೌದು, ನನಗೆ ಗೊತ್ತಿದೆ. ನಿಮ್ಮಲ್ಲಿಯಾರೂ ಬ್ರಾಹ್ಮಣರಿಲ್ಲ, ಲಿಂಗಾಯತರಿಲ್ಲ. ನೀವೆಲ್ಲರು ಕುರುಬರು, ತಳವಾರರು, ವಡ್ಡರು, ಲಮಾಣಿಗರು, ಹರಿಜನ ಗಿರಿಜನರಿದ್ದೀರಿ, ಕೆಳವರ್ಗ ಕೆಳಜಾತಿಯವರಿಗೆ ಆ ಸೌಲಭ್ಯ ಕೊಟ್ಟಿದ್ದೇವೆ, ಈ ಸೌಲಭ್ಯಕೊಟ್ಟಿದ್ದೇವೆ ಎಂದು ಕೊಚ್ಚಿಕೊಳ್ಳುವ ಕಾಂಗ್ರೆಸ್ ಸರ್ಕಾರವೇ ನಿಮಗೆ ಈಗ ಭಾಗ್ಯವೂ ಇಲ್ಲ.ಜ್ಯೋತಿಯೂ ಇಲ್ಲದಂತೆ ಮಾಡಲು ಹೊರಟಿದೆ." ಎಂದು ಕುಲಕರ್ಣಿಯವರು ವಿವರಿಸಿದಾಗ ಅವರೆಲ್ಲರು "ಹೌದೌದು" ಎಂದು ತಲೆದೂಗತೊಡಗಿದರು.

"ನಿಮ್ಮನ್ನು ಬೆಳಕಿನಿಂದ ಕತ್ತಲೆಗೆ ತಳ್ಳುವ ಪಿತೂರಿಯಲ್ಲಿ ಕೇಂದ್ರದ ವಾಜಪೇಯಿ ಸರ್ಕಾರದ್ದೂ ಪಾಲು ಇದೆ" ಎಂದು ಕೃಷಿಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ ಮಾತನಾಡಲು ಆರಂಭಿಸಿದಾಗ ಅವರೆಲ್ಲರೂ ಕಿವಿಗೊಟ್ಟು ಕೇಳತೊಡಗಿದರು. "ವಿದ್ಯುತ್ ರಂಗದ ಸುಧಾರಣೆಯ ಹೆಸರಿನಲ್ಲಿ ವಿದ್ಯುತ್ ಉತ್ಪಾದನೆ ಮತ್ತು ವಿತರಣೆಯನ್ನು ಲಾಭಕೋರ ಖಾಸಗಿ ಕಂಪೆನಿಗಳಿಗೆ ವಹಿಸಿಕೊಡಲು ಕೇಂದ್ರ ಬಿಜೆಪಿ ಸರ್ಕಾರ ನಿರ್ಧರಿಸಿದ್ದು ಖಾಸಗಿ ರಂಗದಿಂದ ದುಬಾರಿ ವಿದ್ಯುತ್ತನ್ನು ಪಡೆಯಲಾಗದೆ ಬಡವರು ಕತ್ತಲಲ್ಲಿ ಕಾಲಕಳೆಯುವಂತಾಗಲಿದೆ ಮಾತ್ರವಲ್ಲ ದೇಶದ ಕೈಗಾರಿಕೆ ಹಾಗೂ ಕೃಷಿಯ ಮೇಲೆಯೂ ಬಾರೀ ದುಷ್ಪರಿಣಾಮ ಬೀರಲಿದೆ" ಎಂದು ಅವರು ವಿವರಿಸಿದರು.

ಭಾಗ್ಯಜ್ಯೋತಿ ವಿದ್ಯುತ್ ಬಳಕೆದಾರರು ಹೋರಾಟ ಸಮಿತಿಗಳನ್ನು ರಚಿಸಿಕೊಂಡು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜನವಿರೋಧಿ ವಿದ್ಯುತ್ ನೀತಿಯ ವಿರುದ್ಧ ಹಂತ ಹಂತವಾಗಿ ಹೋರಾಟವನ್ನು ತೀವ್ರಗೊಳಿಸಬೇಕೆಂದು ಹೇಳಿದ ಅವರು ಗ್ರಾಮ ಗ್ರಾಮಗಳಲ್ಲಿ ಕೃಷಿ ಕೂಲಿಕಾರರ ಸಂಘವನ್ನು ಕಟ್ಟಿಕೊಳ್ಳಬೇಕೆಂದು ಕರೆನೀಡಿದರು.

ಅನಂತರ ತಹಶಿಲ್ದಾರರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿಯೊಂದನ್ನು ಸಲ್ಲಿಸಲಾಯಿತು. ಭಾಗ್ಯಜ್ಯೋತಿ ಸಂಪರ್ಕಗಳ ಬಾಕಿ ಬಿಲ್ಲುಗಳನ್ನು ಮಾರ್ಚ್ 2001ರ ಬದಲು ಕನಿಷ್ಠ ಮಾರ್ಚ್ 2004 ರ ವರೆಗಾದರೂ ಮನ್ನಾ ಮಾಡಬೇಕೆಂದು ಮನವಿಯಲ್ಲಿ ಒತ್ತಾಯಿಸಲಾಗಿದೆ. ಸ್ಥಳೀಯ ಹೆಸ್ಕಾಂ ಅಧಿಕಾರಿಯನ್ನು ಸ್ಥಳಕ್ಕೆ ಕರೆಯಿಸಿಕೊಳ್ಳ ಲಾಗಿತ್ತು. ಬಾಕಿ ಬಿಲ್ಲುಗಳನ್ನು ಸರ್ಕಾರದಿಂದ ಮನ್ನಾ ಮಾಡಿಸಿಕೊಳ್ಳಲು ಎರಡು ತಿಂಗಳು ಅವಧಿ ನೀಡಬೇಕೆಂದೂ ಅಲ್ಲಿಯುವರೆಗೆಯಾವುದೇ ಭಾಗ್ಯಜ್ಯೋತಿ, ಕುಟೀರ ಜ್ಯೋತಿ ಸಂಪರ್ಕಗಳಿಗೆ ಬಿಲ್ ಬಾಕಿ ಕಾರಣಕ್ಕಾಗಿ ವಿದ್ಯುತ್ ಕಡಿತ ಮಾಡಕೂಡದೆಂದು ಅವರಿಂದ ಭರವಸೆಯನ್ನು ಪಡೆಯಲಾಯಿತು.

ಶಂಕಿತ ನಕ್ಸಲೀಯರ ಹತ್ಯೆ........


ಪುಟ 3 ರಿಂದ

ಕಾಡಿನಿಂದ ಬದುಕುವ ಹಕ್ಕಿನಿಂದ ಓಡಿಸಲು ಯತ್ನಿಸಿದ ಸರ್ಕಾರದ ನಿರ್ಧಾರ-ಕ್ರಮವೇ ಜನ ಸಂಘಟಿತರಾಗಲು, ಹೋರಾಟಕ್ಕೆ ಮುಂದಾಗಲು ಕಾರಣ. ಅದರಲ್ಲಿ ನಕ್ಸಲೀಯ ತಂಡವೂ ತನ್ನ ಸಂಘಟನೆ-ರಾಜಕೀಯ ಬೆಳೆಸಲು, ಬಳಸಲು ಮುಂದಾಗಿದೆ. ಮೂಲಭೂತ ಸಮಸ್ಯೆಯನ್ನು ಬಗೆಹರಿಸಲು ಮುಂದಾಗದೆ ಬಂದೂಕಿನ ಉತ್ತರದಿಂದ ಬಗ್ಗುಬಡಿಯಲು ನೋಡಿದೆ ಸರ್ಕಾರ. ಆದ್ದರಿಂದ ಆ ಪ್ರದೇಶದ ಜನರನ್ನು ಒಕ್ಕಲೆಬ್ಬಿಸಬಾರದು, ಬದುಕುವ ಹಕ್ಕನ್ನು ಕಸಿಯಬಾರದು. ಅದನ್ನು ರಕ್ಷಿಸಲೇಬೇಕು.

ಒಂದು ವೇಳೆ ಆ ಯುವ ಕಾರ್ಯಕರ್ತರನ್ನು ಬಂಧಿಸಿದ್ದರೆ, ಅವರ ತಪ್ಪು ರಾಜಕೀಯ - ಸಾಧನೆಯ ಮಾರ್ಗದ ವಿಕಲ್ಪತೆ-ತಪ್ಪುಗಳನ್ನು ಮನಗಾಣಿಸಲು ಸಾಧ್ಯವಿತ್ತು. ಇನ್ನೂ ಅವು ಎಳೆಯಜೀವಗಳು. ಈ ಘಟನೆಯಿಂದಾಗಿ ಒಟ್ಟು ಪರಿಸ್ಥಿತಿಯೇ ಗಂಭೀರವಾಗುತ್ತಿದೆ. ನಕ್ಸಲಿಯರೆಂಬುವವರನ್ನು ದಮನಿಸಲು ವಿಶೇಷ ಕಾರ್ಯಾಚರಣೆ ಪಡೆಯನ್ನು ರಚಿಸಲಾಗುತ್ತಿದೆ. ಇನ್ನೂ ಏನೇನು ಅವಘಡಗಳು ಸಂಭವಿಸಿಯಾವೋ ಎಂದು ಜನ ತಲ್ಲಣದಲ್ಲಿದ್ದಾರೆ. ಇಂತಹವರ ದಮನಕ್ಕೆಂದು ಹೊರಟು, ಕಾಡು-ಊರು ಹೊಕ್ಕ ಪೋಲೀಸ್ - ರಕ್ಷಣಾ ಪಡೆಗಳು ನಡೆಸಿದ, ನಡೆಸಬಹುದಾದ ಆಕ್ರಮಣ-ಅತ್ಯಾಚಾರದ ಘಟನೆಗಳು ಹಲವು ಕಣ್ಣೆದುರಿಗಿದೆ. ಈ ಅತಿರೇಕದ ಜೊತೆಗೆ, ಸೇಡು ತೀರಿಸಿಕೊಳ್ಳುವುದಾಗಿ ನಕ್ಸಲೀಯ ಪಡೆ 'ಪೀಪಲ್ಸ್ ವಾರ್ ಗ್ರೂಪ್' ಬೆದರಿಕೆ ಹಾಕಿದೆ. ಇದು ಒಪ್ಪಲಾಗದ್ದು-ಖಂಡನೀಯ. ಇಂತಹ ಕ್ರಮಗಳಿಂದ ಹೋರಾಟದ ನಿಜ ಆಶಯ ಹಾದಿ ತಪ್ಪುತ್ತವೆ. ಏನಿದ್ದರೂ ಜನತೆಯನ್ನು ಸಂಘಟಿಸಿ, ಪ್ರಜಾಸತ್ತಾತ್ಮಕವಾಗಿ ಹೋರಾಡಬೇಕು. ಸರ್ಕಾರದ ನೀತಿಗಳನ್ನು ಹಿಮ್ಮೆಟ್ಟಿಸಬೇಕು. ನಕ್ಸಲೀಯ ತಂಡಗಳ ವಾದ - ಸಾಹಸ ಪ್ರವೃತ್ತಿ ಕೆಲವು ವಿಭಾಗಗಳಿಗೆ ಆಕರ್ಷಕವಾಗಿ ತೋರಬಹುದು. ಆದರೆ ಅದು ಜನರ ಹಿತಗಳಿಗೆ, ಪ್ರಗತಿಪರ ಪ್ರಜಾಸತ್ತಾತ್ಮಕ ಚಳುವಳಿಗೆ, ಎಡ ಚಳುವಳಿಗೆ ಹೇಗೆ ಹಾನಿ ತರಲಿದೆ ಎಂಬುದನ್ನು ದೇಶದ - ಜಗತ್ತಿನ ಅನುಭವದ ಹಿನ್ನೆಲೆಯಲ್ಲಿ ಪರಿಶೀಲಿಸಿ ತಿರಸ್ಕರಿಸಬೇಕು.

ಅಂತೂ ಕರ್ನಾಟಕದಲ್ಲಿ ಒಂದು ಅನಾರೋಗ್ಯಕರ, ಅನಾಹುತದ ಪ್ರವೃತ್ತಿಗಳು ಬೆಳೆಯುತ್ತಿವೆ ಎಂಬುದೇ ಗಂಭೀರ ವಿಚಾರ.

ಸದಾ ತಾನು ಶಿಸ್ತಿನ ಪಕ್ಷವೆಂದು ಸ್ವಯಂ ಹೊಗಳಿಕೊಳ್ಳುತ್ತಿದ್ದ ಬಿಜೆಪಿ ತಮ್ಮ ಪಕ್ಷದ ಒಬ್ಬೊಬ್ಬ ಮುಖಂಡರೂ ಭ್ರಷ್ಟಾಚಾರದಲ್ಲಿ ತೊಡಗಿ, ಸಿಕ್ಕಿಬಿದ್ದಾಗ ಹೊಸ ರಾಗ ಹಾಡತೊಡಗಿದೆ. ಈ ಹಗರಣಗಳನ್ನು ಅತ್ಯಂತ ಭಂಡತನದಿಂದ ಸಮರ್ಥಿಸಿಕೊಳ್ಳುತ್ತಿದೆ. ಈಚೆಗೆ ಸಿಕ್ಕಿಬಿದ್ದ ಜುದೇವರ ರಕ್ಷಣೆಗೆ ಟೊಂಕಕಟ್ಟಿ ನಿಂತಿದ್ದಾರೆ ಬಿಜೆಪಿ ಮುಖಂಡರು ಯಾವುದೇ ನಾಚಿಕೆಯಿಲ್ಲದೆ! ಆ ಬಗ್ಗೆ ಓದಿ...




ಹರಹರಾ ಜುದೇವ !

ಹರಹರಾ ಮಹದೇವ! ಇದೊಂದು ಧಾರ್ಮಿಕ ಘೋಷಮಂತ್ರ - ಆರ್‌ಎಸ್‌ಎಸ್ ಆಕ್ಟೋಪಸ್ ಇದನ್ನು ಕೋಮು ಭಾವೋದ್ರೇಕವನ್ನು ಬಡಿದೆಬ್ಬಿಸಿ ಗಲಭೆಗಳನ್ನು ಸೃಷ್ಟಿಸಲು ಆಗಾಗ ದುರುಪಯೋಗಪಡಿಸಿಕೊಳ್ಳುತ್ತಿದೆ. ಅದರ ರಾಜಕೀಯ ಅಂಗವಾದ ಬಿಜೆಪಿ ಈ ಘೋಷಮಂತ್ರವನ್ನು 'ಹರ ಹರಾ ಜುದೇವ' ಎಂದು ಪರಿವರ್ತಿಸಿದಂತೆ ಕಾಣುತ್ತದೆ. ಭ್ರಷ್ಟಾಚಾರ ಈ ವಾಜಪೇಯಿ ಸರ್ಕಾರದ ಹೆಗ್ಗುರತೇ ಆಗಿಬಿಟ್ಟಿದೆ. ತೆಹಲ್ಕಾ ಅನುಭವದಿಂದ ಬಿಜೆಪಿ ಪಾಠ ಕಲಿತಿದೆ ಎಂದು ಕೆಲವರು ಭಾವಿಸಿದಂತಿತ್ತು. ಅದರೀಗ ತಮ್ಮ ತಪ್ಪಿನ ಅರಿವಾಗಿ ಬೇಸರ ವಾಗಿರಬೇಕು. ಅತ್ಯಂತ ಅನೀತಿಯುತ ವಿಧಾನಗಳಿಂದ ಹಣ ಮಾಡುವುದು, ಮತ್ತಷ್ಟು ಹಣ ಮಾಡುವುದೇ ಈ ಸರ್ಕಾರದ ಪ್ರೇರಕ ಶಕ್ತಿಯಾಗಿರಬೇಕು. ಸಾರ್ವತ್ರಿಕ ಚುನಾವಣೆಗಳು ಹೆಚ್ಚೆಚ್ಚು ಹತ್ತಿರವಾಗುತ್ತಿರುವಂತೆ ಸನ್ನಿವೇಶದ ಗರಿಷ್ಟ ಲಾಭ ಪಡೆಯುವ ಆಕಾಂಕ್ಷೆಯೂ ಅಷ್ಟೇ ಹೆಚ್ಚುತ್ತಿದೆ.

ಕಳಂಕಿತ ಪರಂಪರೆಯನ್ನು ಮುಂದುವರೆಸುತ್ತಾ ಕೇಂದ್ರ ಪರಿಸರ ಮತ್ತು ಅರಣ್ಯ ಖಾತೆಯ ರಾಜ್ಯಮಂತ್ರಿ ದಿಲೀಪ್ ಸಿಂಗ್ ಜುದೇವ್ ಛತ್ತೀಸ್ ಗಡ್ ಮತ್ತು ಒರಿಸ್ಸಾದಲ್ಲಿ ಒಂದು ಆಸ್ಟ್ರೇಲಿಯನ್ ಕಂಪನಿಗೆ ಗಣಿಗಾರಿಕೆಯ ಹಕ್ಕು ಪಡೆಯುವಲ್ಲಿ ನೆರವಾಗಲು ಹಣ ಸ್ವೀಕರಿಸು ಕ್ರಿಯೆಯಲ್ಲಿ ಸಿಕ್ಕಿ ಬಿದ್ದಿದ್ದಾರೆ. ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ ದೇಶಾದ್ಯಂತ ತನ್ನ ನವೆಂಬರ್ 16 ರ ಸಂಚಿಕೆಯಲ್ಲಿ ಈ ಕುರಿತು ಫೋಟೋಗಳ ಸರಣಿಯನ್ನು ಮುಖಪುಟದಲ್ಲಿ ಪ್ರಕಟಿಸಿದೆ.

ಆದರೆ ಬಿಜೆಪಿ ಪಶ್ಚಾತಾಪ ಪಡುವ ಬದಲು ಈ ಹಗರಣವನ್ನು ಅತ್ಯಂತ ಭಂಡತನದಿಂದ ಸಮರ್ಥಿಸಿಕೊಳ್ಳುತ್ತಿದೆ. ಬಂಗಾರು ಲಕ್ಷ್ಮಣ್‌ರವರು ನೋಟಿನ ಕಂತೆಗಳನ್ನು ಸ್ವೀಕರಿಸುತ್ತಿದ್ದ ಚಿತ್ರಗಳನ್ನು ಟಿವಿ ಪರದೆಯ ಮೇಲೆ ಮಂದಿ ನೋಡಿದ್ದಾರೆ. ಅದೇ ವ್ಯಕ್ತಿ ಈಗ ತಕ್ಷಣವೇ ಜುದೇವ್‌ರ ರಕ್ಷಣೆಗೆ ಧಾವಿಸಿದ್ದಾರೆ. ಅವರನ್ನು ಇನ್ನೊಬ್ಬ ಬಂಗಾರುವಾಗಿ ಮಾಡಬೇಡಿ ಎಂದು ಕಳಕಳಿಯಿಂದ ಕೇಳಿಕೊಂಡಿದ್ದಾರೆ. ಹಗರಣದ ಕಳಂಕ ಹೊತ್ತ ಬಿಜೆಪಿ ಅಧ್ಯಕ್ಷ ವೆಂಕಯ್ಯ ನಾಯ್ಡು ಈ ಹಗರಣ



ಬಯಲಾದ ಬೆನ್ನಲ್ಲೇ ತಮ್ಮ ಪಕ್ಷ ಬೇರಾವ ಪಕ್ಷಕ್ಕಿಂತಲೂ ಹೆಚ್ಚು 'ನೀತಿವಂತ' ಪಕ್ಷ ಎಂದು ಹೇಳಿಕೊಂಡಿದ್ದಾರೆ. ಈ 'ಹಣವನ್ನು ಒಂದು ಸಾಮಾಜಿಕ ಉದ್ದೇಶಕ್ಕಾಗಿ ತಗೊಳ್ಳಲಾಯಿತು' ಎಂದು ಆತ ಹೇಳಿದ್ದಾರೆ!

ಈ ಇಡೀ ಸಂಗತಿಯನ್ನು ಸಿಬಿಐ ವಿಚಾರಣೆಗೆ ಒಪ್ಪಿಸಿದ್ದೇ ತಮ್ಮ ಹೆಗ್ಗಳಿಕೆ ಎಂದು ಬೀಗುತ್ತಿರುವ ಉಪಪ್ರಧಾನಮಂತ್ರಿ ಮತ್ತು ಗೃಹಮಂತ್ರಿಗಳಿಗೆ ಇಂತಹ ಒಂದು 'ಕುಟುಕು ಕಾರ್ಯಾಚರಣೆ' ಪಿತೂರಿಯ ವಿಚಾರಣೆಗೂ ಆದೇಶ ನೀಡಲಾಗಿದೆ ಎಂದಿದ್ದಾರೆ. 'ಭಾರತದ ರಾಜಕಾರಣ ಮತ್ತು ಚುನಾವಣೆಗಳು ಇಂತಹ ಕುಟುಕು ಕಾರ್ಯಾಚರಣೆಗಳಿಂದ ಪ್ರಭಾವಿತ ವಾಗುತ್ತಿರುವುದು ಇದೇ ಮೊದಲು' ಎಂದು ಅವರು ಚುನಾವಣಾ ಫಲಿತಾಂಶಗಳ ಭವಿಷ್ಯವಾಣಿಯನ್ನು ಮಾಡಿಬಿಟ್ಟಿದ್ದಾರೆ. ಶ್ರೀಯುತ ಅಡ್ವಾಣಿ ಪ್ರಕಾರ ಒಬ್ಬ ಮನುಷ್ಯನಿಗೆ ಬಲೆ ಬೀಸಿ, ಆತ ಸಿಕ್ಕಿಬಿದ್ದರೆ ಆತ ತಪ್ಪಿತಸ್ಥ ಅಲ್ಲ ಎಂಬುದನ್ನು ನಾವು ನಂಬಬೇಕಂತೆ! ಪೋಲೀಸ್ ಮತ್ತು ಜಾಗೃತ ಇಲಾಖೆಗಳು ಪ್ರತಿದಿನ ಈ ರೀತಿ ಅಪರಾಧಿಗಳನ್ನು ಸಾಕ್ಷಿ ಸಮೇತ ಹಿಡಿಯಲು ಇಂತಹ ಬಲೆ ಬೀಸುತ್ತಿರುತ್ತಾರೆ ಎಂಬುದು ಗೃಹಮಂತ್ರಿಯಾಗಿ ಅವರಿಗೆ ತಿಳಿದಿರಲೇಬೇಕು. ಸಾಮಾನ್ಯವಾಗಿ ಮಾಡುವಂತೆ ಅಪರಾಧಿಗಳನ್ನು ಹಿಡಿಯಲು ಬದಲು ಶ್ರೀಯುತ ಅಡ್ವಾಣಿ ಅಪರಾಧಿಯನ್ನೂ, ಅಪರಾಧವನ್ನೂ ಭಂಡತನದಿಂದ ಸಮರ್ಥಿಸಿಕೊಳ್ಳುತ್ತಿದ್ದಾರೆ. ಬಾಬ್ರಿ ಮಸೀದಿ ಧ್ವಂಸದಲ್ಲಿ ಆರೋಪಪಟ್ಟಿಯನ್ನು ದುರ್ಬಲಗೊಳಿಸುವ ಸಿಬಿಐನ ಹಿಂದಿನ ದಾಖಲೆ ನೋಡಿದರೆ ಪ್ರಧಾನಮಂತ್ರಿಗಳ ಕಛೇರಿ ಮತ್ತು ಗೃಹ ಮಂತ್ರಾಲಯದ ಅಡಿ ಇರುವ ಈ ಸಂಸ್ಥೆಯ ನಿಷ್ಪಕ್ಷಪಾತತೆಯ ಬಗ್ಗೆ ಭರವಸೆಯೇನೂ ಮೂಡುವುದಿಲ್ಲ. ಸಿಬಿಐ ತಾನೇ ಹಾಕಿದ್ದ ಬಾಬ್ರಿ ಮಸೀದಿ ಧ್ವಂಸದ ಕ್ರಿಮಿನಲ್ ಪಿತೂರಿಯ ಆರೋಪದಿಂದ ಶ್ರೀಯುತ ಅಡ್ವಾಣಿ ಮತ್ತು ಆರ್‌ಎಸ್‌ಎಸ್ ನ ಇತರ ಘಟಾನುಘಟಿಗಳನ್ನು ನಂತರ ಮುಕ್ತಗೊಳಿಸಿತು ಎಂಬುದು ನಮ್ಮ ಓದುಗರಿಗೆ ತಿಳಿದಿದೆ.

ಜಶ್‌ಪುರ್‌ನ ಈ 'ರಾಜ' ಛತ್ತೀಸ್ ಗಢ್‌ನ ಮುಂದಿನ ಮುಖ್ಯಮಂತ್ರಿ ಎಂದೆನಿಸಿಕೊಂಡ ಶ್ರೀಯುತ ದಿಲೀಪ್ ಸಿಂಗ್ ಜುದೇವ್ ಕೂಡ ಹಿಂದೆ ಬಿದ್ದಿಲ್ಲ. ತನ್ನ ಕೃತ್ಯವನ್ನು ಸಮರ್ಥಿಸಿಕೊಳ್ಳಲು ಮಹಾತ್ಮಗಾಂಧಿ, ಚಂದ್ರಶೇಖರ ಆಜಾದ್ ಮತ್ತು ಭಗತ್‌ಸಿಂಗರ ಹೆಸರೆತ್ತಿದ್ದಾರೆ. 'ಪ್ರತಿಯೊಬ್ಬರಿಗೂ ಹಣ ಬೇಕು. ಸಾಮಾಜಿಕ ಉದ್ದೇಶಕ್ಕಾಗಿ ಹಣ ತಗೊಳ್ಳುವುದರಲ್ಲಿ ತಪ್ಪೇನಿಲ್ಲ" ಎಂದವರು ಹೇಳಿದ್ದಾರೆ! ಇದು ರಾಜಕೀಯ ನೈತಿಕತೆ ಕುರಿತಂತೆ ಬಿಜೆಪಿಯ ಹೊಸ ನಿರ್ವಚನೆ. ಬಹುರಾಷ್ಟ್ರೀಯ ಕಂಪನಿಗಳಿಗೆ ಮೋಸದ ಕಾನೂನು ಬಾಹಿರ ಕಾಂಟ್ರಾಕ್ಟ್‌ಗಳನ್ನು ಕೊಡಿಸಲು ಹೀಗೆ ಹಣ ಪಡೆಯುವುದು ಮತ್ತು ವಸಾಹತುಶಾಹಿ ಆಳ್ವಿಕೆಯಿಂದ ಭಾರತದ ಸ್ವಾತಂತ್ರ್ಯದ ಹೋರಾಟಕ್ಕಾಗಿ ಕ್ರಾಂತಿಕಾರಿ ಸ್ವಾತಂತ್ರ ಹೋರಾಟಗಾರರು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿದ ಎರಡೂ ಒಂದೇ ಎಂದು ನಾವು ನಂಬಬೇಕಂತೆ

ಈ ವಿಲಕ್ಷಣ ವಾದವಷ್ಟೇ ಅಲ್ಲ, ಶ್ರೀಯುತ ಜುದೇವ್ ಒಂದು 'ಪಿತೂರಿ'ಯ ವಾದವನ್ನೂ ಹೂಡಿದ್ದಾರೆ. ತಾನು ಮತಾಂತರದ 'ಪಾಪ'ದ ವಿರುದ್ಧಸಾಮಾಜಿಕ ಧರ್ಮಯುದ್ಧ ನಡೆಸುತ್ತಿದ್ದು ಇದರಿಂದಾಗಿ 'ಸಾಗರದಾಚೆಗಿನ ಮಿಶನರಿಗಳ ಪಿತೂರಿ' ಗೆ ತಾನು ಬಲಿಯಾಗಿದ್ದೇನೆ ಎಂದು ಆತ ಹೇಳಿಕೊಂಡಿದ್ದಾರೆ. ಛತ್ತೀಸಗಡ್‌ನ ಮುಖ್ಯಮಂತ್ರಿಯನ್ನು ಪೋಪ್ ನೇಮಿಸಿದ್ದು ಆತನ ಮುಖ್ಯ ಕೆಲಸ ಬಡ ಮತ್ತು ಅಮಾಯಕ ಬುಡಕಟ್ಟು ಜನಗಳನ್ನು ಕ್ರೈಸ್ತ ಧರ್ಮಕ್ಕೆ ಮತಾಂತರ ಮಾಡುವುದು ಎಂಬ ಬಿಜೆಪಿಯ ಇನ್ನೂ ವಿಲಕ್ಷಣವಾದ ಸಿದ್ಧಾಂತಕ್ಕೆ ಹೊಂದಿಕೊಳ್ಳುವ ಸಂಗತಿಯಿತು.

ಹೀಗಿದೆ 'ಭಿನ್ನ ಸ್ವರೂಪ'ದ ಈ ಪಕ್ಷ! ಭಾರತವನ್ನು ಬೂಖ್(ಹಸಿವು), ಭಯ ಮತ್ತು ಭ್ರಷ್ಟಾಚಾರದಿಂದ ಮುಕ್ತಗೊಳಿಸುವುದು ತನ್ನ ಗುರಿಯೆಂದು ಈ ಪಕ್ಷಗಳನ್ನು, ಜನಗಳನ್ನು ದಾರಿತಪ್ಪಿಸುವ ದುರುದ್ದೇಶಗಳಿಂದಲೇ ಬಹುಶ ಹೇಳಿರಬೇಕು. ಈ ಮೂರು ವಿಷಯಗಳಲ್ಲಿ ವಾಜಪೇಯಿಯವರ ನೇತೃತ್ವದಲ್ಲಿ ಈ ಸರಕಾರ ಪರಿಸ್ಥಿತಿಯನ್ನು ಇನ್ನಷ್ಟು ಬಿಗಡಾಯಿಸಿ ಆಳವಾದ ಹಗರಣಗಳನ್ನು ಸೃಷ್ಟಿಸಿದೆ. ಇವರನ್ನೆಲ್ಲಾ ಎಷ್ಟು ಬೇಗ ಅಧಿಕಾರದಿಂದ ಇಳಿಸಿದರೆ ಅಷ್ಟು ಭಾರತಕ್ಕೆ ಒಳಿತು

ಅಯೋಧ್ಯಾ ಮೊಕದ್ದಮೆ :

ಮೂಲ ಆರೋಪ ಪಟ್ಟಿಯ ಮೇಲೆಯೇ ನಡೆಯಲಿ

ಸುಪ್ರೀಂಕೋರ್ಟಿನಲ್ಲಿ ಅಯೋಧ್ಯಾ ಮೊಕದ್ದಮೆ ಕುರಿತಂತೆ ಉತ್ತರ ಪ್ರದೇಶ ಸರ್ಕಾರ ಸಲ್ಲಿಸಿರುವ ಅಫಿಡವಿಟ್ (ಶಪಥ ಪತ್ರ) ರಾಯ್ ಬರೇಲಿ ಕೋರ್ಟಿನಲ್ಲಿ ಸಿಬಿಐ ಸಲ್ಲಿಸಿದ ಎರಡನೇ ಆರೋಪ ಪತ್ರವನ್ನು ಬೆಂಬಲಿಸಿದೆ. ಬಾಬ್ರಿ ಮಸೀದಿ ಧ್ವಂಸದ ಮೊಕದ್ದಮೆಯಲ್ಲಿ ಪಿತೂರಿಯ ಆರೋಪವನ್ನು ಕೈಬಿಟ್ಟದ್ದನ್ನು ಸಮರ್ಥಿಸಿಕೊಳ್ಳಲು ಯಾವುದೇ ರಾಜಕೀಯ ಪಕ್ಷದಿಂದ ಪಿತೂರಿಯೇನೂ ಇರಲಿಲ್ಲ ಎಂದು ಈ ಪ್ರಮಾಣಪತ್ರ ಹೇಳಿದೆ.

ಇಂತಹ ನಿಲುವು ಆಶ್ಚರ್ಯಕರ ಮತ್ತು ಅತ್ಯಂತ ದುರದೃಷ್ಟಕರ 1997 ರಲ್ಲಿ ಲಕ್ನೌನಲ್ಲಿ ವಿಶೇಷ ನ್ಯಾಯಾಲಯದಲ್ಲಿ ಹಾಕಿದ ಮೂಲ ಆರೋಪಪತ್ರ ಭಾರತೀಯ ದಂಡ ಸಂಹಿತೆಯ 120(ಬಿ) ಸೆಕ್ಷನ್ ಅಡಿ ಪಿತೂರಿಯ ಆರೋಪ ಹಾಕಿತ್ತು ಎಂಬುದನ್ನು ನೆನಪಿಸಿಕೊಳ್ಳಬಹುದು. ಸಮಾಜವಾದಿ ಪಕ್ಷ ಮೂಲ ಆರೋಪ ಪತ್ರವನ್ನು ದುರ್ಬಲಗೊಳಿಸುವುದನ್ನು ವಿರೋಧಿಸುತ್ತಾ ತಪ್ಪಿತಸ್ಥರನ್ನು ಶಿಕ್ಷಿಸಬೇಕು ಎಂಬ ನಿಲುವನ್ನು ನಿರಂತರವಾಗಿ ತಳೆಯುತ್ತಾ ಬಂದಿತ್ತು. ಈಗ ಅದರ ಸರ್ಕಾರ ಸಲ್ಲಿಸಿರುವ ಪ್ರಮಾಣ ಪತ್ರ ಈ ನಿಲುವಿಗೆ ವಿರುದ್ಧವಾದದ್ದು ಎಂದು ಸಿಪಿಐ(ಎಂ) ಹೇಳಿದೆ.

ರಾಷ್ಟ್ರೀಯ ಐಕ್ಯತೆ ಮತ್ತು ಧರ್ಮನಿರಪೇಕ್ಷ ವ್ಯವಸ್ಥೆಯ ರಕ್ಷಣೆ ಬಹಳ ಅಂಶವನ್ನು ಒಳಗೊಂಡಿರುವ ಈ ಮಹತ್ವದ ಮೊಕದ್ದಮೆಯಲ್ಲಿ ನ್ಯಾಯ ದೊರೆಯಬೇಕಾದರೆ ವಿಚಾರಣೆಯನ್ನು ಮೂಲ ಆರೋಪ ಪತ್ರದ ಆಧಾರದಲ್ಲಿ ನಡೆಸುವುದು ಅಗತ್ಯ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ.



ಸಂಕುಚಿತ ದೃಷ್ಟಿಯ ದಾಳಿಗಳು ನಿಲ್ಲಲಿ

ಈಶಾನ್ಯ ಭಾರತದಿಂದ ಬಿಹಾರದ ಮೂಲಕ ಪ್ರಯಾಣಿಸುತ್ತಿದ್ದ ರೈಲ್ವೇ ಪ್ರಯಾಣಿಕರ ಮೇಲೆ ಹಲ್ಲೆಗಳು ಮತ್ತು ಪ್ರತೀಕಾರವಾಗಿ ಅಸ್ಸಾಂನ ಕೆಲವು ಭಾಗಗಳಲ್ಲಿ ಬಿಹಾರಿ ಮತ್ತು ಹಿಂದೀ ಭಾಷಿಕ ಜನಗಳ ಮೇಲೆ ಹಲ್ಲೆಗಳು ನಾಚಿಕೆಗೇಡಿ ಘಟನೆಗಳು. ಗುವಾಹಟಿ ಯಲ್ಲಿ ಹೊರಗಿನವರು ರೈಲ್ವೆಯಲ್ಲಿ ಕೆಲಸಕ್ಕಾಗಿ ಪ್ರವೇಶ ಪರೀಕ್ಷೆಗೆ ಹಾಜರಾಗುವುದನ್ನು ಆಕ್ಷೇಪಿಸುವುದರೊಂದಿಗೆ ಆರಂಭವಾದ ಈ ಘಟನಾ ಸರಣಿ ವಿವಿಧ ಸಮುದಾಯಗಳ ಮುಗ್ಧ ಜನತೆಯ ಮೇಲೆ ಹಿಂಸಾಚಾರ ಮಟ್ಟಕ್ಕೆ ಇಳಿದಿದೆ ಎಂದು ಅದು ಹೇಳಿದೆ.

ಎಲ್ಲಾ ಸಮುದಾಯಗಳ ಜನಗಳನ್ನು ತಟ್ಟುತ್ತಿರುವ ನಿರುದ್ಯೋಗ ಸಮಸ್ಯೆಗಳನ್ನು ಈಗ ಒಬ್ಬರ ವಿರುದ್ಧ ಇನ್ನೊಬ್ಬರನ್ನು ಎತ್ತಿ ಕಟ್ಟಲು ಬಳಸಲಾಗುತ್ತಿರುವುದು ದುರಂತಕಾರಿ. ಬಿಹಾರ ಮತ್ತು ಅಸ್ಸಾಂ ರಾಜ್ಯ ಸರ್ಕಾರಗಳು ಈ ಸಂಬಂಧದ ಎಲ್ಲಾ ಹಿಂಸಾತ್ಮಕ, ಕಾನೂನು ಬಾಹಿರ ಚಟುವಟಿಕೆಗಳನ್ನು ದೃಢವಾಗಿ ಹತ್ತಿಕ್ಕಬೇಕು. ಕೇಂದ್ರ ಸರ್ಕಾರ ರೈಲುಗಳ ಮೇಲೆ ಹಲ್ಲೆಗಳ ವರದಿಗಳು ಬಂದಾಗ ಚುರುಕಿನಿಂದ ವರ್ತಿಸಿಲ್ಲ.

ಸೋದರ ಹತ್ಯೆಯ ಹಾಗೂ ಸಮಾಜ ಘಾತುಕ ಕೃತ್ಯಗಳು ಸಾಮಾಜಿಕ ಸಾಮರಸ್ಯವನ್ನು ಹಾಗೂ ಜನಸಾಮಾನ್ಯರ ಬದುಕನ್ನು ಹಾಳುಗೆಡವುದರಿಂದಾಗಿ ಅಸ್ಸಾಂ ಮತ್ತು ಬಿಹಾರಿನ ಎಲ್ಲಾ ಜನವಿಭಾಗಗಳು ಇವನ್ನು ವಿರೋಧಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಮನವಿ ಮಾಡಿದೆ.



ದತ್ತ ಜಯಂತಿ: ಸೌಹಾರ್ದತೆ

ಬಾಬಾಬುಡನ್ ಗಿರಿಶ್ರೇಣಿಯಲ್ಲಿ ಮೂರು ದತ್ತಾತ್ರೇಯ ಪೀಠಗಳಿವೆ. ಚಿಕ್ಕಮಗಳೂರಿನ ಹತ್ತಿರವಿರುವ ಶ್ರೀ ಗುರುದತ್ತಾತ್ರೇಯ ಆದಿಗದ್ದುಗೆ ಇನಾಂ ಬಿಸಗ್ನಿ ಮಠ, ಬಾಬಾಬುಡನ್‌ಗಿರಿ ತುದಿಯಲ್ಲಿರುವ ಇನಾಂ ದತ್ತಾತ್ರೇಯ ಪೀಠ ಹಾಗೂ ಚಿಕ್ಕಮಗಳೂರಿನ ಜಾಗ್ರಾ ಹೋಬಳಿಯಲ್ಲಿರುವ ದತ್ತಾತ್ರೇಯ ಪೀಠ. ಈ ಬಗ್ಗೆ ಚಿಕ್ಕಮಗಳೂರು ಜಿಲ್ಲೆ ಗೆಜೆಟಿಯರ್‌ನಲ್ಲಿ ಸ್ಪಷ್ಟ ಉಲ್ಲೇಖವಿದೆ. ಆದರೆ ಹಿಂದೂ ಮುಸಲ್ಮಾನರ ಭಾವೈಕ್ಯದ ಸ್ಥಳವೆಂಬ ಒಂದೇ ಕಾರಣಕ್ಕಾಗಿ ಬಾಬಾಬುಡನ್‌ಗಿರಿಯ ಇನಾಂ ದತ್ತಾತ್ರೇಯ ಪೀಠವನ್ನು ಇಂದು ಸಂಘಪರಿವಾರದವರು ವಿವಾದವನ್ನಾಗಿ ಎತ್ತಿಕೊಂಡು ಪ್ರತಿವರ್ಷ ದತ್ತಜಯಂತಿ ಎಂಬ ನೆಪದಲ್ಲಿ ಕೋಮು ವಿಷಜ್ವಾಲೆ ಹರಡುತ್ತಿದ್ದಾರೆ. ಆ ಕುರಿತ ಸವಿವರವಾದ ಲೇಖನ...

ಚುನಾವಣೆ ಸಮೀಪಿಸುತ್ತಿದ್ದಂತೆ ಧರ್ಮದ ಹೆಸರಿನಲ್ಲಿ ವಿವಾದ ಹುಟ್ಟು ಹಾಕಿ, ಮತೀಯ ಗಲಭೆ ಹಬ್ಬಿಸುವುದು ಸಂಘಪರಿವಾರ ಬಿಜೆಪಿಯ ಕಾರ್ಯತಂತ್ರವಾಗಿದೆ. ಇದೀಗ ಬಾಬಾಬುಡನ್ ಗಿರಿಯನ್ನು ಕರ್ನಾಟಕದ ಅಯೋಧ್ಯೆಯನ್ನಾಗಿ ಮಾಡುತ್ತೇವೆ ಎಂದು ಬಿಜೆಪಿ ಬಹಿರಂಗವಾಗಿ ಘೋಷಿಸಿದೆ.

ಪಶ್ಚಿಮ ಘಟ್ಟದ ತಪ್ಪಲಿನಲ್ಲಿ ಇರುವ ಸುಂದರ, ನಿಸರ್ಗ ರಮಣೀಯ ಜಿಲ್ಲೆ ಚಿಕ್ಕಮಗಳೂರು, ದುರ್ಗಮ ಕಾಡುಗಳು, ಹೆಚ್ಚು ಮಳೆ, ಕೃಷಿ ನಿಧಾನವಾಗಿ ಉಗಮಗೊಂಡ ಪ್ರದೇಶ. ಅಪಾರ ನಿಸರ್ಗ ಸಂಪತ್ತನ್ನು ತನ್ನ ಬಸಿರಿನಲ್ಲಿ ಹುದುಗಿಸಿ ಕೊಂಡಿರುವ ಜಿಲ್ಲೆ. ಪ್ರಾಕೃತಿಕವಾಗಿ ಕರ್ನಾಟಕವನ್ನು ಮೂರು ಭಾಗವನ್ನಾಗಿಸಿದಾಗ ಕರಾವಳಿ, ಮಲೆನಾಡು ಬಯಲುಸೀಮೆ ವಿಭಾಗಗಳಲ್ಲಿ ಮಲೆನಾಡಿನ ಹೆಚ್ಚಿನ ಪ್ರದೇಶವನ್ನೊಳಗೊಂಡ ಜಿಲ್ಲೆ. ಕರ್ನಾಟಕದ ಅತಿ ಎತ್ತರದ ಶಿಖರಗಳು ಬಾಬಾಬುಡನ್‌ಗಿರಿ ಗಿರಿಶ್ರೇಣಿಯಲ್ಲಿ ಬರುತ್ತವೆ. ಈ ಶ್ರೇಣಿಯಲ್ಲಿರುವ ಮುಳ್ಳಯ್ಯನಗಿರಿ ದಕ್ಷಿಣ ಭಾರತದಲ್ಲಿ ಅತೀ ಎತ್ತರದ ಶಿಖರ. ಕಾವೇರಿಯ ಪ್ರಮುಖ ಉಪನದಿ ಹೇಮಾವತಿ, ಇತರೆ ಪ್ರಮುಖ ನದಿಗಳಾದ ತುಂಗಾ, ಭದ್ರಾ, ನೇತ್ರಾವತಿ, ವೇದಾ, ಯಗಚಿ ನದಿಗಳ ಉಗಮ ಸ್ಥಾನ ಈ ಜಿಲ್ಲೆಯಲ್ಲಿದೆ. ಕರ್ನಾಟಕದ ಇತಿಹಾಸದಲ್ಲಿ ಸುವರ್ಣ ಅಧ್ಯಾಯವನ್ನು ಹುಟ್ಟು ಹಾಕಿದ ಹೊಯ್ಸಳ ಸಾಮ್ರಾಜ್ಯದ ಹುಟ್ಟು ಚಿಕ್ಕಮಗಳೂರು ಜಿಲ್ಲೆಯಲ್ಲಾಯಿತು. (ಮೂಡಿಗೆರೆ ತಾಲ್ಲೂಕಿನಲ್ಲಿರುವ ಅಂಗಡಿ ಗ್ರಾಮ ಅಥವಾ ಸೊಸೆವೂರು) ಕದಂಬರ, ಗಂಗರ, ಹೊಯ್ಸಳರ, ವಿಜಯನಗರದ ಅರಸರ, ಕೆಳದಿ, ಐಗೂರು ತರೀಕೆರೆ ಪಾಳೆಯಗಾರರ, ಹೈದರ್, ಟಿಪ್ಪೂ, ಮೈಸೂರು ಒಡೆಯರ ಆಳ್ವಿಕೆಗೆ ಒಳಪಟ್ಟ ಜಿಲ್ಲೆ ಬ್ರಿಟೀಷರ ಕಾಲದಲ್ಲಿ ಕಡೂರು ಎಂಬ ಜಿಲ್ಲೆಯಾಗಿದ್ದು ನಂತರ ಚಿಕ್ಕಮಗಳೂರು ಜಿಲ್ಲೆಯಾಯಿತು. ಉತ್ತಮ ಕಬ್ಬಿಣದ ಅದಿರಿಗೆ, ದೇಶದಲ್ಲಿ ಹೆಚ್ಚಿನ ಕಾಫಿ ಬೆಳೆಗೆ ಪ್ರಸಿದ್ಧವಾದ ಜಿಲ್ಲೆ. ಭಾರತದಲ್ಲಿ ಮೊತ್ತ ಮೊದಲಿಗೆ ಕಾಫಿ ಬೆಳೆ ಆರಂಭವಾದ ಜಿಲ್ಲೆ ಹಾಗೂ ಇಂದಿಗೂ ಜಿಲ್ಲೆಯ ಆರ್ಥಿಕ ಸ್ಥಿತಿ ಕಾಫಿ ಬೆಳೆಯನ್ನಾದರಿಸಿದೆ.

ಜಿಲ್ಲೆಯ ಮಧ್ಯಭಾಗದಲ್ಲಿ ಹರಿದು ಹೋಗುವ ಪರ್ವತ ಶ್ರೇಣಿಯೇ ಬಾಬಾಬುಡನ್‌ಗಿರಿ. ಈ ಗಿರಿಶ್ರೇಣಿಗೆ ಇನ್ನೊಂದು ಹೆಸರು ಚಂದ್ರದ್ರೋಣ ಪರ್ವತ. ಕಬ್ಬಿಣದ ಅದಿರನ್ನು ಒಳಗೊಂಡ ಸುಂದರ, ರಮ್ಯ ಗಿರಿಶ್ರೇಣಿ, ನಿತ್ಯ ಹರಿದ್ವರ್ಣದ ಕಾಡುಗಳು, ಅಸಂಖ್ಯಾತ ತಿಳಿನೀರಿನ ತೊರೆಗಳು, ಜಲಪಾತಗಳು ಒಳಗೊಂಡ ಪ್ರದೇಶ. ಕ್ರಿ.ಶ.1670 ರಲ್ಲಿ ಬಾಬಾಬುಡನ್ ಎಂಬ ಫಕೀರರೊಬ್ಬರು ಅರೇಬಿಯಾದ ಯೆಮನ್‌ನಿಂದ ಕಾಫಿ ಬೀಜವನ್ನು ತಂದು ಈ ಗಿರಿಶ್ರೇಣಿಯಲ್ಲಿ ನೆಲೆಸಿ ಕಾಫಿ ಗಿಡ ಬೆಳೆಸಿದರೆಂದು ಚರಿತ್ರೆ ಹೇಳುತ್ತದೆ. ಇಲ್ಲಿಂದ ಕಾಫಿ ಕೊಡಗು, ಹಾಸನ,ಶಿವಮೊಗ್ಗ ಜಿಲ್ಲೆಯ ಭಾಗಗಳಿಗೆ, ಕೇರಳ, ತಮಿಳುನಾಡಿನ ಭಾಗಗಳಿಗೆ ಹಬ್ಬಿತ್ತು. 18ನೇ ಶತಮಾನದಲ್ಲಿ ಜಿಲ್ಲೆಗೆ ಬಂದ ಬ್ರಿಟೀಷರು ದಕ್ಷಿಣ ಕನ್ನಡದ ಹಾಗೂ ತಮಿಳುನಾಡಿನ ಕಷ್ಟ ಸಹಿಷ್ಣು ಶ್ರಮಜೀವಿಗಳನ್ನು ಉಪಯೋಗಿಸಿ ಕಾಫಿ ತೋಟಗಳನ್ನು ಬೆಳೆಸಿದರು. ಇಂದು ಜಿಲ್ಲೆಯ ಮುಖ್ಯ ಆರ್ಥಿಕ ಬೆಳೆಯಾದ ಕಾಫಿಯನ್ನು ದೇಶಕ್ಕೆ ತಂದ ಮೂಲಪುರುಷ ಬಾಬಾ ಬುಡನ್. ಇವರ ಹೆಸರಿನಲ್ಲಿ ಬಾಬಾಬುಡನ್‌ಗಿರಿ ಶ್ರೇಣಿ ಪ್ರಸಿದ್ಧವಾಯಿತು. ಈ ಗಿರಿಯ ಮೇಲಿರುವ ಒಂದು ಗುಹೆಯೇ ಗುರುದತ್ತಾತ್ರೇಯ ಇನಾಂ ಬಾಬಾಬುಡನ್‌ಗಿರಿ ದರ್ಗ. ಹಜರಲ್ ದಾದಾ ಹಯಾತ್ ಮೀರ್ ಖಲಂದರ್ ಹಾಗೂ ದತ್ತಾತ್ರೇಯ ಸ್ವಾಮಿಗಳು ತಪಸ್ಸು ಮಾಡಿದ್ದರು ಎಂದು ಹೇಳುವ ಈ ಸ್ಥಳ ಮುಸ್ಲೀಮರೂ ಹಾಗೂ ಹಿಂದೂಗಳು ಇಬ್ಬರಿಗೂ ಒಂದು ಪವಿತ್ರ ಕ್ಷೇತ್ರ. ವೈದಿಕಶಾಹಿ ವ್ಯವಸ್ಥೆಗೆ ಎದುರಾಗಿ ಬೆಳೆದ -ದತ್ತಪಂಥ ಹಾಗೂ ಕೋಮುಸಾಮರಸ್ಯ ಸಾರಿದ ಸೂಫಿ ಪಂಥ ಇವುಗಳ ಸಂಗಮದ ಸ್ಥಳವೇ ಬಾಬಾಬುಡನ್‌ಗಿರಿಯ ಇನಾಂ ದತ್ತಾತ್ರೇಯ ಪೀಠ. ಇಲ್ಲಿ ಪ್ರತಿವರ್ಷ ನಡೆಯುವ ಉರುಸ್ ಜಾತ್ರೆಗೆ ದೇಶದ ಉದ್ದಗಲದಿಂದ ಯಾತ್ರಿಗಳು ಬರುತ್ತಾರೆ. ಜಿಲ್ಲೆಯಲ್ಲಿ ದತ್ತ ಪಂಥದ ಅನುಯಾಯಿಗಳು ಬಹಳ ಕಾಲದಿಂದಲೂ ಇರುತ್ತಾರೆ. ವಾಸ್ತವವಾಗಿ ಬಾಬಾಬುಡನ್ ಗಿರಿಶ್ರೇಣಿಯಲ್ಲಿ ಮೂರು ದತ್ತಾತ್ರೇಯ ಪೀಠಗಳಿವೆ. ಚಿಕ್ಕಮಗಳೂರಿನ ಹತ್ತಿರವಿರುವ ಶ್ರೀ ಗುರುದತ್ತಾತ್ರೇಯ ಆದಿಗದ್ದುಗೆ ಇನಾಂ ಬಿಸಗ್ನಿ ಮಠ, ಬಾಬಾಬುಡನ್‌ಗಿರಿ ತುದಿಯಲ್ಲಿರುವ ಇನಾಂ ದತ್ತಾತ್ರೇಯ ಪೀಠ ಹಾಗೂ ಚಿಕ್ಕಮಗಳೂರಿನ ಜಾಗ್ರಾ ಹೋಬಳಿಯಲ್ಲಿರುವ ದತ್ತಾತ್ರೇಯ ಪೀಠ. ಈ ಬಗ್ಗೆ ಚಿಕ್ಕಮಗಳೂರು ಜಿಲ್ಲೆ ಗೆಜೆಟಿಯರ್‌ನಲ್ಲಿ ಸ್ಪಷ್ಟ ಉಲ್ಲೇಖವಿದೆ. ಆದರೆ ಹಿಂದೂ ಮುಸಲ್ಮಾನರ ಭಾವೈಕ್ಯದ ಸ್ಥಳವೆಂಬ ಒಂಧೇ ಕಾರಣಕ್ಕಾಗಿ ಬಾಬಾಬುಡನ್‌ಗಿರಿಯ ಇನಾಂ ದತ್ತಾತ್ರೇಯ ಪೀಠವನ್ನು ಇಂದು ಸಂಘಪರಿವಾರದವರು ವಿವಾದವನ್ನಾಗಿ ಎತ್ತಿಕೊಂಡು ಪ್ರತಿವರ್ಷ ದತ್ತಜಯಂತಿ ಎಂಬ ನೆಪದಲ್ಲಿ ಕೋಮು ವಿಷಜ್ವಾಲೆ ಹರಡುತ್ತಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಲ್ಲಾ ಧರ್ಮಗಳು ನೆಲೆ ಕಂಡುಕೊಂಡಿವೆ. ಬಹುಸಂಸ್ಕೃತಿಯ ಈ ನಾಡಿನಲ್ಲಿ ಆದಿಶಂಕರರು ಸ್ಥಾಪಿಸಿದ ಮಠವಿರುವ ಪ್ರಸಿದ್ಧ ಶೃಂಗೇರಿ ಕ್ಷೇತ್ರವಿದೆ. ಪುರಾಣ ಪ್ರಸಿದ್ಧ ಹೊರನಾಡು ಕ್ಷೇತ್ರವಿದೆ. ವೀರಶೈವ ಪಂಚಾಚಾರ್ಯರಲ್ಲಿ ಮೊದಲಿಗರಾದ ರೇಣುಕಾಚಾರ್ಯರು ಸ್ಥಾಪಿಸಿದ ರಂಭಾಪುರಿ ಮಠವಿದೆ. ಗದ್ದುಗೆ ಸಂಪ್ರದಾಯದ ಸಮಾಧಿ ಪ್ರಧಾನ ಧಾರ್ಮಿಕ ಕ್ಷೇತ್ರಗಳಿವೆ. ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಕ್ರೈಸ್ತರ, ಮುಸ್ಲೀಮರ ಪೂಜಾಸ್ಥಳಗಳಿವೆ, ಅನೇಕ ಜೈನ ಕ್ಷೇತ್ರಗಳಿವೆ. ಧಾರ್ಮಿಕ ಸಹಿಷ್ಣುತೆಯ ಈ ಜಿಲ್ಲೆಯಲ್ಲಿ ಸಂಘ ಪರಿವಾರದವರೂ, ಬಿಜೆಪಿ, ಬಜರಂಗದಳದವರು ಕೋಮುವಾದದ ಅಜೆಂಡಾವನ್ನು ಎತ್ತಿಕೊಳ್ಳುವವರೆಗೂ ಕೋಮುಸೌಹಾರ್ದತೆಗೆ ಹೆಸರಾಗಿದ್ದ ಜಿಲ್ಲೆ. ಅಂದು ಇಂದಿರಾಗಾಂಧಿಯವರನ್ನು ಲೋಕಸಭೆಗೆ ಮರು ಆಯ್ಕೆ ಮಾಡಿ ಕಳುಹಿಸಿ ವಿಶ್ವದ ಎಲ್ಲರ ಕಣ್ಣು ಸೆಳೆದು ಸುದ್ದಿ ಮಾಡಿದ್ದ ಜಿಲ್ಲೆ ಇಂದು ಸಂಘ ಪರಿವಾರದವರ ಕುತಂತ್ರದಿಂದ ಬಾಬಾಬುಡನ್‌ಗಿರಿ



ವಿಷಯದ ಮೂಲಕ ದೇಶದ ಗಮನ ಸೆಳೆಯುವ ಜಿಲ್ಲೆಯಾಗಿದೆ.

ಜಿಲ್ಲೆಯ ಸಾಹಿತ್ಯ ಪರಂಪರೆ

ಅಂಬಳೆ ಆರ್.ಕೃಷ್ಣಶಾಸ್ತ್ರಿಗಳು ಈ ಜಿಲ್ಲೆಯವರು. ಕನ್ನಡ ಜೈಮಿನಿ ಭಾರತದ ಕರ್ತೃ ಕವಿ ಲಕ್ಷ್ಮೀಶನ ಹುಟ್ಟೂರು ಚಿಕ್ಕಮಗಳೂರು ಜಿಲ್ಲೆಯಲ್ಲಿದೆ. ಇದಲ್ಲದೆ ಜಾನಪದ ತಜ್ಞ, ಸಾಹಿತಿ ಗೊ.ರು.ಚೆನ್ನಬಸಪ್ಪ, ಕಾದಂಬರಿಕಾರ ತ.ಪು.ವೆಂಕಟರಾಂ, ಲೇಖಕ ದಾಶರಥೀ ದೀಕ್ಷಿತ್, ಸುಮತೀಂದ್ರನಾಡಿಗ್, ಮೈಸೂರು ವಿಶ್ವವಿದ್ಯಾಲಯದಲ್ಲಿ ಸಂಶೋಧಕರಾಗಿರುವ ಎಂ.ಪಿ. ಮಂಜಪ್ಪಶೆಟ್ಟಿ, ಡಿ.ಎನ್.ಜಯಪ್ಪಗೌಡ, ಶಿಕ್ಷಣತಜ್ಞ ಅರಳಗುಪ್ಪೆ ಮನೆತನದ ದಿವಂಗತ ಎ.ಸಿ.ದೇವೇಗೌಡ ಎಲ್ಲರೂ ಈ ಜಿಲ್ಲೆಯವರು. ಹೆಸರಾಂತ ಸಾಹಿತಿ ಕುವೆಂಪುರವರ ಪುತ್ರ ಪೂರ್ಣಚಂದ್ರ ತೇಜಸ್ವಿ ಚಿಕ್ಕಮಗಳೂರಿನ ಮೂಡಿಗೆರೆಯಲ್ಲಿ ನೆಲೆಸಿ ಇಲ್ಲಿಯ ಪರಿಸರಕ್ಕೆ ಅನುಗುಣವಾಗಿ ಕರ್ವಾಲೋ, ಚಿದಂಬರ ರಹಸ್ಯ, ಜುಗಾರಿಕ್ರಾಸ್ ಇತ್ಯಾದಿ ಕೃತಿಗಳನ್ನೂ, ಪರಿಸರದ ಮೇಲೆ ಅನೇಕ ಕೃತಿಗಳನ್ನು ರಚಿಸಿದ್ದಾರೆ. ರಾಷ್ಟ್ರಪ್ರಶಸ್ತಿ ವಿಜೇತ ಅತ್ಯುತ್ತಮ ಚಲನಚಿತ್ರ ಅಬಚೂರಿನ ಪೋಸ್ಟಾಫೀಸು ನಿರ್ಮಿಸಿದ ಪತ್ರೆ ವಿನಾಯಕ್ ಈ ಜಿಲ್ಲೆಯವರು. ಧರ್ಮ ಸಹಿಷ್ಣುತೆ ಸಾಹಿತ್ಯ ಪರಂಪರೆ ಹೊಂದಿದ ಜಿಲ್ಲೆಗೆ ಕೋಮು ವಾದದ ಹೆಸರಿನಲ್ಲಿ ಮಸಿಬಳಿಯಲು ಹೊರಟಿದ್ದಾರೆ ಬಜರಂಗ ದಳದವರು.

ಬಾಬಾಬುಡನ್‌ಗಿರಿ ವಿವಾದಿತ ಸ್ಥಳವಾಗಿತ್ತೆ?

ಚರಿತ್ರೆಯ ಎಲ್ಲಾ ಉಲ್ಲೇಖಗಳಲ್ಲಿ ಬಾಬಾ ಬುಡನ್ ಗಿರಿ ಕ್ಷೇತ್ರ ದೇಶದ ಹಿಂದೂ-ಮುಸ್ಲಿಂ ಬಾಂಧವರ ಐಕ್ಯ ಧಾರ್ಮಿಕ ಕ್ಷೇತ್ರ ಎಂಬ ವಿಷಯವೇ ಪ್ರಧಾನವಾಗಿದೆ. ಮೂರನೇ ತರಗತಿಯ ಸಮಾಜ ಪುಸ್ತಕದಲ್ಲಿ ಬಾಬಾಬುಡನ್ ಗಿರಿ ಹಿಂದೂ ಮುಸ್ಲೀಮರ ಯಾತ್ರಾಸ್ಥಳ ಎಂದು ಮೊಟ್ಟ ಮೊದಲ ಬಾರಿಗೆ ಓದಿದ ನೆನಪು ಇಂದಿಗೂ ನಮಗಿದೆ. ಪ್ರತಿವರ್ಷ ಇಲ್ಲಿ ನಡೆಯುವ ಉರುಸ್‌ಗೆ ದೇಶದ ಉದ್ದಗಲದಿಂದ ಎರಡೂ ಕೋಮಿನ ಯಾತ್ರಾರ್ಥಿಗಳು ಬರುವುದನ್ನು ಬಾಲ್ಯದಿಂದ ಕಂಡಿದ್ದೇವೆ. ಬೆಳಿಗ್ಗೆ ಎದ್ದಾಗ ಮೊದಲ್ಗೊಂಡು ರಾತ್ರಿ ಮಲಗುವವರೆಗೆ ವಿಸ್ಮಯದಿಂದ ನಾವು ನೋಡುತ್ತಿದ್ದ ಗಿರಿ ಶ್ರೇಣಿಯೇ ಬಾಬಾಬುಡನ್ ಗಿರಿ. ಪ್ರತಿ **ವರ್ಷದಲ್ಲಿ ರಾತ್ರಿ ಈ ಗಿರಿಶ್ರೇಣಿಯಲ್ಲಿ ಬೆಳಕಿನ ಸಾಲಿನಂತೆ ಹಬ್ಬುತ್ತಿದ್ದ ಕಾಡ್ಗಿಚ್ಚು ಬೆಂಕಿಯನ್ನು ಬಾಲ್ಯದಲ್ಲಿ ಆಶ್ಚರ್ಯವೆಂಬಂತೆ ಬಹಳ ದೂರದಿಂದ ನೋಡುತ್ತಿದ್ದ ನೆನಪು ಇಂದಿಗೂ ಹಸಿರಾಗಿರುವಾಗ ಇಂದು ಸಂಘ ಪರಿವಾರದವರು ಈ ಗಿರಿಶ್ರೇಣಿಗೆ ಪ್ರತಿವರ್ಷ ಕೋಮುವಾದದ ಬೆಂಕಿಯನ್ನು ಹಚ್ಚುತ್ತಿರುವುದು ತೀರಾ ಆಘಾತಕರ.** ದೇಶದಲ್ಲಿ ಯಾವುದಾದರೂ ಒಂದು ಸೂಕ್ಷ್ಮ ವಿಷಯವನ್ನು ಎತ್ತಿಕೊಂಡು ಈ ಮೂಲಕ ಧರ್ಮವನ್ನು ರಾಜಕೀಯದಲ್ಲಿ ಬೆರೆಸಿ ಅಧಿಕಾರಕ್ಕೆ ಬರುವುದು ಬಿಜೆಪಿ, ಸಂಘ ಪರಿವಾರದವರ ಅಸ್ತ್ರವಾಗಿದೆ. 1992 ರಲ್ಲಿ ಬಾಬ್ರಿ ಮಸೀದಿ ಉರುಳಿಸುವವರೆಗೆ ಈ ಸಂಘ ಪರಿವಾರದವರಿಗೆ ಬಾಬಾಬುಡನ್ ಗಿರಿ ಮೇಲೆ ಕಣ್ಣಿರಲಿಲ್ಲ. 1993 ರಿಂದ 1995 ರವರೆಗೆ ಗೋಡೆಗಳ ಮೇಲೆ ಬರಹದ ಮೂಲಕ ದತ್ತಪೀಠ ಮುಕ್ತಿ ಎಂಬ ವಿವಾದಕ್ಕೆ ನಾಂದಿ ಹಾಡಿದ ಸಂಘಪರಿವಾರ, ಬಿಜೆಪಿ, ಬಜರಂಗದಳದವರು 1996 ರಿಂದ ದತ್ತಜಯಂತಿ ಎಂಬ ಹೆಸರಿನಲ್ಲಿ ರಾಜಕೀಯ ಆರಂಭಿಸಿದರು. ಶಬರಿಮಲೆಯ ಅಯ್ಯಪ್ಪ ಸ್ವಾಮಿಗೆ ಸಂಬಂಧಪಟ್ಟಂತೆ ಪ್ರಚಲಿತವಿರುವ ಮಾಲೆ ಧರಿಸುವ ಪ್ರವೃತ್ತಿಯನ್ನು ಆಧರಿಸಿ ಜಿಲ್ಲೆಯಲ್ಲಿ ದತ್ತಮಾಲೆ ಅಭಿಯಾನ ಎಂಬ ಕಾರ್ಯ ಆರಂಭಿಸಿದರು. ವಿಶ್ವಮಾನವ ಸಂದೇಶ ಸಾರಿದ ರಾಷ್ಟ್ರಕವಿ ಕುವೆಂಪು ಜನ್ಮಸ್ಥಾನದ ಜಿಲ್ಲೆಯಲ್ಲಿ ಇಂದು ಕೋಮುವಾದದ ಸಂದೇಶವನ್ನು ಪ್ರತಿವರ್ಷ ಡಿಸೆಂಬರ್‌ನಲ್ಲಿ ದತ್ತಜಯಂತಿ ಮೂಲಕ ಸಂಘಪರಿವಾರದವರು ಸಾರುತ್ತಿದ್ದಾರೆ. ಈ

ಮಲ್ಲಿ

ಸುಂದರ ಮಲೆನಾಡಿಗೆ ಕಿಚ್ಚಿಡುತ್ತಿ

ದತ್ತಜಯಂತಿಗೆ ಮುಂಚಿತವಾಗಿ ಚಿಕ್ಕಮಗಳೂರು ಪಟ್ಟಣದಲ್ಲಿ ಶೋಭಯಾತ್ರೆ ಎಂಬ ಮೆರವಣಿಗೆ ನಡೆಸಿ ಪ್ರತಿವರ್ಷ ಕೋಮುಭಾವನೆ ಕೆರಳಿಸಿ ಕಳೆದ ಮೂರು-ನಾಲ್ಕು ವರ್ಷಗಳಲ್ಲಿ ಜಿಲ್ಲೆಯಲ್ಲಿ ಅನೇಕ ಸ್ಥಳಗಳಲ್ಲಿ ಕೋಮುಗಲಭೆ ಪ್ರಾಣಹಾನಿಗೆ ಕಾರಣಕರ್ತರಾಗಿರುತ್ತಾರೆ.

'ಬಾಬಾಬುಡನ್ ಗಿರಿ ಮೂಲತಃ ಹಿಂದೂಗಳ ಧಾರ್ಮಿಕ ಕ್ಷೇತ್ರ, ಇದಕ್ಕೆ ಚಾರಿತ್ರಿಕ ದಾಖಲೆಗಳಿವೆ, ಇದೆಂದೂ ಮುಸ್ಲಿಮರ ಧಾರ್ಮಿಕ ಕ್ಷೇತ್ರವಲ್ಲ' ಎಂದು ಬಜರಂಗದಳದ ಪ್ರಮೋದ್ ಮುತ್ಯಾಲಿಕ್, ಸಿ.ಟಿ.ರವಿ ಪತ್ರಿಕಾ ಹೇಳಿಕೆ ಪ್ರತಿವರ್ಷ ನೀಡುತ್ತಿದ್ದಾರೆ. ಆದರೆ ವಾಸ್ತವ ದಾಖಲೆಗಳ ಪ್ರಕಾರ ಹಿಂದೆ ಚಿಕ್ಕಮಗಳೂರಿನ ಜಿಲ್ಲಾಧಿಕಾರಿಯಾಗಿದ್ದ ಜಾನಪದ ತಜ್ಞ, ಸಾಹಿತಿ ಹೆಚ್.ಎಲ್. ನಾಗೇಗೌಡರು ತಮ್ಮ ಕೃತಿ 'ಬೆಟ್ಟದಿಂದ ಬಟ್ಟಲಿಗೆ' ಪುಸ್ತಕದಲ್ಲಿ ಚರಿತ್ರೆಯನ್ನು ಉಲ್ಲೇಖಿಸಿ ಬಾಬಾಬುಡನ್‌ಗಿರಿ ಹಿಂದೂ ಮುಸ್ಲಿಂಮರ ಧಾರ್ಮಿಕ ಕ್ಷೇತ್ರ ಎಂದು ಬರೆದಿರುತ್ತಾರೆ. ಪಾಟೀಲ ಪುಟ್ಟಪ್ಪನವರು ತಮ 'ಕರ್ನಾಟಕದ ಕಥೆ' ಪುಸ್ತಕದಲ್ಲೂ ಇದೇ ರೀ ಉಲ್ಲೇಖಿಸಿರುತ್ತಾರೆ. ಇತಿಹಾಸಕಾ ಡಾ.ಸೂರ್ಯನಾಥ್ ಕಾಮತರು ಪ್ರಧಾ ಸಂಪಾದಕರಾಗಿ ಸರ್ಕಾರದಿಂದ ಪ್ರಕಟಗೊಂಡಿರು ಚಿಕ್ಕಮಗಳೂರು ಜಿಲ್ಲಾ ಗೆಜೆಟಿಯರ್‌ನ ಹಲವಾ ಪುಟಗಳಲ್ಲಿ ಬಾಬಾಬುಡನ್ ಗಿರಿಯಲ್ಲಿನ ಇನಾ ದತ್ತಾತ್ರೇಯ ಪೀಠ ಹಿಂದೂ-ಮುಸ್ಲೀಮ ಬಾವೈಕ್ಯತೆಯ ಸಂಗಮದ ಕ್ಷೇತ್ರ ಎಂಬ ಉಲ್ಲೇ ಬಹಳಷ್ಟಿದೆ. ಚಿಕ್ಕಮಗಳೂರು ಜಿಲ್ ಶತಮಾನೋತ್ಸವ ಅಂಗವಾಗಿ ಪ್ರಕಟಗೊಂಡಿರು ಗ್ರಂಥದಲ್ಲಿ ಬಾಬಾಬುಡನ್‌ಗಿರಿ ಹಿಂದೂ ಮುಸ್ಲೀಮರ ಪವಿತ್ರ ಕ್ಷೇತ್ರ ಎಂಬ ಉಲ್ಲೇ ಹಲವಾರು ಖ್ಯಾತ ಲೇಖಕರ ಲೇಖನದ ಸ್ಪಷ್ಟವಾಗಿ ಮೂಡಿಬಂದಿದೆ. ಹೀಗಿರುವಾ ಚರಿತ್ರೆಯನ್ನೇ ತಿರುಚಲು ಹೊರಟಿರು

ಮುಸಿ
ಈ
ಬಾಬ
ಕಣ್ಣಿರ
ರವರೆಗೆ
ಮೂಲ
ವಿವಾ
ಸಂ
ಬಜರಂ
ದತ್ತಜ

ತೊಗಾಡಿಯಾ

ಒರಲುತ್ತಿದ್ದಾನೆ
ನೋಡಿ
ಓ..... ಅಲ್ಲಿ
ಹಿಂದೂ ಸಮಾಜೋತ್ಸವದ
ಆ ವೇದಿಕೆಯಲ್ಲಿ
ಪ್ರವೀಣ ಭಾಯ್ ತೊಗಾಡಿಯಾ
ಹಿಂದೂ ಧರ್ಮವೇನು
ಅವನ ಸ್ವಂತ
ಗಾಡಿಯಾ!?

- ಪ್ರಭಾಕರ ನೇರಳಕಟ್ಟೆ

...ವನತಿ?


...ರಂಗದಳದ ಪ್ರಮೋದ್ ಮುತ್ಯಾಲಿಕ್ ...ಟಕದ ಚರಿತ್ರೆ ರಚನೆಗೆ ಅಪಾರ ಕೊಡುಗೆ ...ರುವ ದೇಶ ವಿದೇಶಗಳ ಪ್ರಸಿದ್ಧ ಇತಿಹಾಸ ...ರಿಗೆ, ಸಂಶೋಧಕರಿಗೆ ಅಪಮಾನವೆಸಗಿರು ...ರೆ. ಚರಿತ್ರೆಯನ್ನು ತಿರುಚುವುದು ಸಂಘ ...ವಾರದವರ ಅಭ್ಯಾಸ ಬಲವಾಗಿಬಿಟ್ಟಿದೆ.

...ಯ ರಾಜಕಾರಣ

1992 ರವರೆಗೂ ಜಿಲ್ಲೆಯ ರಾಜಕಾರಣದಲ್ಲಿ ...ಮುವಾದಿಗಳಿಗೆ ಅವಕಾಶವಿರಲಿಲ್ಲ. ...ಮಜನ್ಮಭೂಮಿ ವಿಷಯದೊಂದಿಗೆ ...ಕೀಯದಲ್ಲಿ ಧರ್ಮ ಬೆರೆಸಲು ಆರಂಭಿಸಿದ ಬಿಜೆಪಿಯವರು ಚಿಕ್ಕಮಗಳೂರು ಜಿಲ್ಲೆಯಲ್ಲಿ ನೆಲೆ ಊರಲು ಪ್ರಯತ್ನಿಸುತ್ತಿದ್ದಾರೆ ಹಾಗೂ ಈ ಭಾಗವಾಗಿ ಬಾಬಾಬುಡನ್‌ಗಿರಿ ...ಯದ ಮೂಲಕ ಕೋಮುಭಾವನೆ ಕೆರಳಿಸಿ ...ರಾಜಕೀಯ ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ. ...ಕ್ಕೆ ಪೂರಕವಾಗಿ ಚುನಾವಣೆಯಲ್ಲಿ ಓಟು ...ಯುವ ಸರ್ಕಸ್‌ಗಾಗಿ ಕಾಂಗ್ರೆಸ್ ಸರ್ಕಾರ ...ಡಾ ಅನೇಕ ಆಟಗಳನ್ನು ಆಡುತ್ತಿದೆ. ...ಯೋಧ್ಯೆಯಲ್ಲಿ ಶಿಲಾನ್ಯಾಸಕ್ಕೆ ಅವಕಾಶ ...ಡಿಕೊಟ್ಟ ಕಾಂಗ್ರೆಸ್ ಬಾಬಾಬುಡನ್‌ಗಿರಿ ...ವನ್ನು ಮುಜುರಾಯಿ, ವಕ್ಫ್ ಇಲಾಖೆಗಳಿಗೆ ...ರ್ಯಿಸುತ್ತಾ ಅನಾವಶ್ಯಕ ಗೊಂದಲಗಳನ್ನು ...ಟ್ಟುಹಾಕಿತು. ಎಲ್ಲಾ ಕೋಮಿನವರನ್ನು ...ಕಸಭೆಗೆ ವಿಧಾನಸಭೆಗೆ ಚುನಾಯಿಸಿ ...ಹಿಸಿದ ಪರಂಪರೆ ಜಿಲ್ಲೆಯ ಜನತೆಗಿದೆ. ...ಮಗಳೂರಿನಿಂದ ಆರಿಸಿ ಬಂದ ಕ್ರೈಸ್ತ


...ರಿವಾರದವರು

...ರ್ಯರಾದ ಇವಾವಾಜ್ ರಾಜ್ಯದ ಪ್ರಥಮ ...ಟದರ್ಜೆ ಸಚಿವರಾಗಿದ್ದರು. ಇದೇ ರೀತಿ ...ವೆ ಮೋಟಮ್ಮ, ಸಚಿವರಾದ ...ಚಂದ್ರೇಗೌಡ, ಸಗೀರ್ ಅಹಮದ್, ಮಾಜಿ ...ಚಿವ ನಾರಾಯಣಗೌಡ, ನಿಂಗಯ್ಯ, ಸಜ್ಜನ ರಾಜಕಾರಣಿ ಎಂದು ಹೆಸರಾಗಿದ್ದ ಮಾಜಿ ಮುಖ್ಯಮಂತ್ರಿ ಕಡಿದಾಳ್ ಮಂಜಪ್ಪ, ಮಲೆನಾಡ ಗಾಂಧಿ ಎಂದು ಹೆಸರಾಗಿದ್ದ ಹೆಚ್.ಜಿ. ಗೋವಿಂದೇ ಗೌಡ, ಕೆ.ಹೆಚ್.ರಂಗನಾಥ್, ಮಾರ್ಗದ ಮಲ್ಲಪ್ಪ ಹೀಗೆ ಎಲ್ಲಾ ಧರ್ಮ ದವರು, ಕೋಮಿನವರು ಜಿಲ್ಲೆಯಿಂದ ಜನಪ್ರತಿನಿಧಿಗಳಾಗಿ ದ್ದಾರೆ. ಹಾಲೀ ವಿಧಾನಪರಿಷತ್ ಸಭಾಪತಿ ಬಿ.ಎಲ್.ಶಂಕರ್ ಸಹಾ ಚಿಕ್ಕಮಗಳೂರಿನವರು. ಆದರೆ ಬಹುಸಂಸ್ಕೃತಿ ಸರ್ವಧರ್ಮ ಸಮನ್ವಯದ ನೆಲೆಗೆ ಕಿಚ್ಚಿಡಲು ಹೊರಟಿರುವ ಬಿಜೆಪಿ, ಬಜರಂಗದಳ, ಸಂಘಪರಿವಾರ ದವರನ್ನು ತೀವ್ರವಾಗಿ ಹತ್ತಿಕ್ಕುವ ...ಜಕೀಯ ಇಚ್ಛಾಶಕ್ತಿ ಜಿಲ್ಲೆಯಿಂದ ಆರಿಸಿ ...ು ಮಂತ್ರಿಗಳಾಗಿರುವ ಕಾಂಗ್ರೆಸ್ ನಾಯಕರಿಗೆ ...ವಾಗಿದೆ. ಸಚಿವ ಡಿ.ಬಿ.ಚಂದ್ರೇಗೌಡರು ...ಜಯಂತಿ ಕಾರ್ಯಕ್ರಮಗಳಲ್ಲಿ ...ವಹಿಸುತ್ತಿರುವುದು ತೀರಾ ವಿಷಾದಕರ ಹಾಗೂ ...ಕೂಲಕರ ರಾಜಕಾರಣಕ್ಕೆ ಇವರೂ ಸಹ ...ಂದಾಗಿರುವುದು ಕಾಂಗ್ರೆಸ್ ಪಕ್ಷಕ್ಕೆ ...ಮುವಾದವನ್ನು ಎದುರಿಸುವ ದೃಢತೆ ಇಲ್ಲ ...ಬುದಕ್ಕೆ ಸಾಕ್ಷಿಯಾಗಿದೆ. ಅಲ್ಲದೆ ಕಡಿದಾಳ ...ಜಪ್ಪರಂತಹ ಸಜ್ಜನ ರಾಜಕಾರಣಿಯನ್ನು ...ದ ಜಿಲ್ಲೆಯ ಜನತೆಗೆ ಕೂಡಾ ಅವಮಾನದ ...ಮೆ.



...ಮಗಳೂರಿಗೆ ಇಂದು ಯಾವ ...ರಾಟದ ಅವಶ್ಯಕತೆಯಿದೆ?

...ಫಿ ಇಂದು ಚಿಕ್ಕಮಗಳೂರು ಜಿಲ್ಲೆಯ ...ುಖ್ಯ ಬೆಳೆ ಹಾಗೂ ಮುಖ್ಯ ಆರ್ಥಿಕ ...ಬು. ಜಿಲ್ಲೆಗೆ ಹಾಗೂ ಭಾರತಕ್ಕೆ ಕಾಫಿ ...ವರೇ ಬಾಬಾಬುಡನ್ ಸಾಹೇಬರು. ಕಾಫಿ ...ು ಮುಕ್ತ ಮಾರುಕಟ್ಟೆ ಸರಕಾಗಿದೆ. ಕೇಂದ್ರ ...ರಿ ಇಲಾಖೆಯ ಮಾರಾಟದ ಸ್ವತ್ತಾಗಿದ್ದ ಕಾಫಿ ಮೇಲಿನ ನಿಯಂತ್ರಣ ರದ್ದಾಗಿ ಒಂದು ದಶಕವಾಗಿದೆ. ದೇಶದ ಆಳುವ ಸರ್ಕಾರಗಳು ಮುಖ್ಯವಾಗಿ ಕೇಂದ್ರ ಬಿಜೆಪಿ ಸರ್ಕಾರ ಮುಕ್ತ ಆಮದುನೀತಿ ಅನುಸರಿಸಿ ಅನೇಕ ಕೃಷಿ ಉತ್ಪನ್ನಗಳ ಮೇಲಿನ ಆಮದು ನಿಯಂತ್ರಣ ತೆಗೆದು ಹಾಕಿದ ನಂತರ ವಿದೇಶದ ಕಾಫಿ ಭಾರತದ ಮಾರುಕಟ್ಟೆಗೆ ಬಂದು ದೇಶೀಯ ಕಾಫಿ ಬೆಲೆ ಬಹಳ ಕುಸಿದಿದ. ಹಿಂದೆ ದೇಶದ ಮುಖ್ಯ ರಫ್ತು ಉತ್ಪನ್ನವಾಗಿದ್ದ ಕಾಫಿ ಇಂದು ಬಹುರಾಷ್ಟ್ರೀಯ ಕಂಪನಿಗಳ ಏಕಸ್ವಾಮ್ಯತೆಯಿಂದಾಗಿ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆ ಕಳೆದುಕೊಂಡಿದೆ. ಕಳೆದ ನಾಲ್ಕು ವರ್ಷಗಳಿಂದ ಕಾಫಿ ಬೆಲೆ ಕುಸಿತದಿಂದಾಗಿ ಜಿಲ್ಲೆಯ ಜನತೆ, ಸಣ್ಣ ಬೆಳೆಗಾರರು, ತೋಟ ಕಾರ್ಮಿಕರು ಕಂಗಾಲಾಗಿರುತ್ತಾರೆ. ಸಣ್ಣ ಬೆಳೆಗಾರರು ಆತ್ಮಹತ್ಯೆ ಪ್ರಯತ್ನ ನಡೆಸಿದ ನಿದರ್ಶನಗಳಿವೆ. ಕಾಫಿಯನ್ನು ಆಧರಿಸಿಕೊಂಡಿದ್ದ ಜಿಲ್ಲೆಯ ಆರ್ಥಿಕ ಚಟುವಟಿಕೆ ಪೂರ್ಣ ಕುಸಿದಿದೆ. ಕಾಫಿ ಉತ್ಪಾದನಾ ವೆಚ್ಚ ಹೆಚ್ಚಾಗಿದೆ. ಪರಿಸ್ಥಿತಿಯ ಅನಿವಾರ್ಯತೆಯಿಂದಾಗಿ ತೋಟ ಕಾರ್ಮಿಕರು ಬಹಳ ಕಡಿಮೆ ಕೂಲಿಗೆ ದುಡಿಯುವ ಪ್ರಸಂಗ ಬಂದಿದೆ. ಕಾಫಿಗೆ ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರ ಘೋಷಿಸುತ್ತಿಲ್ಲ. ಬೆಳೆ ಸಾಲದ ಬಡ್ಡಿ ಮನ್ನಾ ಮಾಡಬೇಕೆಂದು, ಬೆಲೆ ಸಾಲ ವಸೂಲಾತಿಯನ್ನು ಮುಂದೂಡಬೇಕೆಂದು, ಕಾಫಿಗೆ ಬೆಂಬಲ ಬೆಲೆ ಘೋಷಿಸಬೇಕೆಂದು, ಕಾಫಿ ಆಮದು ತಡೆಯಬೇಕೆಂದು ಕೋರಿ ಜಿಲ್ಲೆಯ ಬೆಳೆಗಾರರು ಕಳೆದ ಎರಡು ವರ್ಷಗಳಿಂದ ಬೀದಿಗಿಳಿದು ಹೋರಾಟ ಮಾಡುತ್ತಿದ್ದರೂ ಕೇಂದ್ರ ಬಿಜೆಪಿ ಸರ್ಕಾರ ಕಣ್ಣುಮುಚ್ಚಿ ಕುಳಿತಿದೆ. ಮಂತ್ರಿ ಅನಂತಕುಮಾರ್ ಹಾಗೂ ಜಾರ್ಜ್ ಫರ್ನಾಂಡಿಸ್ ಬರೀ ಆಶ್ವಾಸನೆಗಳನ್ನು ನೀಡಿ ಕಾಲ ಹಾಕುತ್ತಿದ್ದಾರೆ. ಕಾಫಿ ಜೊತೆ ಉಪಬೆಳೆಗಳಾದ ಏಲಕ್ಕಿ, ಕಾಳು ಮೆಣಸು, ಅಡಿಕೆಗೆ ಕೂಡ ಉತ್ತಮ ಬೆಲೆ ಸಿಗುತ್ತಿಲ್ಲ. ವಿದೇಶದಿಂದ ಕಡಿಮೆ ಬೆಲೆಗೆ ಕಾಳು ಮೆಣಸು ಭಾರತಕ್ಕೆ ಆಮದಾಗುತ್ತಿರುವುದರಿಂದ ದೇಶೀಯ ಕಾಳು ಮೆಣಸಿನ ಬೆಲೆ ಕುಸಿದಿದೆ ಎಂದು ಕರ್ನಾಟಕ ಪ್ಲಾಂಟರ್ಸ್ ಅಸೋಷಿಯೇಷನ್ ಪದಾಧಿಕಾರಿಗಳೇ ಹೇಳುತ್ತಿದ್ದಾರೆ. ಜಿಲ್ಲೆಯಲ್ಲಿ ಹಲವಾರು ಕಡೆ ಇರುವ ಟೀ ತೋಟಗಳು ಸಮಸ್ಯೆ ಎದುರಿಸುತ್ತಿವೆ. ಮುಕ್ತ ಆರ್ಥಿಕ ನೀತಿಯ ಫಲವಾಗಿ ಒಂದು ವರ್ಷ ಕಾಲ ಮೂಗಿಗೆ ತುಪ್ಪ ಸವರಿಕೊಂಡು ಓಡಾಡಿದ ಜಿಲ್ಲೆಯ ಕಾಫಿ ಬೆಳೆಗಾರರು ಇಂದು ಬೆಲೆ ಕುಸಿತದಿಂದ ಬಸವಳಿದು ಮುಕ್ತ ಆರ್ಥಿಕ ನೀತಿ ಪರಿಣಾಮ ಏನೆಂದು ಕಂಡುಕೊಂಡಿರುತ್ತಾರೆ. ಅಲ್ಲದೆ ಸತತವಾಗಿ ಎರಡು



ವರ್ಷಗಳ ಬರ, ಮಳೆ ಅಭಾವ ಜಿಲ್ಲೆಯನ್ನು ಇನ್ನೂ ಕಾಡಿಸುತ್ತಿದೆ. ಜಿಲ್ಲೆಯ ಎರಡು ಬಯಲು ಸೀಮೆ ಪ್ರದೇಶದ ತಾಲ್ಲೂಕುಗಳಾದ ತರೀಕೆರೆ, ಕಡೂರು ಪ್ರದೇಶಗಳು ಬರದಿಂದ ಬೆಂಡಾಗಿವೆ. ಮಳೆ ಅಭಾವದ ಪ್ರಭಾವ ಕಾಫಿ, ಭತ್ತ, ಅಡಿಕೆ, ಏಲಕ್ಕಿ, ಕಾಳು ಮೆಣಸು ಬೆಳೆಗಳ ಮೇಲೆ ಕೂಡಾ ಆಗಿದೆ. ಬರಪರಿಹಾರ ಕಾಮಗಾರಿಗಳು ಯೋಜಿತವಾಗಿ ನಡೆಯುತ್ತಿಲ್ಲ. ಜಿಲ್ಲೆಯಲ್ಲಿ ಉದ್ಯೋಗ ಅವಕಾಶ ಕಲ್ಪಿಸುವ ಆರ್ಥಿಕ ಸದೃಢತೆ ಸಾಧಿಸಲು ಅನುಕೂಲವಾಗುವ ಯಾವುದೇ ಘನ ಹಾಗೂ ಮಧ್ಯಮ ಕೈಗಾರಿಕೆಗಳಿಲ್ಲ. ರೈಲ್ವೆ ಮಾರ್ಗ ಜಿಲ್ಲೆಯ ಒಂದು ಭಾಗದಲ್ಲಿ ಕೇವಲ 96 ಕಿ.ಮೀ ಮಾತ್ರವಿದೆ. ಚಿಕ್ಕಮಗಳೂರು ಜಿಲ್ಲಾ ಕೇಂದ್ರಕ್ಕೆ ರೈಲು ಮಾರ್ಗ ಕಲ್ಪಿಸುವ ಯೋಜನೆ ಕಾರ್ಯಗತವಾಗದೆ ಜಿಲ್ಲೆಯ ಕೈಗಾರಿಕಾ ಹಾಗೂ ಕೃಷಿ ಕ್ಷೇತ್ರದಲ್ಲಿ ಹೈನುಗಾರಿಕೆಯಲ್ಲಿ ಅಭಿವೃದ್ಧಿ ಕಾಣುತ್ತಿಲ್ಲ. ಕೆಲವು ಪಟ್ಟಣಗಳನ್ನು ಹೊರತುಪಡಿಸಿದರೆ ರಸ್ತೆ ಸಾರಿಗೆ ವ್ಯವಸ್ಥೆ ಕೂಡಾ ಅಸಮರ್ಪಕವಾಗಿರುವುದರಿಂದ ಉದ್ಯಮಗಳು ಬೆಳೆಯುತ್ತಿಲ್ಲ. ಜಿಲ್ಲೆಯ ಒಂದು ಪ್ರಮುಖ ಆರ್ಥಿಕ ಶಕ್ತಿಯಾಗಿದ್ದ ಸ್ಥಳೀಯರಿಗೆ ಉದ್ಯೋಗದ ಅವಕಾಶ ಕಲ್ಪಿಸಿದ್ದ ಕುದುರೆಮುಖ ಕಬ್ಬಿಣದ ಅದಿರುಗಣಿ ಕೂಡಾ ಮುಚ್ಚಲಿದೆ. ಅಭಯಾರಣ್ಯದ ನೆಪದಲ್ಲಿ ನೂರಾರು ವರ್ಷಗಳಿಂದ ಕಾಡಿನ ಮಕ್ಕಳಾಗಿ ವಾಸವಾಗಿದ್ದ ಆದಿವಾಸಿಗಳನ್ನು ಕೃಷಿಕರನ್ನು ಒಕ್ಕಲೆಬ್ಬಿಸಾಲಗುತ್ತಿದೆ. ಜಿಲ್ಲೆಯ ಕೃಷಿಗೆ ಅನುಕೂಲವಾಗುವಂತೆ ಯಾವುದೇ ಸಂಪೂರ್ಣ ನೀರಾವರಿ ಯೋಜನೆ ಜಿಲ್ಲೆಯಲ್ಲಿರುವುದಿಲ್ಲ. ಬಜರಂಗಿಗಳು ಶೋಭಾಯಾತ್ರೆ ನಡೆಸುವ ಚಿಕ್ಕಮಗಳೂರು ಪಟ್ಟಣ ಬಹಳ ವರ್ಷಗಳಿಂದ ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿದೆ. ಜಿಲ್ಲೆಯ ಜನತೆ ಎದುರಿಸುತ್ತಿರುವ ಈ ಎಲ್ಲಾ ಸಮಸ್ಯೆಗಳ ಬಗ್ಗೆ ಚಕಾರವೆತ್ತದ ಬಿಜೆಪಿ ಇದೀಗ

ಪುಟ 10 ಕ್ಕೆ

'ಬಾಬಾಬುಡನ್‌ಗಿರಿಯ ಕೋಮುಸೌಹಾರ್ದತೆ ಉಳಿಸಿ, ದತ್ತ ಜಯಂತಿ ನಿರ್ಬಂಧಿಸಿ'

ಡಿಸೆಂಬರ್ 2 ರಂದು ಜಿಲ್ಲಾ ಕೇಂದ್ರಗಳಲ್ಲಿ ಧರಣಿ

ಬಾಬಾ ಬುಡನ್‌ಗಿರಿಯ ದತ್ತ ಪೀಠವನ್ನು ದಕ್ಷಿಣ ಅಯೋಧ್ಯೆಯನ್ನಾಗಿ ಮಾಡುವುದಾಗಿ ಬಿಜೆಪಿ ಅಧ್ಯಕ್ಷ ಅನಂತಕುಮಾರ್ ಹೇಳುತ್ತಲೇ ದತ್ತಜಯಂತಿ ಹೆಸರಿನಲ್ಲಿ ವಿಧ್ವಂಸಕ ಕೃತ್ಯಗಳನ್ನು ಸಂಘ ಪರಿವಾರದ ಕಾರ್ಯಕರ್ತರು ಆರಂಭಿಸಿದ್ದಾರೆ. ಕೆಲವು ತಿಂಗಳುಗಳ ಹಿಂದೆ ಕರ್ನಾಟಕವನ್ನು ಗುಜರಾತ್ ಮಾಡುವುದಾಗಿ ವಿಶ್ವಹಿಂದೂ ಪರಿಷತ್‌ನ ಪ್ರವೀಣ್ ತೊಗಾಡಿಯಾ ಹೇಳಿದ್ದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು.

ಒಟ್ಟಾರೆಯಾಗಿ ಕೋಮು ಆಧಾರದಲ್ಲಿ ಜನ ಐಕ್ಯತೆಯನ್ನು ಮುರಿದು ಫ್ಯಾಸಿಸ್ಟ್ ಮಾದರಿ ಹಿಂದುತ್ವದ ರಾಷ್ಟ್ರ ನಿರ್ಮಿಸುವ ಗುರಿ ಸಂಘ ಪರಿವಾರದ ಆಕ್ಟೋಪಸ್‌ಗಳಿಗೆ. ಕೋಮುದ್ವೇಷವನ್ನು 2004 ರಲ್ಲಿ ನಡೆಯಲಿರುವ ಚುನಾವಣೆಯ ಸಂದರ್ಭದವರೆಗೆ ಪರಾಕಾಷ್ಟೆಗೆ ಕೊಂಡೊಯ್ಯಬೇಕೆಂಬುದು ಭಟ್ಟಂಗಿಗಳ ಬಯಕೆ.

10 ವರ್ಷಗಳ ಹಿಂದೆ 1994 ರ ಅಸೆಂಬ್ಲಿ ಚುನಾವಣೆಗೆ ಅನುಕೂಲವಾಗುವಂತೆ ಈದ್ಗಾ ಮೈದಾನ ವಿವಾದವನ್ನು ಇದೇ ರೀತಿ ಬೆಳಸಲಾಗಿತ್ತು. 1994 ಕ್ಕಿಂತ ಮೊದಲು ಆಡಳಿತ ನಡೆಸುತ್ತಿದ್ದ ಕಾಂಗ್ರೆಸ್ ಸರ್ಕಾರ ಈಗಿನಂತೆಯೇ ಮೃದು ಧೋರಣೆ ತಳೆದಿತ್ತು. ಕೇವಲ ಕಾನೂನಿನ ಪ್ರಶ್ನೆ ಎಂಬಂತೆ ನೋಡಿತ್ತು. ನಂತರ ಅಧಿಕಾರಕ್ಕೆ ಬಂದ ದೇವೇಗೌಡರ ನೇತೃತ್ವದ ಸರ್ಕಾರ ಬಿಜೆಪಿ ಮತ್ತು ಸಂಘ ಪರಿವಾರವನ್ನು ದೃಢವಾಗಿ ಎದುರಿಸಿತ್ತು. ಮತ್ತು ಒಂದು ಪರಿಹಾರ ಸೂಚಿಸಲಾಗಿತ್ತು. ಇದೀಗ ಬಿಜೆಪಿಯ ಚುನಾವಣಾ ಆಕಾಂಕ್ಷೆಗಳ ಪುನರಾವರ್ತನೆ ಆಗುತ್ತಿದೆ.

ಬಾಬಾಬುಡನ್ ಗಿರಿ ಸೂಫಿ ಸಂತರ ಕ್ಷೇತ್ರವೂ ಹೌದು ಹಾಗೂ ದತ್ತಾತ್ರೇಯ ಪಂಥದವರೂ ಇಲ್ಲಿದ್ದಾರೆ. ಸೂಫಿ ಸಂತರ ಸಮಾಧಿ ಮತ್ತು ದತ್ತಾತ್ರೇಯ ಯೋಗಿಯ ಸಮಾಧಿ ಒಟ್ಟೊಟ್ಟಿಗೆ ಇದೆ. ಇಂತಹ ಕ್ಷೇತ್ರವು ದೇಶದ ನೂರಾರು ಕಡೆಗಳಲ್ಲಿವೆ. ಹಿಂದೂ-ಮುಸ್ಲಿಂ ಸೌಹಾರ್ದತೆಯ ಸಂಕೇತ ಒಂದೆಡೆಯಾದರೆ, ಎರಡೂ ಧರ್ಮಗಳಲ್ಲಿನ ಮಾನವ ವಿರೋಧಿ ಅಂಶಗಳನ್ನು ವಿರೋಧಿಸಿ ಪ್ರತಿಭಟನಾ ರೂಪದಲ್ಲಿ ಈ ಪಂಥಗಳು ಹುಟ್ಟಿಕೊಂಡವು ಎನ್ನುವುದನ್ನು ಮರೆಯಲಾಗದು.

ಹೆಸರಾಂತ ಸಂಶೋಧಕ ಶಂ.ಬಾ.ಜೋಶಿಯವರು ಬಾಬಾಬುಡನ್ ಗಿರಿಯು ಹಿಂದೂ, ಮುಸಲ್ಮಾನರಿಬ್ಬರ ಯಾತ್ರಾ ಸ್ಥಳವಾಗಿದ್ದು ಅಲ್ಲಿನ ಪೂಜಾರಿ ಮುಸಲ್ಮಾನರಾಗಿದ್ದರು ಎಂಬುದನ್ನು ಉಲ್ಲೇಖಿಸಿದ್ದಾರೆ. ಈಗ ಹಿಂದೂ ಅರ್ಚಕರ ನೇಮಕ ಆಗಬೇಕು ಎಂಬ ಬೇಡಿಕೆ ಕೋಮು ವಾದೀಕರಣಗೊಳಿಸುವ ಹುನ್ನಾರ. ಶತಮಾನಗಳಿಂದ ಅನ್ಯೋನ್ಯವಾಗಿದ್ದ ಜನರಲ್ಲಿ ಧಾರ್ಮಿಕ ಉನ್ಮಾದವನ್ನು ಹಬ್ಬಿಸಿ, ದಾರಿ ತಪ್ಪಿಸುವ ಕೆಲಸ ಸಂಘ ಪರಿವಾರ ಮಾಡುತ್ತಿದೆ.

ಕರಾಳದಿನದ ಮರುಕಳಿಕೆ : ಕಳೆದ 3 ವರ್ಷಗಳಿಂದ ಡಿಸೆಂಬರ್ 19 ರಂದು ದತ್ತ ಜಯಂತಿಯನ್ನು ಆಚರಿಸಲಾಗಿತ್ತು. ಆದರೆ ಈ ಬಾರಿ ಡಿಸೆಂಬರ್ 6 ರಿಂದ 8 ರವರೆಗೆ ಇದನ್ನು ಆಚರಿಸಲಾಗುತ್ತಿದೆ. ಅಂದರೆ 11 ವರ್ಷಗಳ ಹಿಂದೆ ಬಾಬ್ರಿ ಮಸೀದಿಯನ್ನು ಕೆಡವಿದ ಕರಾಳ ದಿನದ ನೆನಪು ಮಾಡಿಕೊಡುವ ಪ್ರಯತ್ನ ನಡೆಯುತ್ತಿದೆ. ಇಂತಹ ಕುಕೃತ್ಯಗಳ ವಿರುದ್ಧ ಕಠೋರವಾದ ನಿಲುವನ್ನು ತೆಗೆದುಕೊಳ್ಳದಿದ್ದಲ್ಲಿ ತೀವ್ರ ಅನಾಹುತವಾಗುವ ಸಂಭವ ಇದೆ.

ಬಾಬಾಬುಡನ್‌ಸಾಬ್ ದತ್ತಪೀಠ ಕರ್ನಾಟಕದ ಅಯೋಧ್ಯೆ ಎಂದು ಒಂದು ವರ್ಷದ ಹಿಂದೆಯೇ ವಿಶ್ವ ಹಿಂದೂ ಪರಿಷತ್‌ನ ಪ್ರಧಾನ ಕಾರ್ಯದರ್ಶಿ ಪ್ರವೀಣ್ ತೊಗಾಡಿಯಾ ಹೇಳಿದ್ದರು. ಅದೇ ಸಂತತಿಯ ಅನಂತಕುಮಾರ್ ಈಗ ಪುನರುಚ್ಚರಿಸಿದ್ದಾರೆ. ತೊಗಾಡಿಯಾರ ಈ ಹೇಳಿಕೆಗೆ ವಿರೋಧಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್ ಕಳೆದ ವರ್ಷವೇ ಬೆಂಬಲಿಸಿದ್ದರು. 23.02.2003 ರಂದು ಜನವಾಹಿನಿಯಲ್ಲಿ ಪ್ರಕಟವಾದ ಸಂದರ್ಶನದಲ್ಲಿ 'ಅಯೋಧ್ಯೆ ಮಾದರಿಯ ಹೋರಾಟ ನಡೆಯಲಿ ಎಂಬುದು ತೊಗಾಡಿಯಾ ಹೇಳಿಕೆ ಸಾರಾಂಶ. ಅವರದು ಬ್ರಾಡರ್ ಔಟ್‌ಲುಕ್ ಹೇಳಿಕೆ' ಎಂದು ಸಮರ್ಥಿಸಿದ್ದರು. ಅಂದರೆ ಬಿಜೆಪಿ, ವಿಶ್ವಹಿಂದೂ ಪರಿಷತ್, ಬಜರಂಗದಳ ಎಲ್ಲಾ ಸಂಘಟನೆಗಳೂ ಯೋಜನಾಬದ್ಧವಾಗಿ ಒಂದೇ ಗುರಿಯಿರಿಸಿ ಈ ಕೆಲಸ ಮಾಡುತ್ತಿವೆ. ಇದಕ್ಕೆ ಕೇಂದ್ರ ಬಿಂದುವಾಗಿ ಇದರ ಮಾತೃಸಂಸ್ಥೆಯಾದ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಇದೆ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಮೇಲಿನ ಸಂದರ್ಶನದಲ್ಲಿ ಜಗದೀಶ್ ಶೆಟ್ಟರ್ ಮುಂದುವರಿದು "ಹಿಂದೂ ಅರ್ಚಕರ ನೇಮಕ, ದತ್ತ ಪಾದುಕೆಗಳ ಪ್ರತಿಷ್ಠಾಪನೆ ನಮ್ಮ ಬೇಡಿಕೆ' ಎಂದು ಹೇಳಿದ್ದರು. ಅದೇ ಹೇಳಿಕೆಯನ್ನು 13.11.2003 ರಂದು ಚಿಕ್ಕಮಗಳೂರಿನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಬಜರಂಗದಳದ ಸುನಿಲ್ ಕುಮಾರ್ ಹೇಳಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ ದಿನಕ್ಕೊಂದರಂತೆ ರೈತರ ಸರಣಿ ಆತ್ಮಹತ್ಯೆ ನಡೆಯುತ್ತಿದ್ದರೆ, ವಾರಕ್ಕೆ ಎರಡರಂತೆ ಕೋಮುಗಲಭೆಗಳು ನಡೆಯುತ್ತಿವೆ. ತನ್ನ ಜನವಿರೋಧಿ ನೀತಿಗಳಿಂದ ಜನ ಐಕ್ಯ ಹೋರಾಟ ನಡೆಸುತ್ತಾರೆಂಬ ಭಯದಿಂದ ಕೋಮುವಾದಿ ಗಳ ಅಟ್ಟಹಾಸದ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಕೃಷ್ಣ ಸರ್ಕಾರ ಹಿಂದೇಟು ಹಾಕುತ್ತಿದೆ. ಈ ಸರ್ಕಾರಕ್ಕೆ ಜನರ ಪ್ರಾಣ, ಆಸ್ತಿ, ಪಾಸ್ತಿ ನಷ್ಟವಾದರೆ ಲೆಕ್ಕಕ್ಕಿಲ್ಲ. ತನ್ನ ಕುರ್ಚಿ ಭದ್ರವಾಗಿರಬೇಕು ಅಷ್ಟೇ.

ಈ ನಿಟ್ಟಿನಲ್ಲಿ ಬಾಬಾಬಡನ್‌ಗಿರಿಯಲ್ಲಿ ಕೋಮು ಸಾಮರಸ್ಯವನ್ನು ರಕ್ಷಿಸಲು ಹಾಗೂ ದತ್ತ ಜಯಂತಿ, ದತ್ತ ಮಾಲೆ ಆಚರಣೆಯನ್ನು ನಿರ್ಬಂಧಿಸಬೇಕೆಂದು ಒತ್ತಾಯಿಸಿ ಸಿಪಿಐ(ಎಂ) ಡಿಸೆಂಬರ್ 2 ರಂದು ರಾಜ್ಯಾದ್ಯಂತ ಧರಣಿ ಕಾರ್ಯಕ್ರಮ ಹಮ್ಮಿಕೊಂಡಿದೆ. ಈ ಧರಣಿ ಕಾರ್ಯಕ್ರಮದಲ್ಲಿ ವಿವಿಧ ರಾಜಕೀಯ ಪಕ್ಷಗಳು, ಸಂಘಟನೆಗಳು ಹಾಗೂ ವ್ಯಕ್ತಿಗಳನ್ನು ಒಳಗೊಂಡು ವಿಶಾಲವಾದ ಪ್ರತಿಭಟನೆಯನ್ನು ನಡೆಸಲಾಗುವುದು. ಈ ಸಂದರ್ಭದಲ್ಲಿ ರಾಜ್ಯಾದ್ಯಂತ ಕೋಮು ಸೌಹಾರ್ದತೆಯನ್ನು ಕಾಪಾಡಬೇಕೆಂದೂ, ಕೋಮುವಾದಿಗಳ ಷಡ್ಯಂತ್ರಗಳನ್ನು ವಿಫಲಗೊಳಿಸಬೇಕೆಂದು ಜನತೆಯಲ್ಲಿ ಮನವಿ ಮಾಡಿದೆ.

ರೈತರ ಸರಣಿ ಆತ್ಮಹತ್ಯೆ, ಹಸಿವಿನ ಸಾವು ವಿರುದ್ಧ ರಾಜ್ಯಾದ್ಯಂತ ಪಿಕೆಟಿಂಗ್, ಪ್ರತಿಭಟನೆ

ಕೇಂದ್ರ ಮತ್ತು ರಾಜ್ಯ ಸರಕಾರಗಳು ಅನುಸರಿಸುತ್ತಿರುವ ಉದಾರೀಕರಣ, ಖಾಸಗೀಕರಣ, ಜಾಗತೀಕರಣ (ಉಖಾಜಾ) ನೀತಿಗಳ ವಿರುದ್ಧ ವಿವಿಧ ಹಂತಗಳ ಹೋರಾಟ ನಡೆಸಿದ ಮಾರ್ಕ್ಸ್‌ವಾದಿ ಭಾರತ ಕಮ್ಯುನಿಸ್ಟ್ ಪಕ್ಷವು ಈ ನೀತಿಗಳಿಂದಾಗಿ ರೈತರ ಸರಣಿ ಆತ್ಮಹತ್ಯೆ ಮತ್ತು ಹಸಿವಿನ ಸಾವುಗಳು ಸಂಭವಿಸುತ್ತಿದ್ದರೂ, ಅದನ್ನು ತಡೆಗಟ್ಟಲು ವಿಫಲವಾದ ಸರಕಾರಗಳ ವಿರುದ್ಧ, ನವೆಂಬರ್ 17 ರಂದು ರಾಜ್ಯದೆಲ್ಲೆಡೆ ಪಿಕೆಟಿಂಗ್, ಸಭೆ, ರ‍್ಯಾಲಿ ಮೆರವಣಿಗೆ ನಡೆಸಲು ಕರೆ ನೀಡಿತ್ತು. ಎಲ್ಲಾ ಬಡವರಿಗೂ ಹಳದಿ ಕಾರ್ಡನ್ನು ನೀಡಬೇಕು ಹಾಗೂ ಅಂತ್ಯೋದಯದ ದರದಲ್ಲಿ ರೇಷನ್ ಒದಗಿಸಬೇಕು, ಅರಣ್ಯಭೂಮಿ ಸಕ್ರಿಯಗೊಳಿಸಬೇಕು, ಬರ ಪ್ರದೇಶಗಳಲ್ಲಿ ಕೂಲಿಗಾಗಿ ಕಾಳುಯೋಜನೆಯಲ್ಲಿ ಕಾಮಗಾರಿಗಳನ್ನು ಕೈಗೆತ್ತಿಗೊಳ್ಳಬೇಕು, ರೈತರ ಸಾಲ ಮನ್ನಾ ಮಾಡಬೇಕು ಇತ್ಯಾದಿ ಒತ್ತಾಯಗಳನ್ನು ಮಾಡಲಾಗಿತ್ತು. ಈ ಕರೆಗೆ ರಾಜ್ಯಾದ್ಯಂತ ಉತ್ತಮ ಪ್ರತಿಕ್ರಿಯೆ ಬಂದಿದ್ದು 40 ಕ್ಕೂ ಹೆಚ್ಚು ಪ್ರಮುಖ ಕೇಂದ್ರಗಳಲ್ಲಿ ಪ್ರತಿಭಟನೆ ನಡೆದಿದೆ.

ಬೀದರ್: ಸಿಪಿಐ(ಎಂ) ಮುಖಂಡರು ಹಾಗೂ ವಕೀಲರಾದ ಸಂಗ್ರಾಮ್ ಅವರ ನೇತ್ರತ್ವದಲ್ಲಿ 400ಕ್ಕೂ ಹೆಚ್ಚು ರೈತರು, ಮಹಿಳೆಯರು ಪ್ರತಿಭಟನೆ ನಡೆಸಿ ಅಂತ್ಯೋದಯ ದರದಲ್ಲಿ ರೇಷನ್ ನೀಡಬೇಕೆಂದು ಒತ್ತಾಯಿಸಿದರು.

ಗುಲ್ಬರ್ಗಾ: ಜಿಲ್ಲೆಯ 8 ಕೇಂದ್ರಗಳಲ್ಲಿ 2000 ಕ್ಕೂ ಹೆಚ್ಚು ಸಿಪಿಐ(ಎಂ) ಕಾರ್ಯಕರ್ತರು ರೈತ, ಕಾರ್ಮಿಕರು, ಮಹಿಳೆಯರು ಪ್ರತಿಭಟನೆಯಲ್ಲಿ ಭಾಗವಹಿಸಿದ ವರದಿಯಾಗಿದೆ. ಆಳಂದ ತಾಲ್ಲೂಕು ಕೇಂದ್ರದಲ್ಲಿ ಆಹಾರ ಇಲಾಖೆ, ಖಜಾನ, ತಹಶೀಲ್ ಕಛೇರಿಗಳನ್ನು ಬಂದ್ ಮಾಡಿದ ಪ್ರತಿಭಟನಾಕಾರರು ಬಡವರಿಗೆ ಕಡಿಮೆ ದರದಲ್ಲಿ ರೇಷನ್ ನೀಡಬೇಕೆಂದು ಒತ್ತಾಯಿಸಿದರು. ಹಸಿವಿನಿಂದ ಸಾಯುತ್ತಿರುವವರನ್ನು ರಕ್ಷಿಬೇಕೆಂದು ಕರೆ ನೀಡಿದರು. ಚಳುವಳಿಯ ನೇತೃತ್ವವನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಹಾಗೂ ಜಿಲ್ಲಾಸಮಿತಿ ಕಾರ್ಯದರ್ಶಿ ಮಾರುತಿ ಮಾನ್ಪಡೆ ವಹಿಸಿದ್ದರು. ಚಿಂಚೋಳಿಯಲ್ಲಿ 400 ಕ್ಕೂ ಹೆಚ್ಚು ಜನರು ಪ್ರತಿಭಟನೆಯಲ್ಲಿ ಭಾಗವಹಿಸಿದ ವರದಿಗಳು ಬಂದಿದ್ದು, ಕಮಲಾಪುರ, ಶಾಹಪುರ, ಜೇವರ್ಗ, ಅಫ್‌ಜಲಪುರಗಳಲ್ಲೂ ಪ್ರತಿಭಟನೆ ನಡೆದಿದೆ. ದಿನಾಂಕ 18 ರಂದು ಮಹಾಗಾಂವ್ ಕ್ರಾಸ್‌ನಲ್ಲಿ ನಡೆದ ಪ್ರತಿಭಟನೆಯಲ್ಲಿ 300 ಕ್ಕೂ ಹೆಚ್ಚು ರೈತರು, ಮಹಿಳೆಯರು ಭಾಗವಹಿಸಿದ್ದು ಗುಲ್ಬರ್ಗಾದಲ್ಲಿ ನಡೆದ ಪ್ರತಿಭಟನೆಯ ನೇತೃತ್ವವನ್ನು ಸಿಪಿಐ(ಎಂ) ಗುಲ್ಬರ್ಗಾ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಮೇಘರಾಜಕಠಾರೆ ವಹಿಸಿದ್ದರು.



ಕುಂದಾಪುರದಲ್ಲಿ

ಬಿಜಾಪುರ: ರಾಜ್ಯಸಮಿತಿ ಸದಸ್ಯ ಭೀಮಸಿ ಕಲಾದಗಿಯವರ ನೇತೃತ್ವದಲ್ಲಿ 300 ಕ್ಕೂ ಹೆಚ್ಚು ಕಾರ್ಯಕರ್ತರು ಜಿಲ್ಲಾಧಿಕಾರಿಗಳ ಕಛೇರಿ ಮತ್ತು ಆಹಾರ ಇಲಾಖೆಯ ಮುಂದೆ 2 ತಾಸುಗಳ ಕಾಲ ಪ್ರತಿಭಟನೆ ಮತ್ತು ಧರಣಿ ನಡೆಸಿದರು. 150 ಕ್ಕೂ ಹೆಚ್ಚು ಮಹಿಳೆಯರಿದ್ದರು. ಇಂಡಿ ರೋಡ್‌ನಿಂದ ಮೆರವಣಿಗೆಯಲ್ಲಿ ಬಂದ ಪ್ರತಿಭಟನಾಕಾರರು ಪಡಿತರ ಚೀಟಿ ವಿತರಣೆಯಲ್ಲಿ ಆಗುತ್ತಿರುವ ಭ್ರಷ್ಟಾಚಾರವನ್ನು ಖಂಡಿಸಿದರು. ಕೊಳಚೆ ಪ್ರದೇಶದಲ್ಲಿ ನಾಗರಿಕ ಸೌಲಭ್ಯಗಳಿಗಾಗಿ ಒತ್ತಾಯಿಸಿದರು.

ನಗರ ಆಹಾರ ಮತ್ತು ನಾಗರಿಕ ಪೂರೈಕೆ ಕಛೇರಿಗೆ ಮಹಿಳೆಯರು ಮುತ್ತಿಗೆ ಹಾಕಿದಾಗ, 15 ದಿನಗಳಲ್ಲಿ ಪಡಿತರ ಚೀಟಿ ವಿತರಿಸುವುದಾಗಿ ಅಧಿಕಾರಿಗಳು ಆಶ್ವಾಸನೆ ನೀಡಿದ್ದಾರೆ.



ಬಿಜಾಪುರದಲ್ಲಿ

ಕಾರರನ್ನು ಉದ್ದೇಶಿಸಿ ಮಾತನಾಡಿದ ಸ್ಥಳೀಯ ಕಾರ್ಯದರ್ಶಿ ಟಿ.ನಿಂಗಣ್ಣ, 'ಒಂದೆಡೆ ಕೂಲಿಕಾರರು ಕೂಲಿ ಇಲ್ಲದೆ, ಅನ್ನಕ್ಕಾಗಿ ಅಲೆದಾಡುವ ಪರಿಸ್ಥಿತಿ ಇದೆ. ಇನ್ನೊಂದೆಡೆ ಗೋದಾಮುಗಳಲ್ಲಿ ಕೋಟಿಗಟ್ಟಲೆ ಟನ್ನು ಅಕ್ಕಿ ಗೆದ್ದಲು ಹಿಡಿದು ಹಾಳಾಗುತ್ತಿದ್ದರೂ, ಕೂಲಿಗಾಗಿ ಕಾಳು ಯೋಜನೆಯನ್ನು ಪ್ರಾರಂಭಿಸಿಲ್ಲ' ಎಂದು ದೂರಿದರು. ಟಿ.ತಿಪ್ಪೇಸ್ವಾಮಿ ಮತ್ತು ಕೆ.ವೀರಭದ್ರಪ್ಪನವರು ಮಾತನಾಡಿ, ಬಿಜೆಪಿ ಮತ್ತು ಕಾಂಗ್ರೆಸ್ ನೇತೃತ್ವದ ಸರಕಾರಗಳಡಿಯಲ್ಲಿ ಬಡವರ ಗೋಣು ಮುರಿದಿದ್ದು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ ಎಂದು ಹೇಳಿದರು. ಎಸ್.ರಾಜಣ್ಣ, ಬಿ.ನಾಗರಾಜ ಮಹಿಳಾ ಮುಖಂಡರಾದ ತಿಪ್ಪಮ್ಮ ಶಿವಮ್ಮ, ಪುಟ್ಟಮ್ಮ ಅಂಬೇಡ್ಕರ್ ನಗರದ ಗೌರಮ್ಮ ಮೊದಲಾದ ಮುಖಂಡರೂ ನೇತೃತ್ವ ವಹಿಸಿದ್ದ ಸಭೆಯಲ್ಲಿ ಮುಂದಿನ ದಿನಗಳಲ್ಲಿ ಇನ್ನೂ ಬೃಹತ್ತಾದ ಹೋರಾಟಗಳಿಗೆ ತಯಾರಿ ನಡೆಸಬೇಕೆಂದು ತೀರ್ಮಾನಿಸಲಾಯಿತು.



ಕೋಲಾರದಲ್ಲಿ

ಜನರಿಂದ ಉತ್ತಮ ಪ್ರತಿಕ್ರಿಯೆ

ರಾಜ್ಯ ಕಾಂಗ್ರೆಸ್ ಸರಕಾರ ಮತ್ತು ಕೇಂದ್ರ ಬಿಜೆಪಿ ಸರಕಾರದ ಜನವಿರೋಧಿ ನೀತಿಯನ್ನು ಖಂಡಿಸಿ ಮಾತನಾಡಿದ ಭೀಮಸಿ ಕಲಾದಗಿ, ವಿ.ಎಂ.ಸೊನ್ನದ, ಲಕ್ಷ್ಮಿ ಮೈಲಾರ, ಬಸಲಿಂಗ ಕಪಾಲ್ದಿ ಲಕ್ಷ್ಮಿಬಾಯಿ ಪಾಟೀಲ ಮತ್ತಿತರರು, ಬೇಡಿಕೆಗಳನ್ನು ಈಡೇರಿಸದೆ ಹೋದಲ್ಲಿ ಹೋರಾಟವನ್ನು ಮುಂದುವರಿಸುವುದಾಗಿ ಎಚ್ಚರಿಕೆ ನೀಡಿದರು.

ರಾಯಚೂರು : ತಾಲ್ಲೂಕು ಸಮಿತಿ ಕಾರ್ಯದರ್ಶಿ ಕರಿಯಪ್ಪ ಅಚ್ಚೊಳ್ಳಿ, ವೈ.ಈರಣ್ಣ, ಜಿ.ಎಸ್.ವೀರಭದ್ರ, ಜೋನಿ, ಖಾಜಿ ಹುಸೇನ್, ತಿಪ್ಪಣ್ಣ ಮೊದಲಾದವರ ನೇತೃತ್ವದಲ್ಲಿ ಸಿಪಿಐ(ಎಂ) ಕಛೇರಿಯಿಂದ ಮೆರವಣಿಗೆಯಲ್ಲಿ ತೆರಳಿದ ಪ್ರತಿಭಟನಾಕಾರರು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರಕಾರಗಳ ವಿರುದ್ಧ ಮುಗಿಲು ಮುಟ್ಟುವ ಘೋಷಣೆ ಕೂಗುತ್ತಾ ಆಹಾರ ಮತ್ತು ನಾಗರಿಕ ಇಲಾಖೆಗೆ ಮುತ್ತಿಗೆ ಹಾಕಲು ಪ್ರಯತ್ನಿಸುತ್ತಿದ್ದಾಗ ಪೊಲೀಸರು ತಡೆದರು. ನಂತರ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಜಿಲ್ಲಾ ನಿರ್ದೇಶಕರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಬಳ್ಳಾರಿ: ಜಿಲ್ಲೆಯ 5 ಕೇಂದ್ರಗಳಲ್ಲಿ ಸಾಧಾರಣ 1500 ಜನ ಪ್ರತಿಭಟನೆಯಲ್ಲಿ ಬಾಗವಹಿಸಿದ್ದ 750 ಕ್ಕೂ ಹೆಚ್ಚು ಮಂದಿ ಬಂಧಿತರಾಗಿ ಬಿಡುಗಡೆಯಾಗಿದ್ದಾರೆ. ಹೊಸಪೇಟೆಯಲ್ಲಿ 500 ಕ್ಕೂ ಹೆಚ್ಚು ಜನ ಪ್ರತಿಭಟನೆಯಲ್ಲಿ ಭಾಗವಹಿಸಿದ್ದು 203 ಮಂದಿ ಬಂಧಿತರಾಗಿದ್ದರು. ಜಿಲ್ಲೆಯ ಕುರುಗೋಡು, ಹಗರಿಬೊಮ್ಮನಹಳ್ಳಿ, ಸಿರುಗುಪ್ಪ ಮತ್ತು ಬಳ್ಳಾರಿ ಕೇಂದ್ರಗಳಲ್ಲಿ ಪ್ರತಿಭಟನೆ ನಡೆದಿದೆ.

ಚಳ್ಳಕೆರೆ ವರದಿ: ಚಳ್ಳಕೆರೆ ನಗರದ 500 ಕ್ಕೂ ಹೆಚ್ಚು ಕಾರ್ಮಿಕರು ಮತ್ತು ಮಹಿಳೆಯರು ಎ.ಪಿ.ಎಂ.ಸಿ. ಯಾರ್ಡ್ ಬಳಿ ಇರುವ ಶ್ರಮಿಕ ಭವನದಿಂದ ಬೃಹತ್ ಮೆರವಣಿಗೆ ನಡೆಸಿ ಸಮರಶೀಲ ಪ್ರತಿಭಟನೆ ನಡೆಸಿದರು. ತಾಲ್ಲೂಕು ಕಛೇರಿಗೆ ಮುತ್ತಿಗೆ ಹಾಕಿ ಬೇಡಿಕೆಗಳನ್ನು ಈಡೇರಿಸಬೇಕೆಂದು ಘೋಷಣೆ ಕೂಗುತ್ತಿರುವ ಸಂದರ್ಭದಲ್ಲಿ ಪೊಲೀಸರು 400 ಕ್ಕೂ ಹೆಚ್ಚು ಮಂದಿಯನ್ನು ಬಂಧಿಸಿ ನಂತರ ಬಿಡುಗಡೆ ಮಾಡಿದರು. ಬಂಧನಕ್ಕೆ ಮೊದಲು ಚಳುವಳಿ

ತುಮಕೂರು : ನವೆಂಬರ್ 18 ರಂದು ಬೀಡ ಕಾರ್ಮಿಕರು, ಮಹಿಳೆಯರು ಜಿಲ್ಲಾಧಿಕಾರಿ ಕಛೇರಿ ಮುಂದೆ ಧರಣಿ ನಡೆಸಿದ್ದು ರಾಜ್ಯಸಮಿತಿ ಸದಸ್ಯ ಸಯ್ಯದ್ ಮುಜೀಬ್, ಹಿರಿಯ ಸಿಐಟಿಯು ಮುಖಂಡ ಮಹಮ್ಮದ್ ದಸ್ತಾಗೀರ್, ಪ್ರಾಂತ ರೈತ ಸಂಘದ ಮುಖಂಡ ಬಿ.ಉಮೇಶ್ ಮೊದಲಾದವರು ನೇತೃತ್ವ ವಹಿಸಿದ್ದರು. ಅಲ್ಲದೆ ಕೊಳಗೇರಿ ಹಿತರಕ್ಷಣಾ ಸಮಿತಿಯ ಎ.ತಿರುಮಲಯ್ಯ, ಡಿವೈಎಫ್ಐ ಮುಖಂಡರಾದ ಎನ್.ಕೆ.ಸುಬ್ರಮಣ್ಯ, ಮುನಾಫ್ ಮೊದಲಾದವರು ಭಾಗವಹಿಸಿದ್ದರು.

ಮೈಸೂರು: ಪಕ್ಷದ ಜಿಲ್ಲಾ ಕಾರ್ಯದರ್ಶಿ ಪ್ರಭಾಕರ್, ಸಿಐಟಿಯು ಜಿಲ್ಲಾ ಅಧ್ಯಕ್ಷ ಜಯರಾಮ್ ಮೊದಲಾದವರ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಗಳ ಕಛೇರಿ ಮುಂದೆ ಧರಣಿ ನಡೆಸಲಾಗಿತ್ತು.

ದಕ್ಷಿಣ ಕನ್ನಡ ಜಿಲ್ಲೆ: ಮಂಗಳೂರಿನಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಪಿಕೆಟಿಂಗ್ ನಡೆಸಿದ 300 ಕ್ಕೂ ಹೆಚ್ಚು ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದರು.



ಕೆಜಿಎಫ್‌ನಲ್ಲಿ

ಮುಖಂಡರಾದ ಕೆ.ಆರ್.ಶ್ರಿಯಾನ್, ಬಿ.ಮಾಧವ, ಜೆ.ಬಾಲಕೃಷ್ಣ ಶೆಟ್ಟಿ ಮೊದಲಾದವರ ನೇತೃತ್ವದಲ್ಲಿ ನಡೆದ ಪ್ರತಿಭಟನೆಯನ್ನು ಉದ್ದೇಶಿಸಿ ಶ್ರಿಯಾನ್‌ರವರು ಮಾತನಾಡುತ್ತ, 'ರೈತರ ಆತ್ಮಹತ್ಯೆಗಳಿಗೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ಅನುಸರಿಸುತ್ತಿರುವ ಉದಾರೀಕರಣ ನೀತಿಯೇ ಕಾರಣ ಎಂದು ಹೇಳಿದರು. ಈ ನೀತಿಗಳನ್ನು ಅನುಸರಿಸುವ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳನ್ನು ಸೋಲಿಸಬೇಕೆಂದು ಕರೆ ನೀಡಿದ ಅವರು ಸಂಘಟಿತರಾಗಿ ಹೋರಾಡಬೇಕೆಂದೂ ಕರೆ ನೀಡಿದರು.

ಕೇಂದ್ರದ ಬಿಜೆಪಿ ನೇತೃತ್ವದ ಸರಕಾರವು ಅನುಸರಿಸುತ್ತಿರುವ ಉದಾರೀಕರಣದ ನೀ
ಹೊರತಾಗಿಯೂ ಸಿಪಿಐ(ಎಂ) ನೇತೃತ್ವದ ಪ
ಬಂಗಾಳ ಮತ್ತು ತ್ರಿಪುರ ಸರಕಾರಗಳು
ಹಾಗೂ ಬಡಜನರ ಪರವಾಗಿ ಹಾಕಿ
ಕಾರ್ಯಕ್ರಮಗಳಿಂದಾಗಿ ಅಲ್ಲಿ ಆತ್ಮ
ನಡೆಯುತ್ತಿಲ್ಲವೆಂದೂ, ಉಪವಾಸ
ಸಾಯುತ್ತಿಲ್ಲವೆಂದೂ ರಾಜ್ಯ ಕಾಯದರ್ಶಿ ಮ
ಸದಸ್ಯ ಬಿ.ಮಾಧವ ಎತ್ತಿ ಹೇಳಿದರು.

ಜಿಲ್ಲೆಯ ಬೆಳ್ತಂಗಡಿ, ಬಂಟ್ವಾಳ,
ತಾಲ್ಲೂಕು ಕೇಂದ್ರಗಳಲ್ಲಿ ಪಿಕೆಟಿಂಗ್ ನಡೆ

ಉಡುಪಿ: ಜಿಲ್ಲೆಯ ಉಡುಪಿ
ಕುಂದಾಪುರ ಕೇಂದ್ರಗಳಲ್ಲಿ ಪಿಕೆಟಿಂಗ್ ನ
ಉಡುಪಿಯಲ್ಲಿ 300 ಮಂದಿ ರೈತ ಕಾರ್ಮಿ
ಬಂಧಿಸಿ, ಬಿಡುಗಡೆ ಮಾಡಿದ ವರದಿಯಾ
ಕುಂದಾಪುರದಲ್ಲಿ 2000 ಕ್ಕೂ ಹೆಚ್ಚು ಕಾರ್ಯ
ಬಂಧನಕ್ಕೊಳಗಾಗಿದ್ದಾರೆ.

ಉಡುಪಿಯಲ್ಲಿ ತಾಲ್ಲೂಕು ಕಛೇರಿ ಎ
ನಡೆದ ಚಳುವಳಿಯಲ್ಲಿ ಮುಖಂಡರಾದ ಡೆ
ಕರ್ಕಡ, ಸಾಧು ಅಮಿನ್, ದೋಗು ಸು
ವಿಠ್ಠಲ ಪೂಜಾರಿ ಮೊದಲಾದವರು
ವಹಿಸಿದ್ದು, ತಾಲ್ಲೂಕು ಕಾರ್ಯದರ್ಶಿ
ರಾಜ್ಯಸಮಿತಿ ಸದಸ್ಯ ಪಿ.ವಿಶ್ವನಾ
ಮಾತನಾಡಿದರು.

ಕುಂದಾಪುರದಲ್ಲಿ ರಾಜ್ಯಸಮಿತಿ
ಹಾಗೂ ಜಿಲ್ಲಾ ಕಾರ್ಯದರ್ಶಿ ಕೆ.ಶ
ಪುರಸಭೆಯ ಮಾಜಿ ಅಧ್ಯಕ್ಷರಾದ ವಿ.ನರ
ತಾಲ್ಲೂಕು ಕಾರ್ಯದರ್ಶಿ ಮಹಾಬಲ
ಹೋಬಳಿ ಹಾಗೂ ಮುಖಂಡ
ಸಿ.ನಾರಾಯಣ, ಹೆಚ್.ನರಸಿಂಹ
ಯು.ದಾಸ ಭಂಡಾರಿಯವರು ಪಿಕೆಟಿಂಗ್‌ನ
ವಹಿಸಿದ್ದರು.

ರಾಜ್ಯಮಟ್ಟದ ಬೇಡಿಕೆಯಲ್ಲದೆ,
ನೀರಾವರಿ ಯೋಜನೆಯನ್ನು ಪೂರ್ಣ
ಬೇಕು, ಬ್ರಹ್ಮಾವರ ಸರಕಾರಿ
ಕಾರ್ಖಾನೆಯನ್ನು ರಕ್ಷಿಸಬೇ
ಪ್ರತಿಭಟನಾಕಾರರು ಒತ್ತಾಯಿಸಿದರು.

ಕೋಲಾರ: ಜಿಲ್ಲೆಯಲ್ಲಿ 2500 ಕ್ಕೂ
ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗ
ವರದಿಗಳು ಬಂದಿವೆ. ಕೆ.ಜಿ.ಎಫ್.ನ
ಕ್ಕೂ ಹೆಚ್ಚು ಕಾರ್ಯಕರ್ತರು ಪ್ರತಿಭ
ಭಾಗವಹಿಸಿದ್ದು, ಬಾಗೇಪಲ್ಲಿಯಲ್ಲಿ
ಗುಡಿಬಂಡೆ 250, ಗೌರಿಬಿದನೂರು,
ಶ್ರೀನಿವಾಸಪುರ, ಕೋಲಾರಗಳಲ್ಲಿ ಪ್ರ
ನಡೆದಿದೆ. ರಾಜ್ಯ ಸಮಿತಿ ಸದಸ್ಯ, ಮಾ
ಹಾಗೂ ಜಿಲ್ಲಾ ಕಾಯ
ಜಿ.ವಿ.ಶ್ರೀರಾಮರೆಡ್ಡಿಯವರು ಬಾಗೇಪ
ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ರಾ
ಸದಸ್ಯ, ಮಾಜಿ ಶಾಸಕ ಟಿ.ಎಸ್.ಮ

ದೇಶದ ವಿದ್ಯಾರ್ಥಿ ಸಮುದಾಯು ಮತ್ತೊಮ್ಮೆ ಆಳುವ ಸರ್ಕಾರಗಳ ಶಿಕ್ಷಣ ವಿರೋಧಿ ನೀತಿಗಳನ್ನು ಪ್ರತಿರೋಧಿಸಿ ಸಂಘರ್ಷಕ್ಕೆ ಸಜ್ಜಾಗಿ ನಿಂತಿದೆ. ಶಿಕ್ಷಣ ವ್ಯಾಪಾರೀಕರಣದ ಅಬ್ಬರದ ಅಲೆ ಶಿಕ್ಷಣಾಕಾಂಕ್ಷಿ ವಿದ್ಯಾರ್ಥಿ ಸಮುದಾಯದ ಮೇಲೇರಗಿ ಒಂದರ ಹಿಂದೊಂದರಂತೆ ಧಾಳಿ ನಡೆಸಿರುವಾಗ ಮತ್ತೊಂದು ಐತಿಹಾಸಿಕ ಹೋರಾಟಕ್ಕೆ ಸಾಮೂಹಿಕ ಕಾರ್ಯಾಚರಣೆಗೆ ಸ್ಥಿರತೆಗಳು ತೀವ್ರಗೊಂಡಿವೆ.

ಶಿಕ್ಷಣ ವ್ಯಾಪಾರೀಕರಣ-ಪ್ರಜಾಸತ್ತಾತ್ಮಕ ಹಕ್ಕುಗಳ ದಮನದ ವಿರುದ್ಧ ಚಾರಿತ್ರಿಕ ಸಂಘರ್ಷ

ಡಿಸೆಂಬರ್ 11 ವಿದ್ಯಾರ್ಥಿ ಮುಷ್ಕರ

ಆರ್.ರಾಮಕೃಷ್ಣ

ವೈದ್ಯಕೀಯ- ತಾಂತ್ರಿಕ ಶಿಕ್ಷಣದ ಶುಲ್ಕಗಳು ಗಗನಕ್ಕೇರಿ ಬಡ ಮಕ್ಕಳಿಗಿರಲಿ ಮಧ್ಯಮ- ಮೇಲ್ ಮಧ್ಯಮ ವರ್ಗದ ಮಕ್ಕಳಿಗೇ ವೃತ್ತಿ ಶಿಕ್ಷಣ ಗಗನ ಕುಸುಮವಾಗಿದೆ. ಈಗ ಆಗಿರುವ ಶುಲ್ಕ ಏರಿಕೆ ಕಾಲದೆಂದೂ ಅದು ಮುಂದಿನ ವರ್ಷ ಮತ್ತೂ ಸಹ ಶುಲ್ಕ ಏರಿಸುವ ಸಿದ್ಧತೆಗಳು ಸಾಂಗವಾಗಿ ನಡೆದಿವೆ. ಸಾಮಾನ್ಯ ಶಿಕ್ಷಣದ ಮೇಲೆ ವ್ಯಾಪಾರೀಕರಣದ ಅಸಮಾನ್ಯ ಧಾಳಿಯೇ ನಡೆದಿದೆ.

ಈ ಎಲ್ಲಾ ನೀತಿಗಳ ಭಾಗವಾಗಿ ವಿದ್ಯಾರ್ಥಿ ಶಿಕ್ಷಕ ಸಮುದಾಯದ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ದಮನಿಸುವ ಕೆಲಸವನ್ನು ಆಳುವ ಸರ್ಕಾರಗಳನ್ನು ತೀವ್ರಗೊಳಿಸಿವೆ. ಮಾತ್ರವಲ್ಲ ಸಂಘಪರಿವಾರದ ಮತಾಂಧ ವಿಚಾರ ಧಾರೆಯ ಆಧಾರದಲ್ಲಿ ಶಿಕ್ಷಣವನ್ನು ಕೋಮುವಾದೀಕರಿಸುವ ಯತ್ನ ಸಹ ನಡೆದಿದೆ. ಕಾಂಗ್ರೆಸ್ ಆಡಳಿತವಿರುವ ಕರ್ನಾಟಕದಲ್ಲಿ ಸಹ ಪಠ್ಯಪುಸ್ತಕಗಳು ಕೋಮುವಾದೀಕರಣಗೊಂಡಿವೆ.

ವೃತ್ತಿ ಶಿಕ್ಷಣ ಬಿಕ್ಕಟ್ಟು

1992 ರಲ್ಲಿ 'ಉನ್ನಿ ಕೃಷ್ಣನ್ V/s ಆಂಧ್ರ ಸರ್ಕಾರ ಪ್ರಕರಣದಲ್ಲಿ ವೃತ್ತಿ ಶಿಕ್ಷಣದಲ್ಲಿ ಶಿಕ್ಷಣದ ವ್ಯಾಪಾರೀಕರಣದ ವಿರುದ್ಧ-ಪ್ರತಿಭೆ ಮತ್ತು ಸಾಮಾಜಿಕ ನ್ಯಾಯದ ಪರವಾಗಿ ನೀಡಿದ ನಂತರ ಸರಿ ಸುಮಾರು ಒಂದು ದಶಕಗಳ ಕಾಲ ಜಾರಿಯಲ್ಲಿದ್ದ ಉಚಿತ ಸೀಟು ಕಲ್ಪನೆಗೆ ಇದೀಗ ಟಿ.ಎಂ.ಎ.ಪೈ V/s ಕರ್ನಾಟಕ ಸರ್ಕಾರ' ಪ್ರಕರಣದ ಸುಪ್ರಿಂ ಕೋರ್ಟ್ ತೀರ್ಪು ಆಘಾತ ನೀಡಿದೆ.

ಸರ್ಕಾರದಿಂದ ಅನುದಾನ ಪಡೆಯದ ಕಾರಣ ಅನುದಾನರಹಿತ ಖಾಸಗಿ ವೃತ್ತಿಶಿಕ್ಷಣ ಸಂಸ್ಥೆಗಳ ಪ್ರವೇಶ ನೀತಿ ಹಾಗೂ ಶುಲ್ಕ ಸ್ವರೂಪ-ನೀತಿ ನಿರ್ಧರಿಸಲು ಸರ್ಕಾರಕ್ಕೆ ಹಕ್ಕಿಲ್ಲ ಎಂದು ನ್ಯಾಯಾಲಯ ತೀರ್ಪಿತ್ತಿದೆ.

ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಶೇ.50 ರಷ್ಟು ಸ್ಥಾನಗಳನ್ನು ಉಚಿತ-ಸೀಟು ನೀತಿ ಅಡಿಯಲ್ಲಿ ಪ್ರತಿಭಾವಂತರು ಹಾಗೂ ಆರ್ಥಿಕವಾಗಿ ಸಾಮಾಜಿಕವಾಗಿ ಹಿಂದುಳಿದ ವಿಭಾಗ ವಿದ್ಯಾರ್ಥಿಗಳಿಗೆ ಕಡಿಮೆ ಶುಲ್ಕದಲ್ಲಿ ನೀಡುವ ಅಡ್ಡ ಸಹಾಯಧನ (Cross subsidy) ನೀತಿಯನ್ನು ಸುಪ್ರಿಂ ಕೋರ್ಟ್ ರದ್ದುಪಡಿಸಿದೆ.

ಕಳೆದ ಶೈಕ್ಷಣಿಕ ವರ್ಷದಲ್ಲಿ ಖಾಸಗಿ ಅನುದಾನರಹಿತ ಕಾಲೇಜಿನಲ್ಲಿ ಸಹ 16,200-00 ವಾರ್ಷಿಕ ಶುಲ್ಕದಲ್ಲಿ ವಿದ್ಯಾರ್ಥಿಯೊಬ್ಬ ವೈದ್ಯಕೀಯ ಶಿಕ್ಷಣ ಪಡೆಯುತ್ತಿದ್ದ ಪರಿಸ್ಥಿತಿಗೆ ಬದಲಿಗೆ ಈಗ ಅದೇ ವಿದ್ಯಾರ್ಥಿ ಈಗ 1,97,000 ರೂ.ಗಳನ್ನು ತರಬೇಕಿದೆ. ಅದೇ ರೀತಿ ತಾಂತ್ರಿಕ ಶಿಕ್ಷಣ ಶುಲ್ಕ ದಂತ ವೈದ್ಯಕೀಯ ಶಿಕ್ಷಣ ಶುಲ್ಕಗಳೂ ಏರಿಕೆಯಾಗಿದೆ.


ಇಂತಹ ಒಂದು ಶಿಕ್ಷಣ ವಿರೋಧಿ ತೀರ್ಪು ಹೊರಬಂದ ಕೂಡಲೇ ಕೇಂದ್ರ ಸರ್ಕಾರವು ಕೇಂದ್ರೀಯ ಶಾಸನದ ಮೂಲಕ ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಸಾಮಾಜಿಕ ಹಿಡಿತ ಸಾಧಿಸಲು ಕ್ರಮ ಕೈಗೊಳ್ಳಬೇಕಿದ್ದಿತು. ಪ್ರವೇಶ ನೀತಿ-ಶುಲ್ಕಗಳನ್ನು ನಿಯಂತ್ರಿಸಬೇಕಿತ್ತು. ಆದರೆ ಇದರ ವಿರುದ್ಧ ಕೇಂದ್ರ ಸರ್ಕಾರ ಕೈಗೊಂಡ ಕ್ರಮ ಎಂದರೆ, ಎಲ್ಲಾ ರಾಜ್ಯಸರ್ಕಾರಗಳೂ ಸಹ ಉಚಿತ-ಸೀಟುಗಳ ಕಡಿಮೆ ಶುಲ್ಕ ಸ್ವರೂಪ ರದ್ದುಪಡಿಸಿ ಏಕ ರೂಪದ ಶುಲ್ಕ ಸ್ವರೂಪ ನಿಗದಿಪಡಿಸಬೇಕೆಂದು ಸುತ್ತೋಲೆ ಹೊರಡಿಸಿದ್ದು!

ಭಾರತೀಯ ಜನತಾ ಪಕ್ಷದ ಬಾಲಂಗೋಚಿ, ಸಂಘಪರಿವಾರದ ಅಂಗವಾದ ಎಬಿವಿಪಿಯು ರಾಜ್ಯದಲ್ಲಿ ಕೇವಲ ರಾಜ್ಯ ಸರ್ಕಾರದ ವಿರುದ್ಧ ಬೊಬ್ಬೆ ಹೊಡೆಯುತ್ತಿದೆಯೇ ಹೊರತು ಕೇಂದ್ರ ಸರ್ಕಾರದ ಹೊಣೆಗೇಡಿತನದ ಬಗ್ಗೆ ಬಾಯೇ ಬಿಚ್ಚುತ್ತಿಲ್ಲ.

ರಾಜ್ಯದಲ್ಲಿ ಹಲವು ಹಂತಗಳ ಸಂಘರ್ಷದ ನಂತರ ಸರ್ಕಾರ ಮತ್ತು ಖಾಸಗಿ ಆಡಳಿತ ಮಂಡಳಿಗಳ ನಡುವೆ ಖಾಜಿ ನ್ಯಾಯ ನಡೆದು ಸೀಟು ಹಂಚಿಕೆ ವಿಚಾರದಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆ(CET)ಯ ಮೂಲಕ ಶೇ.75 ಸ್ಥಾನಗಳನ್ನು ಮಾತ್ರ ತುಂಬಿಕೊಳಲು ಆಡಳಿತ ಮಂಡಳಿ ಒಪ್ಪಿವೆ. ಈ ವ್ಯವಸ್ಥೆ ಈ ಶೈಕ್ಷಣಿಕ ವರ್ಷಕ್ಕೆ ಮಾತ್ರ ಅನ್ವಯಿಸಲಿದೆ. ಮುಂದಿನ ವರ್ಷಗಳಲ್ಲಿ ಆಡಳಿತ ಮಂಡಳಿಗಳು ತಮ್ಮದೇ ಆದ ಪ್ರವೇಶ ನೀತಿ ರೂಪಿಸಿಕೊಳ್ಳಲು ಹಾಗೂ ತಾವೇ ಶುಲ್ಕ ನಿಗದಿಪಡಿಸಿಕೊಳ್ಳಲು ಪೂರಕವಾದ ತರ್ಕ ಮತ್ತು ತೀರ್ಪನ್ನು ಸರ್ವೋಚ್ಚ ನ್ಯಾಯಾಲಯ ನೀಡಿದೆ.

ಶಿಕ್ಷಣ ಸಂಸ್ಥೆಯ ಗುಣಮಟ್ಟ, ಮೂಲಭೂತ ಸೌಕರ್ಯಗಳು, ಶಿಕ್ಷಕ-ಸಿಬ್ಬಂದಿ ವರ್ಗದ ವೇತನಗಳ ಅಗತ್ಯವನ್ನು ಹಾಗೂ ಸಂಸ್ಥೆಯ ಭವಿಷ್ಯದ ಯೋಜನೆಯಗಳನ್ನು ಆಧರಿಸಿ ಶುಲ್ಕ ಸ್ವರೂಪವನ್ನು ನಿಗದಿಪಡಿಸಿಕೊಳ್ಳಲು ತೀರ್ಪು ಅವಕಾಶ ನೀಡಿದೆ. ಈಗ ಏರಿಕೆಯಾಗಿರುವ ಶುಲ್ಕ ಸ್ವರೂಪದಲ್ಲಿ ಐಎಎಸ್ ಅಧಿಕಾರಿಗಳ ಮಕ್ಕಳೇ ವೈದ್ಯಕೀಯ ಶಿಕ್ಷಣಕ್ಕೆ ಬರುವುದು ದುಸ್ತರವಾಗಿದೆ. ವಿವಿಧ ಶಿಕ್ಷಣ ಸಂಸ್ಥೆಗಳ ಶುಲ್ಕ ಸ್ವರೂಪ ನಿಗದಿಪಡಿಸಲು ನಿವೃತ್ತ ನ್ಯಾಯಾಧೀಶರನ್ನೊಳಗೊಂಡ ಸಮಿತಿಯೊಂದನ್ನು ನೇಮಿಸಲು ತೀರ್ಪಿನಲ್ಲಿ ಸೂಚಿಸಲಾಗಿದೆ. ಯಾರು ಈ ನಿವೃತ್ತ ನ್ಯಾಯಾಧೀಶರು? ಜನತೆಯ ಪ್ರಶ್ನೆಗೆ ಉತ್ತರಿಸಬೇಕಾದ ಬದ್ಧತೆ, ಉತ್ತರದಾಯಿತ್ವ ಈ ನಿವೃತ್ತ ನ್ಯಾಯಾದೀಶರಿಗೇನಿದೆ?

ಕರ್ನಾಟದಲ್ಲಿ ಈಗ ಜಾರಿಯಾಗಿರುವ ಶುಲ್ಕ ಸ್ವರೂಪವನ್ನು ನಿಗದಿಪಡಿಸಿರುವುದು ರಾಜ್ಯ ಹೈಕೋರ್ಟ್, ವೈದ್ಯಕೀಯ- ತಾಂತ್ರಿಕ ಶಿಕ್ಷಣ ನಿಗದಿಪಡಿಸುವುದು, ಕಬ್ಬನ್ ಪಾರ್ಕ್ ಪ್ರವೇಶ ಶುಲ್ಕ ನಿಗದಿಪಡಿಸುವುದು ನ್ಯಾಯಾಲಯಗಳ ಕೆಲಸವೇ? ಈಗ ದೇಶದ ಪ್ರಜ್ಞಾವಂತ ಜನತೆ- ವಿದ್ಯಾರ್ಥಿಗಳು ವೃತ್ತಿಶಿಕ್ಷಣ ಸಮಸ್ಯೆಯ ವಿರುದ್ಧ ಮಾತ್ರವಲ್ಲ ಶಾಸಕಾಂಗದ ಕಾರ್ಯ ಕ್ಷೇತ್ರವನ್ನು ಆಕ್ರಮಿಸುತ್ತಾ ಚುನಾಯಿತ ಸರ್ಕಾರಗಳ ಆಡಳಿತಕ್ಕೆ ಬದಲಿಗೆ ನ್ಯಾಯಾಂಗದ ಆಡಳಿತದತ್ತ' ಹೊರಳುತ್ತಿರುವ ಪ್ರಜಾಪ್ರಭುತ್ವ ವಿರೋಧಿ ಪ್ರಕ್ರಿಯೆಯನ್ನು ಪ್ರತಿಭಟಿಸಬೇಕಿದೆ.



ಸಾಮಾನ್ಯ ಶಿಕ್ಷಣದ ಮೇಲೆ ಅಸಾಮಾನ್ಯ ಧಾಳಿ

ವಿವೇಕಹೀನ ಜಾಗತೀಕರಣದ ಮೋಹದಲ್ಲಿರುವ ಕೇಂದ್ರ ಬಿಜೆಪಿ ನೇತೃತ್ವದ ಸರ್ಕಾರ- ರಾಜ್ಯ ಸರ್ಕಾರಗಳು ಇಡೀ ಶಿಕ್ಷಣ ವ್ಯವಸ್ಥೆಯ ಮೇಲೆ ಹೊಸ ಹೊಸ ದಾಳಿಯನ್ನು ಹರಿಯಬಿಡುತ್ತಿವೆ. 2005 ಕ್ಕೆ ಶಿಕ್ಷಣ- ಆರೋಗ್ಯದಂತಹ ಸೇವಾವಲಯ ಹಾಗೂಶಿಕ್ಷಣ ರಂಗವೂ WTO ನ ವ್ಯಾಪ್ತಿಗೆ ಒಳಪಡುವ ಒಪ್ಪಂದಗಳ ಬಗೆಗೆ ಕಾಂಗ್ರೆಸ್- ಬಿಜೆಪಿಗಳು ಅತ್ಯುತ್ಸಾಹದಲ್ಲಿವೆ. ಕೃಷಿ ರಂಗ ಜಾಗತೀಕರಣ ಧಾಳಿಗೆ ಸಿಲುಕಿ ದೇಶಕ್ಕೆ ಅನ್ನ ಬೆಳೆಯುವ ರೈತ-ಕೂಲಿಕಾರರು ಹುಳುಗಳಂತೆ ಸಾಯುತ್ತಿರುವ ಘೋರ ದುರಂತ ನಮ್ಮ ಕಣ್ಮುಂದೆಯೇ ಇದ್ದರೂ ಆಳುವ ವರ್ಗಗಳಿಗೆ 'ಜ್ಞಾನೋದಯ' ಆಗುತ್ತಿಲ್ಲ. ಈಗ ರೈತರ ಜೊತೆಗೆ ವಿದ್ಯಾರ್ಥಿ - ಪೋಷಕರು ಆತ್ಮಹತ್ಯೆಯ ಹಾದಿಯಲ್ಲಿ ಸರತಿ ನಿಲ್ಲಬೇಕಿದೆಯೇನೋ?

ಜಾಗತೀಕರಣದ ಷಡ್ಯಂತ್ರಕ್ಕೆ ಸರಿ ಹೊಂದುವಂತೆ ನಮ್ಮ ದೇಶದ ಸ್ವಾವಲಂಬನೆಯನ್ನು ನಾಶ ಮಾಡಲು, ವಿಜ್ಞಾನ-ತಂತ್ರಜ್ಞಾನದ ಬೆಳವಣಿಗೆಯನ್ನು ಕೊನೆಗೆ ಪ್ರಜಾಪ್ರಭುತ್ವವನ್ನು ಸತ್ವಹೀನಗೊಳಿಸಲು ಶಿಕ್ಷಣ ರಂಗದ ಮೇಲೆ ಅದರಲ್ಲೂ ಉನ್ನತ ಶಿಕ್ಷಣ ರಂಗದ ಮೇಲೆ ಎರಗಲಾಗಿದೆ.

ಅವೈಜ್ಞಾನಿಕ ಜ್ಯೋತಿಷ್ಯಶಾಸ್ತ್ರ ಕರ್ಮಕಾಂಡದಂತಹ ಕೋರ್ಸುಗಳಿಗೆ ಹಣ ಕೊಡಲು ಸಿದ್ಧವಿರುವ ಕೇಂದ್ರ ಸರ್ಕಾರ ಅಗತ್ಯ-ಅಮೂಲ್ಯ ಉನ್ನತ ಶಿಕ್ಷಣಕ್ಕೆ ಹಣ ಕಡಿತಗೊಳಿಸಿದೆ. ವಿಶ್ವ ವಿದ್ಯಾಲಯ ಧನ ಸಹಾಯ ಆಯೋಗ (UGC) ಗೆ ಶೇ.40 ರಷ್ಟು ಹಣ ಕಡಿತಗೊಳಿಸಲಾಗಿದೆ. ವಿಶ್ವವಿದ್ಯಾಲಯಗಳು ಬಿಕ್ಕಟ್ಟಿನಲ್ಲಿವೆ. ಚತ್ತಿಸ್‌ಗಡ ರಾಜ್ಯದ ಕಾಂಗ್ರೆಸ್ ಸರ್ಕಾರವು ಖಾಸಗಿ ವಿವಿಗಳಿಗೆ ಅನುಮತಿ ನೀಡಿದೆ. ರಾಯಪುರದಲ್ಲಿನ ವಾಣಿಜ್ಯ ಸಂಕೀರ್ಣವೊಂದರ ಎರಡನೇ ಮಹಡಿಯಲ್ಲಿ ಎರಡು ಕೊಠಡಿ, ಒಂದು ಕಛೇರಿ ಹೊಂದಿರುವ ಸಂಸ್ಥೆಯೊಂದು ಖಾಸಗಿ ವಿ.ವಿ. ಸ್ಥಾನಮಾನ ಗಳಿಸಿದೆ ಎಂದರೆ, ಅರ್ಜಿ ಸಲ್ಲಿಸಿದ ಒಂದೇ ವಾರದಲ್ಲಿ ವಿ.ವಿ. ಆರಂಭಿಸಲು ಅನುಮತಿ ನೀಡಲಾಗುವುದೆಂದು ಸರ್ಕಾರ ಡಂಗುರ ಸಾರುತ್ತಿದೆಯೆಂದರೆ ಕಾಂಗ್ರೆಸ್ ಸರ್ಕಾರ ತಲುಪಿರುವ ಅನೈತಿಕತೆಯ ಮಟ್ಟ ಏನೆಂದು ಅರ್ಥವಾದೀತು. ಕರ್ನಾಟಕ ರಾಜ್ಯದಲ್ಲಿಯೂ ಮೂಲಭೂತ ಸೌಕರ್ಯಗಳೇ ಇಲ್ಲದ ಕಳಪೆ ಕಾಲೇಜುಗಳು ಶಿಕ್ಷಣ ಸಂಸ್ಥೆಗಳು ತಮಗೆ ಚತ್ತಿಸಗಡದ ರಾಜ್ಯದಿಂದ ಖಾಸಗಿ ವಿ.ವಿ. ಸ್ಥಾನಮಾನ ಗಳಿಸಿಕೊಳ್ಳಲು ಮುಸುಕಿನೊಳಗೆ ಅತ್ತ ಸರಿಯುತ್ತಿರುವುದು ವರದಿಯಾಗಿದೆ.

ಶಿಕ್ಷಣವನ್ನು ವ್ಯಾಪಾರೀಕರಿಸುವುದರಲ್ಲಿ ಕೇಂದ್ರ ಸರ್ಕಾರದ ಜೊತೆಗೆ ರಾಜ್ಯ ಸರ್ಕಾರವು ಕೈಜೋಡಿಸಿದೆ. ಶಿಕ್ಷಣಕ್ಕೆ ಬಜೆಟ್ ಪಾಲು ಶೇ.17 ಇದ್ದದ್ದನ್ನು ಶೇ.14 ಕ್ಕೆ ತರಲಾಗಿದೆ. ಶಿಕ್ಷಣ ಸಂಸ್ಥೆಗಳಿಗೆ ಅನುದಾನ ಕಡಿತಗೊಳಿಸಲಾಗಿದೆ ಮತ್ತೂ ವ್ಯಾಪಕವಾಗಿ ಅನುದಾನ ಕಡಿತಗೊಳಿಸುವ ಬೆದರಿಕೆ ಹಾಕಲಾಗುತ್ತಿದೆ. ರಾಜ್ಯದ ಶಾಲಾ- ಕಾಲೇಜುಗಳಲ್ಲಿ ಶಿಕ್ಷಕ ಉಪನ್ಯಾಸಕ ಹುದ್ದೆಗಳು ಸಹಸ್ರಾರು ಖಾಲಿ ಬಿದ್ದಿವೆ.

ಶಾಲಾ-ಕಾಲೇಜುಗಳಿಗೆ ಕಟ್ಟಡದ ಕೊರತೆ, ಗ್ರಂಥಾಲಯದ ಕೊರತೆ- ಪ್ರಯೋಗಶಾಲೆಗಳ ಕೊರತೆ- ಹಾಸ್ಟೆಲ್‌ಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಕಳಪೆ ಊಟ ಕುಡಿಯುವ ನೀರಿನ ಕೊರತೆ ಇಂತಹ ಸಮಸ್ಯೆಗಳಿಗೆ ಕೊನೆಯೇ ಇಲ್ಲವಾಗಿದೆ.

ಸರ್ಕಾರಿ ಶಾಲೆಗಳಿಗೆ ಕಾಲೇಜುಗಳಿಗೆ ಸೂಕ್ತ ಸೌಕರ್ಯಗಳನ್ನು ಒದಗಿಸದೇ ವಿದ್ಯಾರ್ಥಿಗಳ ಕೊರತೆಯ ನೆಪವೊಡ್ಡಿ ಅವುಗಳನ್ನು ಮುಚ್ಚುವ ವ್ಯವಸ್ಥಿತ ಪಿತೂರಿ ನಡೆದಿದೆ. ಕಾಲೇಜು ಶಿಕ್ಷಣ ನಿರ್ದೇಶನಾಲಯ, ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯಗಳನ್ನು ರಾಜ್ಯ ಸರ್ಕಾರ ಮುಚ್ಚಲು ಹೊರಟಿದೆ.

ಶುಲ್ಕಗಳ ಏರಿಕೆಗೂ ಮಿತಿ ಇಲ್ಲದಾಗಿದೆ. ಪ್ರಾಥಮಿಕ ಶಿಕ್ಷಣದಿಂದ ಆರಂಭಿಸಿ ಪದವಿ ಸ್ನಾತಕೋತ್ತರದವರೆಗೆ ಶುಲ್ಕಗಳು ತೀವ್ರವಾಗಿ ಏರುತ್ತಾ ವಿದ್ಯಾರ್ಥಿ ಪೋಷಕರು ಕಂಗಾಲಾಗಿದ್ದಾರೆ.

ಈ ನಡುವೆ ರಾಜ್ಯ ಸರ್ಕಾರ 3 ಖಾಸಗಿ ವೈದ್ಯಕೀಯ ಕಾಲೇಜುಗಳ ಆರಂಭಕ್ಕೆ, ನೂರಾರು ಬಿಎಡ್ ಕಾಲೇಜುಗಳ ಆರಂಭಕ್ಕೆ ಅನುಮತಿ ನೀಡಿದೆ. ರಾಜ್ಯದಲ್ಲಿ ತಾಂತ್ರಿಕ ಕಾಲೇಜುಗಳನ್ನು, ಆರಂಭಿಸಲು ಅನುಮತಿ ಕೋರಿ ಅರ್ಜಿ ಹಾಕುವವರಿಗೆಲ್ಲಾ ಅನುಮತಿ ನೀಡುವುದಾಗಿ ಘೋಷಿಸಿದೆ. ನಾಯಿ ಕೊಡೆಗಳಂತೆ ಹುಟ್ಟಿಕೊಂಡು ವಿದ್ಯಾರ್ಥಿ-ಪೋಷಕರ ರಕ್ತ ಹೀರಲು ಸಜ್ಜುಗೊಂಡಿರುವ ಸುಲಿಗೆಕೋರ ಶಿಕ್ಷಣ ಸಂಸ್ಥೆಗಳಿಗೆ - ಶಕ್ತಿಗಳಿಗೆ ಸರ್ಕಾರವೇ ನೇರ ಕುಮ್ಮಕ್ಕು ನೀಡುತ್ತಿದೆ.



ಪ್ರಜಾಪ್ರಭುತ್ವ ಹಕ್ಕುಗಳ ದಮನ

ಕರ್ನಾಟಕ ರಾಜ್ಯದಲ್ಲಿಯೂ ದೇಶದಲ್ಲಿಯೂ ವಿದ್ಯಾರ್ಥಿ ಶಿಕ್ಷಕ ಸಮುದಾಯದ ಹಕ್ಕುಗಳಿಗೆ ಗಂಭೀರವಾದ ಬೆದರಿಕೆ ಬಂದಿದೆ. ಇತ್ತೀಚಿನ ದಿನಗಳಲ್ಲಿ ರಾಜ್ಯದ ಕಾಲೇಜು ಹಾಸ್ಟೇಲ್‌ಗಳಲ್ಲಿ ಒಂದು ಹೊಸ ಪಿಡುಗು ವರದಿಯಾಗುತ್ತಿದೆ. ಕಾಲೇಜಿಗೆ ಹಾಸ್ಟೇಲಿಗೆ ಸೇರುವ ವಿದ್ಯಾರ್ಥಿಗಳಿಂದ "ನಾನು ಯಾವುದೇ ವಿದ್ಯಾರ್ಥಿ ಸಂಘಟನೆಗೆ ಸೇರುವುದಿಲ್ಲ" "ನಾನು ಯಾವುದೇ ಮುಷ್ಕರದಲ್ಲಿ ಪಾಲ್ಗೊಳ್ಳುವುದಿಲ್ಲ" ಎಂದು ಮುಚ್ಚಳಿಕೆ ಬರೆಸಿಕೊಳ್ಳಲಾಗುತ್ತಿದೆ. ಖಾಲಿ ಹಾಳೆಗಳಲ್ಲಿ ಸಹ ವಿದ್ಯಾರ್ಥಿಗಳಿಂದ ಸಹಿ ಮಾಡಿಸಿಕೊಳ್ಳಲಾಗುತ್ತಿದೆ. ವಂತಿಗೆ ಸುಲಿಗೆ, ಶುಲ್ಕ ಏರಿಕೆ- ಮೂಲಭೂತ ಸೌಕರ್ಯಗಳ ಕೊರತೆ ಯಾವುದನ್ನೂ ಯಾರು ಪ್ರಶ್ನಿಸಬಾರದು ಎಲ್ಲರೂ 'ಹೌದಪ್ಪ'ಗಳಾಗಿ ಆಡಳಿತ ಮಂಡಳಿಯ ಹುನ್ನಾರಗಳೆದುರು ತಗ್ಗಿ ಬಗ್ಗಿ ನಡೆಯಬೇಕು? ಹೀಗೆ ತಗ್ಗಿಬಗ್ಗಿ ನಡೆಯುವವರ ತಲೆ ಮೇಲೆ ಸರ್ಕಾರವೂ ಬಡಿಯುತ್ತಿದೆ. 'ಕರ್ನಾಟಕ ವಿಶ್ವ ವಿದ್ಯಾಲಯ ಕಾಯ್ದೆ 2000' ದ ಮೂಲಕ ಆದುವರೆಗೆ ವಿಶ್ವ ವಿದ್ಯಾಲಯಗಳ ಸೆನೆಟ್ ಸಿಂಡಿಕೇಟ್‌ಗಳಂತಹ ನೀತಿ ನಿರೂಪಕ ಅಂಗಗಳಿಗೆ ಇದ್ದ ವಿದ್ಯಾರ್ಥಿ-ಶಿಕ್ಷಕರ ಚುನಾಯಿತ ಪ್ರಾತಿನಿಧ್ಯವನ್ನು ರದ್ದುಪಡಿಸಲಾಗಿದೆ. ಆಳುವ ಪಕ್ಷಗಳ ಬಾಲಬಡುಕರು- ಬಾಲಂಗೋಚಿಗಳನ್ನು ಮಾತ್ರವೇ ಈ ಜಾಗಗಳಲ್ಲಿ ಈಗ ನೇಮಕ ಮಾಡಲಾಗುತ್ತಿದೆ. ವಿದ್ಯಾರ್ಥಿ ಶಿಕ್ಷಕರಿಗೆ ಉತ್ತರ ನೀಡಬೇಕಾದ ಚುನಾಯಿತ ಪ್ರತಿನಿಧಿಗಳಿದ್ದರಲ್ಲವೆ. ಶಿಕ್ಷಣ ವ್ಯಾಪಾರೀಕರಣ- ಖಾಸಗೀಕರಣಕ್ಕೆ ಪ್ರತಿರೋಧ ಬರುವುದು?


ಮಹಾರಾಷ್ಟ್ರ-ಕೇರಳ-ಆಂಧ್ರ-ಹರ್ಯಾಣ ಮುಂತಾದ ರಾಜ್ಯಗಳಲ್ಲಿ ಚಳುವಳಿನಿರತ ವಿದ್ಯಾರ್ಥಿಗಳ ಮೇಲೆ ಅಮಾನುಷ ಪೊಲೀಸ್ ದೌರ್ಜನ್ಯಗಳು ನಡೆದಿವೆ. ತಮಿಳುನಾಡಿನಲ್ಲಿ ಸರಕಾರಿ ನೌಕರರು - ಪತ್ರಕರ್ತರು-ಪ್ರತಿಪಕ್ಷದ ಮುಖಂಡರನ್ನು ಸದೆಬಡಿಯಲು ನಿಂತಿರುವ 'ಪುರಚ್ಚಿ ತಲೈವಿ' ಅಮ್ಮ ರವರ ಸರ್ಕಾರವು ವಿದ್ಯಾರ್ಥಿ ಚಳುವಳಿಯನ್ನು ದಮನ ಮಾಡಲು ಕಾಲೇಜು ಕ್ಯಾಂಪಸ್‌ಗಳಲ್ಲಿ ಸರ್ಕಾರದ ವಿರುದ್ಧವಾಗಿ ಸೊಲ್ಲೆತ್ತುವವರ ಬಗೆಗೆ ಪೋಲೀಸರಿಗೆ ಮಾಹಿತಿ ನೀಡಲು ವಿದ್ಯಾರ್ಥಿಗಳು ಹಾಗೂ ಪೋಲೀಸರನ್ನೊಳಗೊಂಡ 'ಪೊಲೀಸ್ ಕ್ಲಬ್' ರಚಿಸಿದೆ. ಕಾಲೇಜು ಕ್ಯಾಂಪಸ್‌ಗಳಲ್ಲಿ ಪ್ರಜಾಪ್ರಭುತ್ವದ ವಿರುದ್ಧ ಬೇಹುಗಾರಿಕೆ ತೀವ್ರಗೊಂಡಿದೆ.

ಶಿಕ್ಷಣದ ಕೋಮುವಾದೀಕರಣ

ಸಂಘಪರಿವಾರದ ಮತಾಂಧ ವಿಚಾರಗಳ ಆಧಾರದಲ್ಲಿ ಪಠ್ಯಪುಸ್ತಕಗಳನ್ನು ಕೋಮುವಾದೀಕರಿಸಲಾಗಿದೆ. ಸತೀ ಪದ್ಧತಿಯನ್ನು ವೈಭವೀಕರಿಸುವ, ಜಾತಿಯತೆಯನ್ನು ಮರೆಮಾಚುವ, ಕೋಮುದ್ವೇಷವನ್ನು ಹರಡುವ ವಿಕೃತ ವಿಚಾರಗಳನ್ನು ಶಾಲಾ ಪಠ್ಯದಲ್ಲಿ ತುರುಕಲಾಗಿದೆ.

ಕರ್ನಾಟಕ ಶಾಲಾ ಪಠ್ಯಗಳಲ್ಲಿಯೂ ಶಿಕ್ಷಣ ಕೋಮುವಾದೀಕರಣಗೊಂಡಿದೆ. ಎಸ್.ಎಫ್.ಐ ಈಗಾಗಲೇ ಈ ಬಗೆಗೆ ತನ್ನ ಅಧ್ಯಯನ ವರದಿಯನ್ನು ಸರ್ಕಾರ ಸಲ್ಲಿಸಿ ಪ್ರತಿಭಟಿಸಿದೆ. ರಾಜ್ಯ ಸರ್ಕಾರ ಕೋಮುವಾದೀಕರಣವನ್ನು ತೆಗೆದುಹಾಕಲಾಗಿದೆ ಎಂದು ಹೇಳುತ್ತಿದೆ. ಇಡೀ ಪಠ್ಯವೇ ಕೋಮುವಾದೀಕರಣಗೊಂಡಿರುವಾಗ ಕೆಲವು ಶಬ್ದ-ವಾಕ್ಯ ತೆಗೆಯುವುದರಿಂದ ಕೋಮುವಾದವನ್ನು ನಿವಾರಿಸಿದಂತೇನು ಆಗಿಲ್ಲ. ಕೋಮುವಾದೀಕೃತಗೊಂಡ ತರಗತಿ 5-6, ರ ಶಾಲಾ ಪಠ್ಯವನ್ನು ಸಂಪೂರ್ಣ ತೆಗೆದುಹಾಕಬೇಕೆಂಬುದೇ ಎಸ್.ಎಫ್.ಐ ನ ಒತ್ತಾಯವಾಗಿದೆ.

ಡಿಸೆಂಬರ್ 1,2003 ರಂದು ರಾಜ್ಯಾದ್ಯಂತ ರಾಷ್ಟ್ರಾದ್ಯಂತ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ, ಬೀದಿಗಿಳಿದು ಎಚ್ಚರಗೇಡಿ ಸರ್ಕಾರಗಳ ಶಿಕ್ಷಣ ವಿರೋಧಿ ನಿತೀಗಳಿಗೆ ಧಿಕ್ಕಾರ ಹೇಳಲಿದ್ದಾರೆ. ಪ್ರತಿರೋಧ ಒಡ್ಡಲಿದ್ದಾರೆ.



ಕುಂದಾಪುರಕ್ಕೆ ವಿಸ್ತರಿಸಿದ ಕಾರ್ಮಿಕ ಚಳುವಳಿ

1939 ರಲ್ಲಿ ಕಾರ್ಮಿಕ ಚಳುವಳಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆರಂಭಗೊಂಡರೂ, ಕುಂದಾಪುರವನ್ನು 1950 ರವರೆಗೆ ತಲುಪಲಿಲ್ಲ. ಬಹುಶಃ ಹಲವಾರು ಹೊಳೆಗಳನ್ನು ದಾಟಿ ಕುಂದಾಪುರ ತಲುಪಬೇಕಾದರೆ 8-10 ಗಂಟೆಗಳಾದರೂ ಬೇಕಾಗಿತ್ತು.

1949 ರಲ್ಲಿ ಕಾಂ.ಡೇನಿಸ್ ಡೇಸಾ, ಕಾಂ.ರಾಜೀವ್ ಮಾಸ್ಟರ್ ಸೇರಿ ರಾತ್ರಿ ಶಾಲೆ ಪ್ರಾರಂಭಸಿದ ಸ್ವಲ್ಪ ಸಮಯದ ನಂತರ ಕಾರ್ಮಿಕ ಸಂಘಟನೆಗೂ ತೊಡಗಿಸಿಕೊಂಡರು. ಹಂಚಿನ ಕಾರ್ಮಿಕರನ್ನು ಒಗ್ಗಟ್ಟು ಮಾಡುವ ಪ್ರಯತ್ನ ಸಫಲವಾಗಿ 1951 ರಲ್ಲಿ ದೊಡ್ಡದಾದ ಮೆರವಣಿಗೆ ನಡೆಸಿ ಪ್ರಥಮ ಬಾರಿಗೆ ಕುಂದಾಪುರದಲ್ಲಿ 'ಮೇ ದಿನಾಚರಣೆ' ನಡೆಸಲಾಯಿತು. ಈ ಸಭೆಗೆ ಮಂಗಳೂರಿನ ಕಾಂ.ಎ.ಕೃಷ್ಣ ಶೆಟ್ಟರು ನಾಯಕತ್ವ ನೀಡಿದರು. 2 ವರ್ಷಗಳ ಕಾಲ ಹುರುಪಿನಿಂದಲೇ ನಡೆದ ಕಾರ್ಮಿಕ ಚಳುವಳಿ 2 ಕಾರ್ಖಾನೆಗಳ ಮುಷ್ಕರ ವಿಫಲವಾಗುವುದರೊಂದಿಗೆ, ಕಾಂ.ಡೇನಿಸ್‌ಡೇಸಾರವರು ಮುಂಬಾಯಿಗೆ ಹೋಗುವ ಮೂಲಕ ಚಳುವಳಿ ಸ್ಥಗಿತಗೊಂಡಿತು.

1955 ರಲ್ಲಿ ಉಡುಪಿ ತಾಲೂಕು ಟ್ಯಾಲ್ ಎಂಡ್ ಮಿಲ್ ವರ್ಕರ್ಸ್ ಯೂನಿಯನ್ನಿನ ನಾಯಕತ್ವದಲ್ಲಿ ಕಲ್ಯಾಣಪುರದ ವಿಜಯಾ ಹಂಚಿನ ಕಾರ್ಖಾನೆಯಲ್ಲಿ ಮುಷ್ಕರ ನಡೆಯಿತು. ನಾನು ಯೂನಿಯನ್ನಿನ ಅಧ್ಯಕ್ಷನಾಗಿದ್ದೆ. ಕಾಂ.ಜೆ. ಕೋಟೆಯಾನ್ ಕಾರ್ಯದರ್ಶಿ ಯಾಗಿದ್ದರು. ಮುಷ್ಕರ ದೀರ್ಘಕಾಲ ಮುಂದುವರಿದಿದ್ದರಿಂದ ನಾವಿಬ್ಬರೂ ಜತೆಯಾಗಿ ಕುಂದಾಪುರಕ್ಕೆ ಹಂಚಿನ ಕಾರ್ಮಿಕರಿಂದ ಸಹಾಯ ಸಂಗ್ರಹ ಮಾಡಲು ಹೋದೆವು. ಸಂಜೆಯಾಗುತ್ತಲೇ ಹಲವಾರು ಕಾರ್ಮಿಕ ಸಂಗಾತಿಗಳು ಅಲ್ಲಿ ನಮಗೆ ಸಿಕ್ಕಿದರು. ಅವರ ಪರಿಚಯ ಬೆಳೆಸಿದಾಗ ಹೆಚ್ಚಿನವರು ಮಂಗಳೂರಿ ನಿಂದ ಬಂದು ಕುಂದಾಪುರದಲ್ಲಿ ಕೆಲಸ ಮಾಡುವವರಾಗಿದ್ದರು. ಅವರೆಲ್ಲರ ಮೂಲಕ ನಾವು ಕುಂದಾಪುರದಲ್ಲಿ 'ನರಿಬೇಣ' ಮೈದಾನದಲ್ಲಿ ಕೆಲವರನ್ನು ಒಟ್ಟು ಸೇರಿಸುವಂತೆ ವಿನಂತಿಸಿದೆವು. ಅತ್ಯವಸರದಲ್ಲಿ ತಿಳಿಸಿ ಕರೆಯಲಾದ ಸಭೆಯಲ್ಲಿ ಸುಮಾರು ನೂರಕ್ಕೂ ಹೆಚ್ಚಿನ ಕಾರ್ಮಿಕರು ಸೇರಿಬಂದರು. ಸಂಜೆ 6 ರಿಂದ 7ರವರೆಗೆ ಸಭೆ ಸೇರಿಸಿದೆವು. ಅವರೆಲ್ಲರಿಂದಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಕಾಂ.ಟಿ.ಶೀನ ಕೋಟ್ಯಾನ್, ಕಾಂ. ಡಿ.ಗೋಪಾಲ ಮತ್ತು ಕಾಂ. ಮಂಚಪ್ಪ ಮತ್ತಿತರ ಕೆಲವು ಸಂಗಾತಿಗಳು ಮಂಗಳೂರಿನಲ್ಲಿ ಹೋರಾಟದ ಮೂಲಕ ಪಳಗಿದ ಮುಖ್ಯ ಕಾರ್ಯಕರ್ತರು ಆಗಿದ್ದವರೂ ಅಲ್ಲಿದ್ದರು. ನಾವು ಸಭೆಯಲ್ಲಿ ಉಡುಪಿಯ ಹಂಚಿನ ಕಾರ್ಮಿಕರ ಮುಷ್ಕರಕ್ಕೆ ಧನ ಸಹಾಯ ನೀಡುವಂತೆ ವಿನಂತಿಸಿದೆವು.

ಮಾತನಾಡುತ್ತಾ ರಾತ್ರಿಯಾಯಿತು. ನಾವು ಉಡುಪಿಗೆ ವಾಪಾಸು ಹೋಗುವಂತಿರಲಿಲ್ಲ ಇದೆಲ್ಲವನ್ನು ಮೊದಲೇ ಅರಿತಿದ್ದ ಅವರು ತಮ್ಮಲ್ಲಿಯೇ ಹಣ ಸಂಗ್ರಹ ಮಾಡಿ ನಮಗೆ ರಾತ್ರಿಯ ಊಟ ಮತ್ತು ತಂಗಲು ವ್ಯವಸ್ಥೆ ಮಾಡಿ ಬೆಳಿಗ್ಗೆ ಕಾಫಿ ತಿಂಡಿಯ ವ್ಯವಸ್ಥೆಯನ್ನು ಮಾಡಿಕೊಟ್ಟರು ಮತ್ತು ಅದೇ ವಾರದ ಶನಿವಾರ ಹಣ ಸಂಗ್ರಹಿಸಿಕೊಂಡು ಉಡುಪಿಗೆ ಬಂದರು. ಜವಾಬ್ದಾರಿಯಿಂದ ನಮಗೆ ತಲುಪಿಸಿದರು.

ಇದರಿಂದಾಗಿ ಮುಷ್ಕರ ಹೂಡಿದ ಕಾರ್ಮಿಕರಿಗೆ ತುಂಬಾ ಸಹಾಯವಾಯಿತು.


ನಂತರದಲ್ಲಿ ಈ ಎಲ್ಲಾ ವಿಚಾರಗಳ ಬಗ್ಗೆ ಮಂಗಳೂರು ಜಿಲ್ಲಾ ಕೇಂದ್ರಕ್ಕೆ ವರದಿ ನೀಡಿ ಕುಂದಾಪುರದಲ್ಲಿ ಸಂಘಟನೆ ಕಟ್ಟಲು ಇರುವ ಉತ್ತಮ ಅವಕಾಶಗಳ ಬಗ್ಗೆ ವಿವರವಾಗಿ ತಿಳಿಸಿದೆವು. ಇದೇ ಸಭೆಯಲ್ಲಿ ಪ್ರಥಮ ಬಾರಿಗೆ ಮತ್ತೆ ಪ್ರಮುಖ ಮುಂದಾಳುವಾಗಿ ಬೆಳೆದು ಬಂದ ಕಾಂ.ಅಬ್ರಹಾಂ ಕರ್ಕಡರನ್ನು ನೋಡಿದೆ. ನಂತರದಲ್ಲಿ ಮಂಗಳೂರಿನಿಂದ ಮುಖಂಡರಾದವರ ಸಹಾಯದಿಂದ ಅಲ್ಲಿ ಪ್ರಬಲವಾದ ಕಾರ್ಮಿಕ ಸಂಘಟನೆ ರೂಪುಗೊಂಡಿತು. 1958 ರಲ್ಲಿ ಮತ್ತೆ ಕುಂದಾಪುರದಲ್ಲಿ ಮೇ ದಿನಾಚರಣೆ ನಡೆಸಲಾಯಿತು. ಈ ಸಭೆಯು ಕಾಂ.ಎಂ.ಎಚ್. ಕೃಷ್ಣಪ್ಪ, ಕಾಂ.ಕೃಷ್ಣಶೆಟ್ಟಿ, ಕಾಂ.ಎ.ಶಾಂತಾರಾಮ ಪೈಯವರು ಭಾಗವಹಿಸಿದ, ಅತೀ ದೊಡ್ಡ ವರ್ಣರಂಜಿತ ಮೆರವಣಿಗೆಯ ಮೂಲಕ ನಡೆಸಲಾಯಿತು. ಮುಂದಾಳುಗಳಾದವರು ಸಹ ಕಾಂ.ಅಬ್ರಹಾಂ ಕರ್ಕಡ ಜತೆಯಲ್ಲಿ ರಾತ್ರಿ ಆಫಿಸಿನಲ್ಲಿಯೇ ಉಳಕೊಂಡರು. ಆಗಿನ ಕಾರ್ಮಿಕ ಚಳುವಳಿಯ ಪರಂಪರೆಯೇ ಈ ರೀತಿಯಾಗಿತ್ತು.

ಡೇವಿಡ್ ಕರ್ಕಡೆ, ಉಡುಪಿ

ಈ ಬಾರಿ ಸರಿಯಾದ ಪೂರ್ವ ತಯಾರಿಯಿಂದ ಮಂಗಳೂರಿನ ಜಿಲ್ಲಾ ಮುಂದಾಳುಗಳ ಪ್ರಯತ್ನ ಸೇರಿ ಪ್ರಬಲ ಚಳುವಳಿ ರೂಪುಗೊಂಡಿತು. ಜಿಲ್ಲಾ ಹಂಚಿನ ಮಜೂರರ ಸಂಘದ ಶಾಖೆಯಾಗಿ ಕುಂದಾಪುರದಲ್ಲಿ ಆಫೀಸು ತೆರೆಯುವ ಮೂಲಕ ಸಂಘಟನೆ ಸ್ಥಿರಗೊಂಡಿತು. ನಿಧಾನವಾಗಿ ಒಂದೆರಡು ವರ್ಷಗಳಲ್ಲಿ ಮಂಗಳೂರಿನಿಂದ ಬಂದಿದ್ದ ಸಂಗಾತಿಗಳಲ್ಲಿ ಹೆಚ್ಚಿನವರು ಮಂಗಳೂರಿಗೆ ಹಿಂತಿರುಗಿದರು. ಉಳಿದ ಅಲ್ಪಸ್ವಲ್ಪ ಮಂದಿ ಕುಂದಾಪುರದಲ್ಲಿಯೇ ಖಾಯಂ ಆಗಿ ನೆಲೆ ನಿಂತರು. ಕುಂದಾಪುರದವರೇ ಆದ ಕಾಂ.ವಿ.ಶಂಕರ, ಕಾಂ.ಟೈಲರ್ ಶಂಕರ, ಕಾಂ.ಅಬ್ರಹಾಂ ಕರ್ಕಡ, ಕಾಂ.ಭದ್ರ ದೇವಾಡಿಗ ಮತ್ತು ಕಾಂ.ಅರಮ ದೇವಾಡಿಗ ಮೊದಲಾದ ಸ್ಥಳೀಯ ಕಾರ್ಯಕರ್ತರು ಸಂಘಟನೆಯ ಜವಾಬ್ದಾರಿ ಹೊರಲು ಮುಂದೆ ಬಂದರು.

ಕಾಂ.ಸಿಂಪ್ಸನ್ ಸೋನ್ಸಾ, ಕಾಂ.ಕೃಷ್ಣ ಶೆಟ್ಟಿ, ಎ.ಶಾಂತಾರಾಮ ಪೈ, ಬಿ.ನಾರಾಯಣ ಇವರೆಲ್ಲ ಆಗಾಗ ಕುಂದಾಪುರಕ್ಕೆ ಬಂದು ನಾಯಕತ್ವ ನೀಡುತ್ತಿದ್ದರು.

ಸಿ.ಪಿ.ಐ ಪಕ್ಷದ ಶಾಖೆಯು 1958 ರಲ್ಲಿ 5 ಮಂದಿ ಸದಸ್ಯರೊಂದಿಗೆ ರಚನೆಗೊಂಡು ಕೆಲಸ ಪ್ರಾರಂಭಿಸಿತು.. ಕಾಂ.ಕರ್ಕಡರು ಕೆಲಸ ಕಳಕೊಂಡರು. ಬಹಳ ಕಷ್ಟದ ಜೀವನ ನಡೆಸುತ್ತಾ ಆಫೀಸು ಬಾಡಿಗೆಯನ್ನು ತೆರುತ್ತಾ ಆಫೀಸು ಉಳಿಸಿಕೊಂಡರು. 1961 ರಲ್ಲಿ ಕಾಂ. ಅಬ್ರಹಾಂ ಕರ್ಕಡರು ಹಂಚಿನ ಕಾರ್ಮಿಕರ ಸಂಘದಲ್ಲಿ ಪೂರ್ಣಕಾಲದ ಕಾರ್ಯಕರ್ತರಾಗಿ ನೇಮಕಗೊಂಡರು. ಸಂಘದಲ್ಲಿ ಜತೆ ಕಾರ್ಯದರ್ಶಿಯಾಗಿ ಉಪಾಧ್ಯಕ್ಷರಾಗಿ ನೇಮಕಗೊಳ್ಳುತ್ತ ನಂತರದಲ್ಲಿ ಜಿಲ್ಲಾ ಸಂಘದ ಅಧ್ಯಕ್ಷರಾಗಿ ಬಹಳ ಸಮಯದವರೆಗೆ ಮಂಗಳೂರು ಕೇಂದ್ರ ಕಛೇರಿಯಲ್ಲಿ ಕೆಲಸ ಮಾಡುತ್ತಾ ಕುಂದಾಪುರಕ್ಕೂ ತನ್ನ ಅನುಭವದ ಸಹಾಯ ನೀಡಿದರು.



ವಿಶೇಷ ಘಟನೆ: 1964 ರಲ್ಲಿ ದೇಶದ ಎಲ್ಲೆಡೆ ಪಕ್ಷ ವಿಭಾಗವಾದಾಗ ಕುಂದಾಪುರದಲ್ಲಿ ಮಾತ್ರ ಇಡೀ ಘಟಕ ಯಾವ ಒಡಕೂ ಇಲ್ಲದೆ ಸಿಪಿಐ(ಎಂ) ನೊಂದಿಗೆ ಸೇರಿದ ಘಟನೆ ಅತ್ಯಪೂರ್ವವಾದದ್ದು. ಇದರಲ್ಲಿ ಕಾಂ. ಅಬ್ರಹಾಂ ಕರ್ಕಡ ಮತ್ತು ವಿ.ಶಂಕರ, ಟೈಲರ್ ಶಂಕರ, ಅರಮ ದೇವಾಡಿಗ, ಭದ್ರ ದೇವಾಡಿಗರು ಶ್ರಮವಿತ್ತು. ಅವರೆಲ್ಲರೂ ಕುಂದಾಪುರದಲ್ಲಿ ತಾಲೂಕು ಸಮಿತಿಯಾಗಿ ಕೆಲಸ ಮಾಡುತ್ತಾ ಇದ್ದವರಾಗಿದ್ದರು.

ನಮ್ಮ ಜಿಲ್ಲೆಯಲ್ಲಿ ಇಂತಹ ಒಗ್ಗಟ್ಟನ್ನು ಉಳಿಸಲು ಸಾಧ್ಯವಾದದ್ದು ಕೇವಲ ಕುಂದಾಪುರದಲ್ಲಿ ಮಾತ್ರ. ಉಳಿದೆಲ್ಲೆ ಪಕ್ಷ ಹೋಳಾಗುವ ಮೂಲಕವೇ ಮುಂದುವರಿಯಬೇಕಾಯಿತು.

(ಕಾಂ.ಅಬ್ರಹಾಂ ಕರ್ಕಡರೊಂದಿಗೆ ಸಂದರ್ಶನದ ಮೂಲಕ ಕೆಲವು ವಿವರ ಪಡೆಯಲಾಗಿದೆ..)

ಕಿಚ್ಚಿಡುತ್ತಿರುವ ಪರಿವಾರದವರು

ಪುಟ 7ರಿಂದ

ಬಾಬಾಬುಡನ್‌ಗಿರಿಯನ್ನು ಕರ್ನಾಟಕದ ಆಯೋಧ್ಯೆ ಮಾಡುತ್ತೇವೆ ಎಂಬ ಹೆಸರಿನಲ್ಲಿ ನೈಜ ಸಮಸ್ಯೆಗಳ ಬಗ್ಗೆ ಹೋರಾಟದಿಂದ ಜಿಲ್ಲೆಯ ಜನತೆಯ ಗಮನವನ್ನು ಬೇರೆಕಡೆಗೆ ಸೆಳೆಯುತ್ತಿದೆ.


ಕಳೆದೆರಡು ವರ್ಷಗಳಿಂದ ಬಿಜೆಪಿ, ಸಂಘಪರಿವಾರ, ಬಜರಂಗದಳದವರು ದತ್ತಪೀಠ ವಿವಾದದ ಮೂಲಕ ಕೋಮುದಳ್ಳುರಿ ಹಬ್ಬಿಸುತ್ತಿರುವ ಪ್ರಯತ್ನಕ್ಕೆ ಎದುರಾಗಿ ಜಿಲ್ಲೆಯ ಹಾಗೂ ರಾಜ್ಯದ ಎಡಪ್ರಜಾಪ್ರಭುತ್ವ ಶಕ್ತಿಗಳು, ಸಾಮೂಹಿಕ ಸಂಘಟನೆಗಳು, ಬುದ್ಧಿಜೀವಿಗಳು, ಬರಹಗಾರರು, ನಾಟಕಕಾರರು, ಸಾಹಿತಿ ಕಲಾವಿದರು, ವಿದ್ಯಾರ್ಥಿ ಯುವಜನತೆ, ರೈತರು ಧ್ವನಿ ಎತ್ತಿ ಒಗ್ಗಟ್ಟಾಗಿ ಹೋರಾಟ ನಡೆಸುತ್ತಿರುವುದು ಅಭಿನಂದನಾರ್ಹ ಹೆಜ್ಜೆಯಾಗಿದೆ. ಈ ಪ್ರಯತ್ನಕ್ಕೆ ಪ್ರಸ್ತುತ ವರ್ಷದಲ್ಲಿ ಹೆಚ್ಚಿನ ಬೆಂಬಲ ಕಂಡುಬರುತ್ತಿದೆ.

ಮುಕ್ತಾಯಕ್ಕೆ ಮುನ್ನ

ರಾಜಕೀಯದಲ್ಲಿ ಧರ್ಮ ಬೆರೆಸಿ ಜನರ ನಡುವೆ ಬೇಧ ತಂದು ಕೋಮುವಾದದ ಮೂಲಕ ಸಂಘಪರಿವಾರದವರು ವಿಷಬೀಜ ಹರಡುತ್ತಿರುವ ಜಿಲ್ಲೆಯಲ್ಲಿ ವಿಶ್ವದಲ್ಲೇ ಅತ್ಯುತ್ತಮ ದರ್ಜೆಯ ಕಾಫಿ, ಏಲಕ್ಕಿ ಹಾಗೂ ವೆನಿಲ್ಲಾ ಬೆಳೆಗಾರರಿದ್ದಾರೆ. ವಿಶ್ವದ ಅತ್ಯುತ್ತಮ ದರ್ಜೆಯ ಕಾಫಿ ಬೆಳೆಗಾರರು ಚಿಕ್ಕಮಗಳೂರಿನ ಒಕ್ಕಲಿಗ ಸಮುದಾಯದವರಾಗಿರುತ್ತಾರೆ. ವಿಶ್ವದ ಶ್ರೇಷ್ಟ ದರ್ಜೆಯ ಏಲಕ್ಕಿ ಬೆಳೆಗಾರರು ಚಿಕ್ಕಮಗಳೂರು ಜಿಲ್ಲೆಯ ಕ್ರೈಸ್ತ ಧರ್ಮದವರಾಗಿರುತ್ತಾರೆ. ಇದೀಗ ವಿಶ್ವದಲ್ಲೇ ನಂ.1 ವೆನಿಲ್ಲಾ ಬೆಳೆಗಾರರೆಂದು ಹೆಸರುಗಳಿಸಿರುವ ಜಾವೀದ್ ಅಸ್ಗರ್ ಮುಸ್ಲೀಮರಾಗಿರುತ್ತಾರೆ. ಸಂಘಪರಿವಾರದವರು ಕೋಮುವಾದದ ಕಿಚ್ಚು ಹಚ್ಚಲು ಹೊರಟಿರುವ ಮಲೆನಾಡಿನ ಜಿಲ್ಲೆಯಲ್ಲಿ ಇದೊಂದು ಕೋಮುಸಾಮರಸ್ಯದ ವಿಶೇಷತೆಯಾಗಿರುತ್ತದೆ. ಈ ನಡುವೆ ಜಿಲ್ಲೆಯಲ್ಲಿ ಹುಟ್ಟಿದ ವಿಶ್ವಮಾನವ ಸಂದೇಶ ಸಾರಿದ ರಾಷ್ಟ್ರಕವಿ ಕುವೆಂಪುರವರ ಜನ್ಮಶತಮಾನೋತ್ಸವದ ಅಂಗವಾಗಿ ಇದೇ ಡಿಸೆಂಬರ್‌ನಿಂದ ಒಂದು ವರ್ಷದ ಅವಧಿಯನ್ನು ವಿಶ್ವಮಾನವ ವರ್ಷ ಎಂದು ರಾಜ್ಯ ಸರ್ಕಾರ ಘೋಷಿಸಿದೆ. ಆದರೆ ಈ ಘೋಷಣೆಗೆ ಅನುಗುಣವಾಗಿ ಜಿಲ್ಲೆಯಲ್ಲಿ ಕೋಮುವಾದಿಗಳ ವಿರುದ್ಧ ಬಿಗಿ ಕ್ರಮವನ್ನು ರಾಜ್ಯ ಸರ್ಕಾರ ಕೈಗೊಂಡಲ್ಲಿ 'ವಿಶ್ವಮಾನವ ವರ್ಷ'ದ ಘೋಷಣೆ ನಿಜಕ್ಕೂ ಅರ್ಥಪೂರ್ಣವಾಗುತ್ತದೆ. ○

ಶಿಫ್ಟ್‌ಗಳಲ್ಲಿ ಕೆಲಸ - ದೇಹ ಮನಸ್ಸುಗಳಿಗೆ ಆಯಾಸ





ಶಿಫ್ಟ್ ಕೆಲಸಗಾರರು ಆರೋಗ್ಯದಿಂದಿರಲು ನಿದ್ರೆ, ಆಹಾರಕ್ಕೆ ಸಂಬಂಧಿಸಿದ ಕೆಲವು ಸೂತ್ರಗಳನ್ನು ಹಿಂದಿನ ಸಂಚಿಕೆಯಲ್ಲಿ ಅರಿತಿದ್ದೇವೆ. ಆರೋಗ್ಯದಿಂದಿರಲು ವ್ಯಾಯಾಮವೂ ಅತ್ಯಗತ್ಯ. ಮಧ್ಯ ವಯಸ್ಕರು ಸುಸ್ತು, ಉತ್ಸಾಹ ಇಲ್ಲದಿರುವುದು ಮುಂತಾದವುಗಳನ್ನು ಅನುಭವಿಸುವುದರಿಂದ ಸಕ್ಕರೆ ಕಾಯಿಲೆ, ರಕ್ತದೊತ್ತಡ, ಬೊಜ್ಜು ಮುಂತಾದ ರೋಗಗಳಿಂದ ಬಳಲುತ್ತಿರುವುದರಿಂದ, ಅಂಥ ವ್ಯಕ್ತಿಗಳು ಶಿಫ್ಟ್‌ನಲ್ಲಿ ಕೆಲಸ ಮಾಡುವಾಗ ವ್ಯಾಯಾಮವನ್ನು ಅಲಕ್ಷಿಸುವಂತಿಲ್ಲ.

ಶಿಫ್ಟ್ ಕೆಲಸ ಎಂದಾಕ್ಷಣ ವ್ಯಾಯಾಮ ಮಾಡಲು ಸಾಧ್ಯವಿಲ್ಲ ಎಂಬ ತೀರ್ಮಾನಕ್ಕೆ ಬರುವ ಸಾಧ್ಯತೆ ಇದೆ. ಇದು ಛಳಿ, ಮಳೆಗಾಲದಲ್ಲಿ ವ್ಯಾಯಾಮ ಮಾಡಲು ಸಾಧ್ಯವಿಲ್ಲವೆಂಬ ನೆಪದಂತಾಗುತ್ತದೆ. ವ್ಯಾಯಾಮ ಆರೋಗ್ಯಕ್ಕೆ ಅಗತ್ಯ ಎಂದ ಮೇಲೆ ಯಾರೇ ಆಗಲಿ (ಶಿಫ್ಟ್ ಕೆಲಸಗಾರರನ್ನೂ ಸೇರಿ), ಯಾವುದೇ ಕಾಲದಲ್ಲೂ ವ್ಯಾಯಾಮ ಮಾಡುವ ಮನಸ್ಸುಳ್ಳವರಾಗಬೇಕಾಗುತ್ತದೆ.

ವ್ಯಾಯಾಮಗಳಲ್ಲಿ ಸುಲಭ, ಖರ್ಚಿಲ್ಲದ ವ್ಯಾಯಾಮವೆಂದರೆ ಅರ್ಧಗಂಟೆ ಓಡುವುದು, ಜಾಗಿಂಗ್ ಅಥವಾ ನಡಿಗೆ. ಓಡುವಾಗ ಹೆಚ್ಚು ಉಸಿರಾಟ ಮಾಡಬೇಕಾಗುವುದರಿಂದ ಅದನ್ನು ಏರೋಬಿಕ್ ವ್ಯಾಯಾಮ (aerobic) ಎನ್ನುವರು. ಇದಲ್ಲದೆ ಈಜು, ಸೈಕಲ್ ಓಡಿಸುವುದು ಕೂಡ ಅಷ್ಟೇ ಶ್ರೇಷ್ಟವಾದದ್ದು. ವ್ಯಾಯಾಮ ದೇಹದಾರ್ಢ್ಯವನ್ನು ಹೆಚ್ಚಿಸುತ್ತಿದೆ. ನಿದ್ರೆ ಬರಲು ಸಹಾಯವಾಗುತ್ತದೆ ಹಾಗೂ ಮಾನಸಿಕ ನೆಮ್ಮದಿ ಉಂಟುಮಾಡುತ್ತದೆ. ಬೊಜ್ಜು ಕರಗಿಸಲು ಸಹಾಯ ಮಾಡುತ್ತದೆ. ವ್ಯಾಯಾಮ ಮಾಡುವವರಲ್ಲಿ ಸುಸ್ತು, ಮೇಲಿಂದ ಮೇಲೆ ಕಾಯಿಲೆಯಾಗುವುದು (ಸೋಂಕು) ಕಡಿಮೆಯೆಂದೇ ಹೇಳಬಹುದಾಗಿದೆ.

ಶಿಫ್ಟ್ ಕೆಲಸದಲ್ಲಿ ಒಬ್ಬ ವ್ಯಕ್ತಿ, ದಿನದ ಮೂರನೇ ಒಂದು ಭಾಗದಷ್ಟು ವ್ಯಯ ಮಾಡುವುದರಿಂದ, ಈ ಶಿಫ್ಟ್ ಸಮಯವನ್ನು ಸರಿಯಾಗಿ ಬಳಸಿಕೊಳ್ಳಬೇಕಾಗುತ್ತದೆ. ಉದಾ: ಮಧ್ಯಂತರ ವಿರಾಮದ ಸಮಯದಲ್ಲಿ ಕೆಲವು ಸುಲಭ ವ್ಯಾಯಾಮಗಳನ್ನು ಮಾಡುವುದು.

ಕೆಲಸಕ್ಕೆ ಹೋಗುವಾಗ ವಾಹನ ಬಳಸದೇ ನಡೆದೇ ಹೋಗುವುದು. ಕೆಲವೊಮ್ಮೆ ಒಬ್ಬರಿಗೇ ವ್ಯಾಯಾಮ ಮಾಡಲು ಸಾಧ್ಯವಾಗದೇ ಇದ್ದಲ್ಲಿ, ಜೊತೆಗೆ ಕೆಲಸ ಮಾಡುವ ಯಾರನ್ನಾದರೂ ನಿಮ್ಮ ಜೊತೆ ವ್ಯಾಯಾಮ ಮಾಡಲು ಪ್ರೋತ್ಸಾಹಿಸುವುದು.

ಈಗಿನ ಜೀವನ ಶೈಲಿಯಲ್ಲಿ ವ್ಯಾಯಾಮಕ್ಕೆ ಪ್ರಾಮುಖ್ಯತೆ ಇಲ್ಲದಿರುವುದರಿಂದ ವ್ಯಾಯಾಮ ಅಭ್ಯಾಸ ಎಲ್ಲರಿಗೂ ಅತ್ಯವಶ್ಯಕ.

ಶಿಫ್ಟ್ ಕೆಲಸ ಮಾಡುವವರು ಇನ್ನೊಂದು ಸಮಸ್ಯೆ, ಅವರು ಅನೇಕ ಸಂಬಂಧಿಕರ, ಸ್ನೇಹಿತರ, ಅಷ್ಟೇಕೆ ಕೆಲವೊಮ್ಮೆ ಮನೆಯವರ ಸಂಪರ್ಕವನ್ನು ಕಳೆದುಕೊಳ್ಳುತ್ತಾರೆ. "ನಾಲ್ಕು ವಾರವಾಯ್ತು, ನನ್ನ ಮಗಳೊಂದಿಗೆ ನನಗೆ ಆಡಲು ಸಾಧ್ಯವಾಗಿಲ್ಲ. ಈ ಶಿಫ್ಟ್ ಕೆಲಸ ಮಾರಾಯರೇ" ಎಂದು ಹೇಳುತ್ತಾರೆ. ಈ ಸಂಪರ್ಕ ಕಳೆದು ಹೋದರೆ ಒಂಟಿತನ ಉಂಟಾಗುತ್ತದೆ. ನಂತರ ಬೇಜಾರು, ಆತಂಕ ಮುಂತಾದ ತೊಂದರೆಗಳು ಉಂಟಾ ಗುತ್ತವೆ. ಮಾನವ ಸಂಘಜೀವಿ ಎಂಬುದನ್ನು ಮರೆಯುವಂತಿಲ್ಲ. ಆದ್ದರಿಂದ ಶಿಫ್ಟ್ ಕೆಲಸಗಾರರು ಜನಸಂಪರ್ಕಕ್ಕೆ ಮಹತ್ವ ಕೊಡಬೇಕಾಗುತ್ತದೆ.

ಈ ದಿನಗಳಲ್ಲಿ ಎಲ್ಲೆಲ್ಲೂ ಫೋನ್ ಸೌಕರ್ಯವಿದೆ. ಸಾಧ್ಯವಾದಾಗ ಮನೆಗೆ ಫೋನ್ ಮಾಡಿ ಹೆಂಡತಿ, ಮಕ್ಕಳ ಯೋಗಕ್ಷೇಮವನ್ನು ಕೇಳುತ್ತಾ ಎಲ್ಲರ ಸಂಪರ್ಕದಲ್ಲಿರುವ ಅಭ್ಯಾಸ ಇಟ್ಟುಕೊಳ್ಳಬಹುದು. ನಿಮ್ಮ ಫೋನ್‌ನಿಂದ ಇತರರಿಗೂ ಸಂತೋಷವಾಗುತ್ತದೆ. ಇದು ಬಾಂಧವ್ಯಗಳನ್ನು ವೃದ್ಧಿಸುವ ಒಂದು ವಿಧಾನ. ಸಾಧ್ಯವಾದರೆ ಶಿಫ್ಟ್ ಸಮಯ ಮುಗಿದ ನಂತರ ಸ್ನೇಹಿತರನ್ನು ಆಹ್ವಾನಿಸಿ 'ಚಹ' ಕುಡಿಯುತ್ತ ಬೇಟಿ ಮಾಡಬಹುದು. ಈ ರೀತಿ ಮಾನವ ಸಂಪರ್ಕದಿಂದ ಶಿಫ್ಟ್ ಕೆಲಸಗಾರರಿಗೆ ಪ್ರಯೋಜನವಾಗುವುದು ಖಂಡಿತ.

ನೀವೂ ಪ್ರಶ್ನೆ ಕಳಿಸಿ


ಮೂಡಣ ಕೆಂಪಾಗಿದೆ ಪುನಃ?

ಚೀನಾ ಅರವತ್ತರ ದಶಕದಲ್ಲಿ ಮೊದಲ ಬಾರಿಗೆ ಉಪಗ್ರಹ ಹಾರಿಸಿದಾಗ ಆಗಿನ ಎರಡೂ ಸೂಪರ್ ಪವರ್‌ಗಳಿಗೆ ಸೆಡ್ಡು ಹೊಡೆದು ಅಂತರ್‍ರಾಷ್ಟ್ರೀಯವಾಗಿ ಏಕಾಂಗಿ'ಯಾಗಿದ್ದ ಸಮಯ. ಆಗ ಚೀನಿ ಉಪಗ್ರಹ 'ಮೂಡಣ ಕೆಂಪಾಗಿದೆ....' ಎಂಬ ಹಾಡನ್ನು ಭೂಮಿಗೆ ಬಿತ್ತರಿಸಿತ್ತು. ಇತ್ತೀಚೆಗೆ ಮೊದಲ ಚೀನಿ ಮನುಷ್ಯ ಂತರಿಕ್ಷ ಯಾತ್ರೆ ಮಾಡಿ ಸುರಕ್ಷಿತವಾಗಿ ವಾಪಸ್ಸಾದಾಗ ಚೀನಿಯರು ಸಂಭ್ರಮದಿಂದ ಸ್ವಾಗತಿಸಿದರು. ಮಾತ್ರವಲ್ಲ ಅಂತರ್‍ರಾಷ್ಟ್ರೀಯವಾಗಿಯೂ ಇದು ಗಮನಾರ್ಹ ಬೆಳವಣಿಗೆ. ಈ ಬೆಳವಣಿಗೆಯ ಮಹತ್ವದ ಬಗ್ಗೆ ಲೇಖನ.

ಜಗತ್ತನ್ನೊಂದು ಸುತ್ತು

ಶರತ್ ಚಂದ್ರ

ಚೀನಿ ಅಂತರಿಕ್ಷ ಯಾತ್ರೆ



ನಃ.... 'ಮೂಡಣ
ಪಾಗಿದೆ'ಯೇ? ಚೀನಿ
ತರಿಕ್ಷ ಯಾತ್ರಿಯೊಬ್ಬ
ಮಿಗೆ 14 ಸುತ್ತು ಹಾಕಿ
ಕ್ಷಿತವಾಗಿ ವಾಪಸ್ಸಾದಾಗ
ವರು ಈ ಪ್ರಶ್ನೆ
ದ್ದರು. ಇದಕ್ಕೆ ಹಿನ್ನೆಲೆ
. ಚೀನಾ ಮೊದಲಬಾರಿ
ವತ್ತರ ದಶಕದಲ್ಲಿ
ದಲ ಉಪಗ್ರಹವನ್ನು
ಲವಾಗಿ ಅಂತರಿಕ್ಷಕ್ಕೆ
ಬಿಟ್ಟಿತ್ತು. ಈಗ ಚೀನಾ
ತೂ ಸೂಪರ್‌ಪವರ್‌ಗೆ ಸೆಡ್ಡು ಹೊಡೆದು
ತ್ರ ನೀತಿ ಅನುಸರಿಸುತ್ತಿದ್ದ ಸಂದರ್ಭ. ಆಗ
ಾ ತನ್ನ ಸಫಲತೆ ಬಗ್ಗೆ ಸಂಭ್ರಮ ಮತ್ತು
ಮ್ಮೆಯನ್ನು 'ಮೂಡಣ ಕೆಂಪಾಗಿದೆ...' ಎಂಬ
ತನ್ನು ಅಂತರಿಕ್ಷದಿಂದ ಬಿತ್ತರಿಸುವ ಮೂಲಕ
ರ್ಶಿಸಿತ್ತು. ಆಗ 'ಅಂತರಿಕ್ಷ ಕ್ಲಬ್'ನ್ನು
ೇಶಿಸಿದ ಮೂರನೇ ದೇಶವಾಗಿತ್ತು. ಈಗ
ನವನನ್ನು ಅಂತರಿಕ್ಷಕ್ಕೆ ಕಳಿಸಿ ಸುರಕ್ಷಿತವಾಗಿ
ೆ ಕರೆಸಿಕೊಂಡ ಮೂರನೇ ದೇಶವಾದ
ೇವಿಯತ್ ಯೂನಿಯನ್ ಮತ್ತು ಅಮೆರಿಕ
) ಸಂಭ್ರಮ ಮತ್ತು ಹೆಮ್ಮೆ ಚೀನಾದ್ದು.
ಇದರ ಮಹತ್ವ ಏನು? ಇದು ಮನುಕುಲದ

ಅಂತರಿಕ್ಷ ತಂತ್ರಜ್ಞಾನದಲ್ಲಿ ಮೈಲಿಗಲ್ಲು ಖಂಡಿತ ಅಲ್ಲ. 42 ವರ್ಷಗಳ ಹಿಂದೆ ಸೋವಿಯತ್ ಒಕ್ಕೂಟ ಯೂರಿ ಗಗಾರಿನ್ ಮಾಡಿದ್ದನ್ನು ಚೀನಿಯರು ಪುನಃ ಮಾಡಿದ್ದಾರೆ. ಆದರೆ ಸ್ವತಂತ್ರವಾಗಿ ಅದೇ ಚಮತ್ಕಾರವನ್ನು ಪುನರಾವರ್ತಿಸಿದ್ದು, ಚೀನಾ ವಿಜ್ಞಾನ-ತಂತ್ರಜ್ಞಾನದಲ್ಲಿ ಸಾಧಿಸಿರುವ ಅಗಾಧ ಪ್ರಗತಿಯ ದ್ಯೋತಕ. ಅಂತರಿಕ್ಷ ತಂತ್ರಜ್ಞಾನದಲ್ಲಿ ಯುರೋಪಿಯನ್ ಒಕ್ಕೂಟ, ಭಾರತ, ಜಪಾನ್‌ಗಳಿಗಿಂತಲಂತೂ ಮುನ್ನಡೆ ಸಾಧಿಸಿದೆ ಎಂಬ ಬಗ್ಗೆ ಸಂಶಯವಿಲ್ಲ. 50 ರದಶಕದಲ್ಲಿ ಸೋವಿಯತ್ ಸರ್ಕಾರ ಮತ್ತು 90 ರ ಚೀನಾ ತನ್ನದೇ ಅಂತರಿಕ್ಷ ತಂತ್ರಜ್ಞಾನದಲ್ಲಿ ಪರಿಣಿತಿ ಪಡೆದಿದೆ ಎಂಬುದಕ್ಕೆ ಸಂದೇಹವಿಲ್ಲ. ರಾಕೆಟ್ ತಂತ್ರಜ್ಞಾನದಲ್ಲಿ ಚೀನಿ ಪರಿಣಿತಿ ಬಹಳ ಹಳೆಯದು. ಖಂಡಾಂತರ ಕ್ಷಿಪಣಿಗಳ ಬೆಳವಣಿಗೆಯ ಭಾಗವಾಗಿತ್ತು ಈ ತಂತ್ರಜ್ಞಾನ. ಆದರೆ ಉಪಗ್ರಹ ವಿನ್ಯಾಸದಲ್ಲಿ ಚೀನ ಹಿಂದಿದ್ದು, ಈಗ ದಾಪುಗಾಲಿನ ಹೆಜ್ಜೆ ಹಾಕುತ್ತಿದೆ. ಚೀನಿ ಉಪಗ್ರಹ, ಸೋವಿಯತ್ 'ಸೊಯುಝ್' ದ ಮೇಲೆ ಆಧಾರಿತವಾಗಿದ್ದರೂ ಬಹಳಷ್ಟು ಮಹತ್ವದ ಬದಲಾವಣೆಗಳನ್ನು ಮಾಡಲಾಗಿದೆ.

ಮಾನವ-ಸಹಿತ ಅಂತರಿಕ್ಷಯಾನ ಹಿಂದಿನಿಂದಲೂ ರಾಷ್ಟ್ರೀಯ ಪ್ರತಿಷ್ಠೆಯ ಕಾರ್ಯಕ್ರಮ. ಅದರ ವೈಜ್ಞಾನಿಕ-ಸಾಮಾಜಿಕ ಪ್ರಯೋಜನಗಳು, ಅದರ ವೆಚ್ಚಕ್ಕೆ ಹೋಲಿಸಿದರೆ ಬಹಳ ಕಡಿಮೆ. ಸೋವಿಯತ್‌ನ ಪ್ರಥಮ ಅಂತರಿಕ್ಷ ಮಾನವ ಮತ್ತು ಚಂದ್ರನ ಮೇಲೆ ಮಾನವ ಎರಡೂ ಮನುಕುಲದ ಮನ್ನಡೆಯಲ್ಲಿ ದೊಡ್ಡ ಮೈಲಿಗಲ್ಲುಗಳು. ಆದರೂ ರಾಷ್ಟ್ರೀಯ ಪ್ರತಿಷ್ಠೆಯ ಪ್ರದರ್ಶನ, ರಾಷ್ಟ್ರೀಯ ಅಭಿಮಾನ ಜಾಗೃತಗೊಳಿಸುವ ಭಾಗವೂ ಸಾಕಷ್ಟು ಬಲವಾಗಿಯೇ ಇತ್ತು ಎನ್ನಬಹುದು. ಮಾನವ ಅಂತರಿಕ್ಷ ಯಾನದ ಪ್ರಭಾವ, ಕೆಲವು ಮಾನವ ಮಾತ್ರ ಮಾಡಬಹುದಾದ ಅಂತರಿಕ್ಷ ಪ್ರಯೋಗಗಳು - ಇತ್ಯಾದಿ ವೈಜ್ಞಾನಿಕ ಅಧ್ಯಯನಕ್ಕೆ ಮಾನವ-ಸಹಿತ ಅಂತರಿಕ್ಷ ಯಾನ ಸಹಾಯ ಮಾಡುತ್ತದೆ. ಚೀನಿ ಮಾನವನ ಅಂತರಿಕ್ಷ ಯಾನಕ್ಕೂ ಈ ರಾಷ್ಟ್ರೀಯ ಅಭಿಮಾನದ ಆಯಾಮ ಇದೆ. ಅದೇ ರೀತಿ ಎಲ್ಲಾ ದೇಶಗಳ ಅಂತರಿಕ್ಷ ಕಾರ್ಯಕ್ರಮಗಳಂತೆ ಚೀನಾದ ಕಾರ್ಯಕ್ರಮದಲ್ಲೂ ಮಿಲಿಟರಿ ಆಯಾಮವೂ ಇದ್ದೇ ಇದೆ.

ಚೀನಾದ ಮಾನವ-ಸಹಿತ ಅಂತರಿಕ್ಷ ಯಾನ ಸ್ವತಂತ್ರ ಅಲ್ಲ. ಹಿಂದೆ ಸೋವಿಯತ್ ಮತ್ತು ಈಗ ಯುರೋಪಿಯನ್ ಬೆಂಬಲದ ಮೇಲೆ ಆಧಾರಿತ - ಎಂದು ಹಲವು ಪಾಶ್ಚಿಮಾತ್ಯರು ಟೀಕೆ ಮಾಡಿದ್ದಾರೆ. ಖಂಡಿತ ಅವರ ಟೀಕೆ ವಸ್ತುನಿಷ್ಟವಲ್ಲ. ಉಪಗ್ರಹ ತಂತ್ರಜ್ಞಾನದಲ್ಲಿ ಚೀನಾ ಅಗಾಧ ಪ್ರಗತಿ ಸಾಧಿಸಿದೆ ಎಂಬ ಬಗ್ಗೆ ಯಾವುದೇ ಸಂಶಯ ಬೇಡ.

ಚೀನಾ 'ಚಕ್ರವನ್ನು ಪುನಃ ಅವಿಷ್ಕಾರ' ಮಾಡುವ ವ್ಯರ್ಥ ಪ್ರಯತ್ನದಲ್ಲಿ ತೊಡಗಿದೆ. ವೃಥಾ ಹಣ ಪೋಲು ಮಾಡುತ್ತಿದೆ. ಅಂತರ್‍ರಾಷ್ಟ್ರೀಯ ಅಂತರಿಕ್ಷ ಕಾರ್ಯಕ್ರಮದಲ್ಲಿ ಭಾಗವಹಿಸಿ, ಒಟ್ಟಾರೆ ತಂತ್ರಜ್ಞಾನದ ಬೆಳವಣಿಗೆಗೆ ಕೊಡುಗೆ ನೀಡುವ ಬದಲು, ಸ್ವತಂತ್ರವಾಗಿ ತನ್ನದೇ ಕಾರ್ಯಕ್ರಮ ಮುಂದುವರೆಸುತ್ತಿದೆ ಎಂಬುದು ಇನ್ನೊಂದು ಟೀಕೆ. ಇದು ಹುರುಳಿಲ್ಲದ ಟೀಕೆ. ಅಮೆರಿಕದ ನಾಯಕತ್ವದಲ್ಲಿರುವ 16 ದೇಶಗಳ ಅಂತರ್‍ರಾಷ್ಟ್ರೀಯ ಅಂತರಿಕ್ಷ ಸ್ಟೇಷನ್ ಕಾರ್ಯಕ್ರಮದಲ್ಲಿ ಚೀನಾವನ್ನು ಹೊರಗಿಡಲಾಗಿದೆ. ಚೀನಾದ ಅಂತರಿಕ್ಷ ಕಾರ್ಯಕ್ರಮವು ಮಿಲಿಟರಿ ಕಾರ್ಯಕ್ರಮ ಎಂದು ಅಮೆರಿಕ ಕೊಟ್ಟಿರುವ ನೆಪ. ಇದಕ್ಕಿಂತ ದೊಡ್ಡ ಕ್ರೂರ ಜೋಕ್ ಬೇರೆ ಇರಲಿಕ್ಕಿಲ್ಲ.

ಎಲ್ಲೆಲ್ಲಿ ಸಾಧ್ಯವಿದೆಯೋ, ಅಲ್ಲೆಲ್ಲಾ ಚೀನಾ ಅಂತರ್‍ರಾಷ್ಟ್ರೀಯ ಅಂತರಿಕ್ಷ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದೆ. ಭೂಪಟ ಮಾಡುವ ವಿಶಿಷ್ಟ ಉಪಗ್ರಹ ಗಳ ಕಾರ್ಯಕ್ರಮ, 'ಡಬಲ್ ಸ್ಟಾರ್' ಎಂಬ ಭೂಮಿ ಪರಿಸರದ ಮೇಲೆ ಸೂರ್ಯನ ಪರಿಣಾಮ ಅಧ್ಯಯನ ಕಾರ್ಯಕ್ರಮ, 'ಗೆಲಿಲಿಯೋ' ಎಂಬ ಜಾಗತಿಕ ಸಾಗಾಣಿಕೆಗೆ ನೆರವಾಗುವ ಉಪಗ್ರಹ ಸಂಪರ್ಕ ವ್ಯವಸ್ಥೆಯ ಕಾರ್ಯಕ್ರಮ (ಇದು ಅಮೆರಿಕದ ಜಿಪಿಎಸ್ ಕಾರ್ಯಕ್ರಮಕ್ಕೆ ಪೈಪೋಟಿ ಕೊಡುವ ಕಾರ್ಯಕ್ರಮ) - ಇವುಗಳಲ್ಲಿ ಚೀನಾ, ಯುರೋಪಿಯನ್ ಅಂತರಿಕ್ಷ ಏಜೆನ್ಸಿ ಜತೆ ಭಾಗವಹಿಸುತ್ತಿದೆ.

ಚೀನಾದ ಅಂತರಿಕ್ಷ ತಂತ್ರಜ್ಞಾನದಲ್ಲಿ ಪರಿಣಿತಿಗೆ ಮಿಲಿಟರಿ, ಅಂತರ್‍ರಾಷ್ಟ್ರೀಯ ರಾಜಕೀಯ ಮಹತ್ವವೂ ಇದೆ - ಎಂಬುದರಲ್ಲೂ ಸಂದೇಹವಿಲ್ಲ. 50 ರ ದಶಕದಿಂದ 80 ರ ದಶಕದ ವರೆಗೆ 40 ವರ್ಷಗಳ ವರೆಗೆ ಸೋವಿಯತ್ ಒಕ್ಕೂಟ ಅಂತರಿಕ್ಷ ವಿಜ್ಞಾನ-ತಂತ್ರಜ್ಞಾನ (ಮತ್ತು ಅದರ ಮಿಲಿಟರಿ ಬಳಕೆ ಸಾಧ್ಯತೆ) ಅಮೆರಿಕದ್ ಜತೆ ಸಾಧಿಸಿದ್ದ ಸಮಬಲ (ಹಲವು ಕ್ಷೇತ್ರಗಳಲ್ಲಿ ಮುನ್ನಡೆ ಸಹ), ಇಪ್ಪತ್ತನೇ ಶತಮಾನದ ಉತ್ತರಾರ್ಧದಲ್ಲಿ ಜಾಗತಿಕ ಶಾಂತಿ ಮತ್ತು ಮೂರನೇ ಜಗತ್ತಿನ ದೇಶಗಳಿಗೆ ಸ್ವತಂತ್ರ ಬೆಳವಣಿಗೆಯ ಹಾದಿ - ಸಾಮಾಜಿಕ ವ್ಯವಸ್ಥೆ ಹುಡುಕಿಕೊಳ್ಳುವ ಸಾಧ್ಯತೆ ಒದಗಿಸಿತ್ತು. ಕಳೆದ ಹತ್ತು ವರ್ಷಗಳಲ್ಲಿ ಅದು ನಾಶವಾಗುವ ಲಕ್ಷಣಗಳೂ ಇವೆ. ಈಗ ಚೀನಾ ಅದೇ ಸಮಬಲ ಸಾಧಿಸುವ ಹಾದಿಯಲ್ಲಿರು ವುದು ಬಹುಶಃ ಆ ರೀತಿಯ ಅಂತರ್‍ರಾಷ್ಟ್ರೀಯ ಮಹತ್ವ ಹೊಂದಿದೆ. ಅಂತರಿಕ್ಷ ಕಾರ್ಯಕ್ರಮದಲ್ಲಿ ಚೀನಾದ ಹೂಡಿಕೆ ಅಮೆರಿಕದ 1/5 ನೇ ಭಾಗವಾದರೂ,ಯುರೋಪಿಯನ್ ಒಕ್ಕೂಟದ ಹೂಡಿಕೆಗೆ ಹೆಚ್ಚುಕಡಿಮೆ ಸಮವಾಗಿದೆ - ಎಂಬುದು ಗಮನಾರ್ಹ. ರಶ್ಯಾದ ಹೂಡಿಕೆ ಚೀನಾದ ಹೂಡಿಕೆಯ 1/10 ರಷ್ಟು ಇದೆ.




ಸದ್ದಾಂನ ಹಾದಿಯಲ್ಲಿ ಬುಶ್... ಉರುಳುತ್ತಿರುವುದು

ಇರಾಕ್‌ನಲ್ಲಿ ಅಮೆರಿಕದ ಸೈನಿಕರು ಸದ್ದಾಂ ಹುಸೇನ್ ಮೂರ್ತಿ ಉರುಳಿದ್ದನ್ನು ಅಣಕಿಸುವ ರೀತಿಯಲ್ಲಿ ಬ್ರಿಟಿಷ್ ಜನ ಬುಶ್‌ನ ಮೂರ್ತಿಯನ್ನು ಉರುಳಿಸುತ್ತಿರುವುದು. ಲಂಡನ್‌ನಲ್ಲಿ ಬುಶ್ ಬ್ರಿಟನ್ ಭೇಟಿಯ ಸಮಯದಲ್ಲಿ ಎರಡು ಲಕ್ಷ ಜನರ ಭಾರಿ ಪ್ರತಿಭಟನಾ ರ್‍ಯಾಲಿಯ ಸಂದರ್ಭದಲ್ಲಿ ಕಂಡ ದೃಶ್ಯ.

...ರಾಜ್ಯಾದ್ಯಂತ ಪಿಕೆಟಿಂಗ್, ಪ್ರತಿಭಟನೆ ......

... 8 ರಿಂದ

.ಎಫ್‌ನಲ್ಲಿ ನಡೆದ ಪ್ರತಿಭಟನೆಯ ನೇತೃತ್ವ
ಸಿದ್ದು, ಶಿಡ್ಲಘಟ್ಟದಲ್ಲಿ ಕೆ.ಎಂ.ವೆಂಕಟೇಶ್
ು ನೇತೃತ್ವ ವಹಿಸಿದ್ದರು.
.ಜಿ.ಎಫ್‌ನಲ್ಲಿ ಉರಿಗಾಂ ರೆಲ್ವೇ
ಷನ್‌ನಿಂದ ರಾಬರ್ಟ್‌ಸನ್ ಪೇಟೆ
ಸ್ಟ್ಯಾಂಡ್‌ವರೆಗೆ ಬೃಹತ್ ಮೆರವಣಿಗೆ ನಡೆಸಿದ್ದು



ಳೆಯರು ಹೆಚ್ಚಿನ ಸಂಖ್ಯೆಯಲ್ಲಿ
ಹಿಸಿದ್ದರು. ರೈತರ ಆತ್ಮಹತ್ಯೆ ಮತ್ತು ಹಸಿವಿನ
ಕಾರಣರಾದ ಬಿಜೆಪಿ ನೇತೃತ್ವದ
ಸರಕಾರ ಮತ್ತು ಕಾಂಗ್ರೆಸ್ ನೇತೃತ್ವದ ರಾಜ್ಯ
ರದ ವಿರುದ್ಧ ಘೋಷಣೆ ಕೂಗಿದ
ಗೆಕಾರರು, ಮುಚ್ಚಿ ಹೋದ ಚಿನ್ನದ ಗಣಿ
ಕರಿಗೆ ರೇಷನ್ ಕಾರ್ಡ್ ನೀಡಬೇಕೆಂದು
ಸಿದರು.
ಯುವ ನೀರು, ಕೃಷಿ ನೀರಾವರಿ
ನೆಗಳನ್ನು ಜಾರಿಗೊಳಿಸಬೇಕೆಂದೂ
ದಲ್ಲಿ ತೀವ್ರ ಹೋರಾಟವನ್ನು
ವರಿಸಬೇಕೆಂದೂ ಕೋಲಾರ ಜಿಲ್ಲೆಯ

ಮುಖಂಡರು ಕರೆ ನೀಡಿದರು.

ಉತ್ತರಕನ್ನಡ : ಜಿಲ್ಲೆಯ ಹೊನ್ನಾವರದಲ್ಲಿ ಪಿಕೆಟಿಂಗ್ ಕಾರ್ಯಕ್ರಮ ನಡೆದಿದ್ದು ರಾಜ್ಯಸಮಿತಿ ಸದಸ್ಯ ಶಾಂತಾರಾಂ ನಾಯಕ್, ಜಿಲ್ಲಾ ಮುಖಂಡರಾದ ತಿಲಕಗೌಡ, ವಿಠ್ಠಲಭಂಡಾರಿ, ಶುಭಾಸ್ ಕೊಪ್ಪಿಕರ್ ಮೊದಲಾದವರು ಭಾಗವಹಿಸಿದ್ದರು.

ಕೊಡಗು ಜಿಲ್ಲೆಯ ವಿರಾಜಪೇಟೆಯಲ್ಲಿ ನಡೆದ ಪ್ರತಿಭಟನೆಯ ನೇತೃತ್ವವನ್ನು ಕಾರ್ಯದರ್ಶಿ ಪೀಟರ್ ಲೊಬೊ ವಹಿಸಿದ್ದರು.

ಒಟ್ಟಾರೆಯಾಗಿ ನವೆಂಬರ್ 17 ರ ಪ್ರತಿಭಟನಾ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿದ್ದು ಈ ಹೋರಾಟ ವನ್ನು ತೀವ್ರಗೊಳಿಸಬೇಕೆಂದೂ ಐಕ್ಯ ಚಳುವಳಿಯನ್ನು ಮುರಿಯಲು ಯತ್ನಿಸುವ ಕೋಮುವಾದಿಗಳ ವಿರುದ್ಧ ತೀವ್ರ ಹೋರಾಟ ನಡೆಸಬೇಕೆಂದೂ ಪ್ರತಿಭಟನಾಕಾರರು ಪ್ರತಿಜ್ಞೆಗೈದಿದ್ದಾರೆ.

ನವೆಂಬರ್ 17 ರಂದು ನಡೆದ ಪ್ರತಿಭಟನೆಯ ಮೊದಲು ಒಂದು ವಾರಗಳ ಕಾಲ ಪ್ರಚಾರ, ಕರಪತ್ರಹಂಚಿಕೆ, ನಡೆದ ವರದಿಗಳು ಬಂದಿವೆ. ಈ ಬಾರಿಯ ಪ್ರತಿಭಟನೆಯಲ್ಲಿ ಬಡಜನವಿಭಾಗದಿಂದ ಬಹುತೇಕ ಭಾಗವಹಿಸಿದ್ದು, ಮಹಿಳೆಯರು, ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ ವರದಿಗಳು ಬಂದಿವೆ. ಇದು ಸಮಸ್ಯೆಯ ಆಳವನ್ನು ಎತ್ತಿ ತೋರಿಸುತ್ತದೆ ಮತ್ತು ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ಎಚ್ಚರಿಕೆ ಗಂಟೆಯೂ ಆಗಲಿದೆ. ○



‘ನಮ್ಮ ಪ್ರೀತಿಯ ರಾಮು’

ಅಂಧನೊಬ್ಬನ ಬದುಕಿನ ಬವಣೆಯ ಕಥೆ

ರಾಜಕೀಯ ನಾಯಕರು ತಮ್ಮ ತಣ್ಣನೆಯ ಮಾತುಗಳಿಂದಲೇ ಜನರನ್ನು ನಂಬಿಸಿ ಅವರ ಜೀವನದೊಂದಿಗೆ ಚೆಲ್ಲಾಟವಾಡುವುದು, ಅದರಲ್ಲೂ ಮಹಿಳೆಯರು ಅವರಿಂದ ದೌರ್ಜನ್ಯಕ್ಕೀಡಾಗುವುದು ಇಂದಿನ ದಿನಗಳಲ್ಲಿ ಹೆಚ್ಚು. ಅದಕ್ಕೆ ಸಾಕಷ್ಟು ಉದಾಹರಣೆಗಳೂ ಇವೆ. ಅಂಥಹ ರಾಜಕೀಯ ನಾಯಕನ ನಾಜೂಕಿನ ಮಾತಿನ ಹಿಂದಿನ ತಣ್ಣನೆಯ ಕ್ರೌರ್ಯವನ್ನು ನಮ್ಮ ಮುಂದಿಡುತ್ತದೆ ಈ ಚಿತ್ರ.

ಅಂಧ ಯುವಕನೊಬ್ಬನ ಬದುಕಿನ ಬವಣೆಯ ಸುತ್ತ ಹೆಣೆದಿರುವ ಕಥೆ ನಮ್ಮ ಪ್ರೀತಿಯ ರಾಮು. ಬದುಕಿನ ಬಂಡಿ ಸಾಗಿಸಲು ಸಂತೆಯಲ್ಲಿ ಜನರ ಮುಂದೆ ಹಾಡಿ ಬಂದ ಹಣದಿಂದಲೇ ಆತನ ಕುಟುಂಬದ ಜೀವನ. ಆತನ ತಂದೆ, ತಾಯಿ, ತಂಗಿಗೆ ಇವನ ದುಡಿಮೆಯಿಂದಲೇ ಕೂಳು. ಕಡುಬಡತನವನ್ನೇ ಹಾಸಿಹೊದ್ದ ಅವರ ಅಸಹಾಯಕತೆಯನ್ನೇ ಊರಿನ ರಾಜಕೀಯ ಪುಡಾರಿ ತನ್ನ ಲಾಭಕ್ಕೆ ಬಳಸಿಕೊಳ್ಳುತ್ತಾನೆ. ರಾಮುವಿಗೆ ಕಣ್ಣು ಬರಿಸಲು ಚಿಕಿತ್ಸೆ ಕೊಡಿಸುವುದಾಗಿ ಆಶ್ವಾಸನೆ ನೀಡುತ್ತಾನೆ. ಆತನ ಆಮಿಷಕ್ಕೆ ಬಲಿಯಾಗಿ ಆತನನ್ನೇ ದೇವರೆಂದು ಬಗೆಯುತ್ತಾರೆ. ಆದರೆ ತನ್ನ ಕಾರ್ಯಸಾಧನೆಗಾಗಿ ಮಂತ್ರಿಯೊಬ್ಬನ ಮಗನ ಆಸೆಯನ್ನು ಪೂರೈಸಲು ಅಂಧ ರಾಮುವಿನ ತಂಗಿ ಮತ್ತು ಗೆಳತಿಯನ್ನು ಅವನಿಗೆ ಬಲಿಕೊಟ್ಟು ತನ್ನ ಕುತಂತ್ರ ಬುದ್ಧಿಯಿಂದ ಅವರ ಜೀವನವನ್ನೇ ಹಾಳುಗೆಡವುತ್ತಾನೆ. ಇಷ್ಟಾದರೂ ರಾಮುವಿಗೆ ಕಣ್ಣು ಬರುವುದೆಂಬ ಆಸೆಯ ಮೇಲೆ ಆ ಇಬ್ಬರೂ ಹೆಣ್ಣುಗಳು ತಮ್ಮ ಮೇಲಾದ ದೌರ್ಜನ್ಯವನ್ನು ಮುಚ್ಚಿಟ್ಟುಕೊಳ್ಳುತ್ತಾರೆ. ಕೊನೆಗೆ ರಾಮುವಿನ ತಂಗಿ ಸಾವಿಗೆ ಶರಣಾಗುತ್ತಾಳೆ. ಪ್ರೀತಿಯ ತಂಗಿಯ ಸಾವಿಗೆ ಪುಡಾರಿಯೇ ಕಾರಣವೆಂದು ಅರಿತ ರಾಮು ಆತನನ್ನು ಕೊಂದು ಜೈಲು ಪಾಲಾಗುತ್ತಾನೆ. ಇದಿಷ್ಟು ಚಿತ್ರದ ಕಥೆ.

ಮಲೆಯಾಳಂ ಮೂಲದ ಈ ಚಿತ್ರ ನಂತರ ತಮಿಳಿಗೆ ರಿಮೇಕ್ ಆಗಿ ಈಗ ಕನ್ನಡಕ್ಕೂ ಬಂದಿದೆ. ಯಾವುದೇ ಬದಲಾವಣೆಯಿಲ್ಲದೆ ಹಾಗೆಯೇ ಭಟ್ಟಿ ಇಳಿಸಿರುವುದರಿಂದ ನಿರ್ದೇಶಕರ ಜಾಣ್ಮೆಯನ್ನು ಮೆಚ್ಚುವಂತಾದ್ದೇನಿಲ್ಲ. ಆದರೆ ಕಲಾವಿದರೆಲ್ಲರೂ ಚಿತ್ರಕ್ಕೆ ಜೀವ ತುಂಬಿದ್ದಾರೆ. ಅದರಲ್ಲೂ ಬರೀ ಹೊಡೆದಾಟ, ಬಡಿದಾಟಗಳಿಗೇ ಬ್ರಾಂಡ್ ಆಗಿದ್ದ ದರ್ಶನ್ ತನ್ಮಯತೆಯಿಂದ ಅಭಿನಯಿಸಿದ್ದಾರೆ. ಹಾವಭಾವ, ಆಂಗಿಕ ಅಭಿನಯ ಮೂಲ ಚಿತ್ರದ ನಾಯಕನನ್ನೇ ಅನುಸರಿಸಿದ್ದರೂ ಮನಮಿಡಿಯುತ್ತದೆ. ಅಂಧರ ಅಸಹಾಯಕತೆ ಮತ್ತು ಜೀವನವನ್ನು ಎದುರಿಸಲು ತೋರುವ ಗಟ್ಟಿತನವನ್ನು ಸಮರ್ಥವಾಗಿ ಬಿಂಬಿಸಿದೆ ‘ರಾಮು’.

ರಾಜಕೀಯ ನಾಯಕರು ತಮ್ಮ ತಣ್ಣನೆಯ ಮಾತುಗಳಿಂದಲೇ ಜನರನ್ನು ನಂಬಿಸಿ ಅವರ ಜೀವನದೊಂದಿಗೆ ಚೆಲ್ಲಾಟವಾಡುವುದು, ಅದರಲ್ಲೂ ಮಹಿಳೆಯರು ಅವರಿಂದ ದೌರ್ಜನ್ಯಕ್ಕೀಡಾಗುವುದು ಇಂದಿನ ದಿನಗಳಲ್ಲಿ ಹೆಚ್ಚು. ಅದಕ್ಕೆ ಸಾಕಷ್ಟು ಉದಾಹರಣೆಗಳೂ ಇವೆ. ಅಂಥಹ ರಾಜಕೀಯ ನಾಯಕನ ನಾಜೂಕಿನ



ಮಾತಿನ ಹಿಂದಿನ ತಣ್ಣನೆಯ ಕ್ರೌರ್ಯವನ್ನು ಮುಂದಿಡುತ್ತದೆ ಈ ಚಿತ್ರ.

ಆದರೆ ಇಂತಹ ದೌರ್ಜನ್ಯಕ್ಕೆ ತಡೆ ಎಂ… ದೌರ್ಜನ್ಯಕ್ಕೀಡಾದ ಹೆಣ್ಣುಮಕ್ಕಳು … ಅಸಹಾಯಕತೆಯನ್ನು ಶಪಿಸುತ್ತಾ ಕೂರಬೇ… ಅಂತವನೊಬ್ಬನನ್ನು ಕೊಲ್ಲುವುದರಿಂದ ಸ… ಬಗೆಹರಿಯುವುದೇ? ಆತನನ್ನು ಕೊಂದ ರಾ… ಜೈಲು ಪಾಲಾದರೆ, ತನ್ನೊಂದು ಕಣ್ಣು ಕೊ… ತಯಾರಾದ ಆತನ ಗೆಳತಿಯ ಪಾಡೇನು… ಪ್ರಶ್ನೆಗಳಿಗೆ ಈ ಚಿತ್ರದಲ್ಲಿ ಉತ್ತರವಿಲ್ಲ.

ರಮ್ಯ ಪರಿಸರದಲ್ಲಿ ಚಿತ್ರೀಕ… ಗೊಂಡಿರುವುದರಿಂದ ಛಾಯಾಗ್ರಹಣ … ನೀಡುತ್ತದೆ. ಒಂದೆರೆಡು ಹಾಸ್ಯ ಸನ್ನಿವೇಶ… ಚಿತ್ರದ ತುಂಬಾ ಬಡ ಕುಟುಂ… ಅಸಹಾಯಕತೆಯೇ ತುಂಬಿ ಕೊಂಡಿ… ದರಿಂದ, ಎರಡು ಗಂಟೆಗಳ ಕಾಲ ಕ… ಕೊಂಡಿರುವುದು ಸ್ವಲ್ಪ ಕಷ್ಟವೇ. ಇಳಯರಾ… ಸಂಗೀತದಲ್ಲಿ ಎಂದೆರೆಡು ಹಾಡು ಮಧುರವಾ… ಮೂಲ ಚಿತ್ರದಲ್ಲಿ ಆ ಮಣ್ಣಿನ ಸೊ… ಹತ್ತಿರವಾಗಿ ಚಿತ್ರಿಸಲಾಗಿದ್ದು ಅದನ್ನು ಹಾ… ರಿಮೇಕ್ ಮಾಡಿರುವುದರಿಂದ ಈ ಕಥೆ… ನಡುವಿನದ್ದಲ್ಲ ಎಂದನಿಸುವುದು ನಿಜ, ರಾಜ… ಪುಡಾರಿಯ ಅಂಶಗಳನ್ನು ಹೊರತುಪಡಿಸಿ… ಪಾತ್ರದಲ್ಲಿ ನೂತನ ಕಲಾವಿದ ರಾಮು… ವಿಲನ್ ಪಾತ್ರಗಳಿಗೆ ಅಗತ್ಯವೆಂದು ಭಾ… ಯಾವುದೇ ಅರಚಾಟ, ಕಿರಿಚಾಟ… ಆಸ್ಪದವಿಲ್ಲದೆ ನಗುನಗುತ್ತಲೇ ಕೊ… ಕುಯ್ಯುವಂತಹ ತಣ್ಣನೆಯ ಅಭಿ… ನೀಡಿರುವುದು ಚಿತ್ರದ ಹೈಲೈಟ್.

● ರಾ…



ಕ್ರೀಡಾಂಗಣಕ್ಕಾಗಿ ಪಂದ್ಯಾವಳಿ

ಹೋಬಳಿಗೊಂದು ಅಚ್ಚುಕಟ್ಟಾದ ಕ್ರೀಡಾಂಗಣ ಬೇಕು’ ಎಂದು ಆಗ್ರಹಿಸಿ ಮುಕ್ತ ವ್ಹಾಲಿಬಾಲ್ ಪಂದ್ಯಾವಳಿಯನ್ನು ಹಮ್ಮಿಕೊಳ್ಳುವ ಮೂಲಕ ಹಾವೇರಿ ಜಿಲ್ಲೆ ಹಾನಗಲ್ಲ ತಾಲೂಕಿನ ಬಮ್ಮನಹಳ್ಳಿಯ ಎಸ್.ಎಫ್.ಐ. ಘಟಕವು ವಿನೂತನವಾಗಿ ಸರ್ಕಾರದಲ್ಲಿದ್ದವರ ಗಮನ ಸೆಳೆಯಿತು. ಗ್ರಾಮೀಣ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ತಾರತಮ್ಯಕ್ಕೆ ಒಳಗಾಗುತ್ತಿದ್ದಂತೆ ಕ್ರೀಡಾ ಸೌಲಭ್ಯಗಳಿಂದಲೂ ವಂಚಿತರಾಗುತ್ತಿದ್ದಾರೆ. ಕ್ರೀಡಾಂಗಣಗಳ ಕೊರತೆಯೂ ಸೇರಿದಂತೆ ಕನಿಷ್ಟ ಪ್ರೋತ್ಸಾಹವೂ ಇಲ್ಲದೆ ಗ್ರಾಮೀಣ ಕ್ರೀಡಾ ಪ್ರತಿಭೆಗಳು ಕಮರಿಹೋಗುತ್ತವೆ. ಈ ಹಿನ್ನೆಲೆಯಲ್ಲಿ ಶಿಕ್ಷಣ ಪ್ರೇಮಿಗಳನ್ನು, ಕೀಡಾ ಪ್ರೇಮಿಗಳನ್ನು ಒಂದೆಡೆ ಸೇರಿಸಿ ಅವರ ಮೂಲಕ ಸರ್ಕಾರದ ಗಮನ ಸೆಳೆಯುವುದು ಈ ಪಂದ್ಯಾವಳಿಯ ಉದ್ದೇಶವಾಗಿತ್ತು.

ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡಿದ ಹಾವೇರಿಯ ಪ್ರಗತಿಪರ ಸಾಹಿತಿಗಳಾದ ಹನುಮಂತಗೌಡಗೊಲ್ಲರ ಅವರು “ದೇಶವು ವಸಾಹತುಶಾಹಿ ಆಳ್ವಿಕೆಯಿಂದ ವಿಮೋಚನೆಗೊಂಡು ಐದು ದಶಕಗಳ ನಂತರ ಮತ್ತೆ ಬಹುರಾಷ್ಟ್ರೀಯ ಕಂಪೆನಿಗಳ ಆರ್ಥಿಕ ಗುಲಾಮಗಿರಿಗೆ ಸಿಲುಕುತಿದೆ” ಎಂದರಲ್ಲದೆ “ಜಾಗತೀಕರಣ ಎಂಬ ಬಿರುಗಾಳಿಯು ನಮ್ಮ ಜನ ಸಂಸ್ಕೃತಿಯನ್ನು ನಾಶಮಾಡುತ್ತಿದೆ” ಎಂದು ವಿಷಾಧಿಸಿದರು. ಮುಖ್ಯ ಅತಿಥಿಯಾಗಿ ಮಾತನಾಡಿದ ಕಾಲೇಜ್ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಬಿ.ಜಿ. ಕೂಡಲಮಠ ಅವರು ಮಾತನಾಡುತ್ತಾ “ಸೋಲು ಗೆಲುವುಗಳನ್ನು ಸಮನಾಗಿ ಸ್ವೀಕರಿಸುವ ಮನೋಭಾವ ಇಂದು ಬೇಕಾಗಿದೆ” ಎಂದರಲ್ಲದೆ “ಕ್ರೀಡೆಗಳು ಬಾವೈಕ್ಯತೆ ಹಾಗೂ ಮಧುರ ಬಾಂಧವ್ಯದ ಸೇತುವೆ” ಎಂದು ಹೇಳಿದರು. ಇನ್ನೋರ್ವ ಅತಿಥಿ ಪದ್ಮನಾಭ ಕುಂದಾಪುರ ಅವರು ಮಾತನಾಡಿ “ಕ್ರೀಡೆಗಳು ಯುವಕರಲ್ಲಿ ಮನೋಬಲವನ್ನು ಬೆಳೆಸುವುದರ ಜೊತೆಯಲ್ಲಿ ಅವರ ಬೌದ್ಧಿಕ ಮತ್ತು ದೈಹಿಕ ಬೆಳವಣಿಗೆಗೆ ಕಾರಣವಾಗುವುದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಕ್ರೀಡೆಗಳಿಗೆ ಸರ್ಕಾರದ ಪ್ರೋತ್ಸಾಹ ಅಗತ್ಯವಿದೆ” ಎಂದು ಹೇಳಿದರು. ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿಗಳಲ್ಲಿ ಒಬ್ಬರಾದ ವಿಜಯ ಕುಮಾರ್ ದೊಡ್ಡಮನಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಹಾನಗಲ್ಲ ತಾಲೂಕ ಕೇಂದ್ರವೂ




ಸೇರಿದಂತೆ ತಾಲೂಕಿನ ಪ್ರತಿಯೊಂದು ಹೊಬಳಿಕೇಂದ್ರದಲ್ಲಿ ಕ್ರೀಡಾಂಗಣ ನಿರ್ಮಾಣ ಆಗಬೇಕೆಂದು ಒತ್ತಾಯಿಸುವ ನಿರ್ಣಯ ಅಂಗೀಕರಿಸಲಾಯಿತು.

ಆರಂಭದಲ್ಲಿ ಎಸ್.ಎಫ್.ಐ. ಸ್ಥಳೀಯ ಘಟಕದ ಅಧ್ಯಕ್ಷ ಮಹೇಶ್ ತಳಗೇರಿ ಅವರು ಎಸ್.ಎಫ್.ಐನ ಶ್ವೇತ ಪತಾಕೆಯನ್ನು ಹಾರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಇತ್ತೀಚೆಗೆ ನಿಧನರಾದ ಹಾನಗಲ್ಲ ಎನ್.ಸಿ.ಜೆ.ಸಿ. ಕಾಲೇಜಿನ ಪ್ರಾಚಾರ್ಯರಾದ ಡಬ್ಲ್ಯು.ಜಿ. ಅತ್ತಗೂರ್ ಅವರಿಗೆ ಸಭೆ ಶ್ರದ್ಧಾಂಜಲಿ ಸಲ್ಲಿಸಿತು.

ಅನಂತರ ನಡೆದ ಬಿರುಸಿನ ಪಂದ್ಯಾವಳಿಯಲ್ಲಿ ಹಾನಗಲ್ಲ, ಮುಂಡಗೋಡ, ಸವಣೂರ, ಶಿಗ್ಗಾಂವಿ ತಾಲೂಕುಗಳಿಂದ ಒಟ್ಟು 16 ತಂಡಗಳ ನಡುವೆ ಹಣಾಹಣಿ ನಡೆದು ಅಂತಿಮವಾಗಿ ಹಾನಗಲ್ ನಗರದ ಫ್ರೆಂಡ್ಸ್ ಅಸೋಸಿಯೇಶನ್ ಪ್ರಥಮ ಸ್ಥಾನವನ್ನೂ, ಹಾನಗಲ್ ನಗರದ ಗೋಲ್ಡನ್ ಸ್ಟಾರ್ ತಂಡವು ದ್ವಿತೀಯ ಸ್ಥಾನವನ್ನೂ ಹುಣಸೆಟ್ಟಿಕೊಪ್ಪದ ಗೆಳೆಯರ ಬಳಗ ತಂಡವು ತೃತೀಯ ಸ್ಥಾನವನ್ನು ಪಡೆದವು. ಉತ್ತಮ ಶಾಟರ್ ಆಗಿ ನಾರಾಯಣ ಅಥಣಿ ಹಾಗೂ ಉತ್ತಮ ಲಿಪ್ಟರ್ ಆಗಿ ಮುಸ್ತಾಕ್ ಅಹ್ಮದ್ ಆಯ್ಕೆಯಾದರು. ವಿಜೇತ ತಂಡಗಳಿಗೆ ದಾನಿಗಳಾದ ಬಿ.ಜಿ. ಕೂಡಲಮಠ, ಹಸನಮಿಯಾ ಲಾರಿ, ಎಸ್.ಎಂ. ಪಾಟೀಲ, ಶಿವಮೂರ್ತಿಗುಡಿ, ಉಷಾ ಎಂ. ಹುಬ್ಬಳ್ಳಿ ಮತ್ತಿತರು ಒದಗಿಸಿದ ಬಹುಮಾನಗಳನ್ನು ನೀಡುವುದರೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಎಸ್.ಎಫ್.ಐ ಜಿಲ್ಲಾ ಮಟ್ಟದ ಹಾಗೂ ತಾಲೂಕ ಮಟ್ಟದ ಮುಖಂಡರಾದ ನಾರಾಯಣ ಕಾಳೆ, ಚಂದ್ರು ಅಕ್ಕಿವಳ್ಳಿ, ಅಣ್ಣಪ್ಪ ಚಿಕ್ಕಣ್ಣವರ, ಪ್ರವೀಣ್ ಮಾಳಿ, ರಾಜು ಭಜಂತ್ರಿ, ಸುರೇಶ್ ಗೌಡ ಪಾಟೀಲ್, ಪರಶುರಾಮ ಲಾದುಂಚಿ, ಉಮೇಶ್ ಮಾಳಿ, ನಾಗರಾಜ ಜಾಲೆಗಾರ, ವಿನಾಯಕ ಕುಂದಾಪುರ, ಶಂಭು ಸುಕಾಲೆ, ಸಂಗಮೇಶ್ ನೆಲವಿಗಿ, ಈಶ್ವರಗೌಡ ಪಾಟೀಲ್ ಮೊದಲಾದವರು ಪಟ್ಟ ಶ್ರಮ ಸಾರ್ಥಕಾಯಿತು. ಪಂದ್ಯಾವಳಿಯನ್ನು ವೀಕ್ಷಿಸಿ ಪ್ರೋತ್ಸಾಹಿಸಿದ ಗ್ರಾಮಸ್ಥರು ಎಸ್.ಎಫ್.ಐ. ಮುಖಂಡರನ್ನು ಮುಕ್ತವಾಗಿ ಶ್ಲಾಘಿಸಿದರು.

● ವಿಜಯಕುಮಾರ್ ದೊಡ್ಡಮನಿ


ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ: ಅಭಿನಂದನೆಗಳು



ರಾಜ್ಯ ಸಾಹಿ… ಅಕಾಡೆಮಿ ತನ್ನ… 2002 ನೇ ಸಾಲಿ… ಪ್ರಶಸ್ತಿ ಪ್ರಕಟಿಸಿ… ಇದರಲ್ಲಿ ಎನ್… ವಸಂತರಾಜ್ ರವರ ಚೊಚ್ಚಲ… ಕೃತಿ “ಅಮೆರಿಕಾದೊ… ಗೊಂದು ಇಣು… ಪ್ರವಾಸ ಸಾಹಿತ್ಯ ವಿಭಾಗದ ಪ್ರಶಸ್ತಿಗೆ … ಪಾತ್ರವಾಗಿದೆ.

ಡಾ. ಆರ್.ವಿ.ಭಂಡಾರಿಯವರ “ಯಶವಂತನ ಯಶೋಗೀತ” ಮಕ್ಕ… ಸಾಹಿತ್ಯದಲ್ಲಿ ಮನ್ನಣೆಗಳಿಸಿದೆ.

ವೃತ್ತಿಯಲಿ ಸಾಪ್ಟ್‌ವೇರ್ ಇಂಜೀಯರ್, ವಿಜ್ಞಾನ ಕ್ಷೇತ್ರದತ್ತ ತ… ಒಲವು ಹೊಂದಿರುವ, ತಮ್ಮ ಚೊಚ್ಚ… ಕೃತಿಯಲ್ಲೇ ಸಾಹಿತ್ಯ ಕ್ಷೇತ್ರದ ಮನ್ನಣೆ … ಗಳಿಸಿದ, ಐಕ್ಯರಂಗದ ಹಿತೈಷಿಗಳೂ … ಎನ್.ಕೆ.ವಸಂತರಾಜ್ ರವರಿಗೆ ಮತ… ಬಂಡಾಯ ಸಾಹಿತ್ಯದ ಮೂಲಕ ಶ್ರಮಿ… ನೋವಿಗೆ ದನಿ ನೀಡಿದ್ದು, ಗ್ರಾಮೀಣ … ಮಕ್ಕಳ ನೋವು-ನಲಿವಿಗೂ ಸಾಹಿತ್ಯ ರೂಪ ನೀಡಿದ, ಪ್ರಗತಿ ಪರ ಚಿಂತಕರು, ಐಕ್ಯರಂಗದ ಹಿತೈಸಿಗಳೂ ಆದ ಡಾ.ಆರ್.ವಿ ಭಂಡಾರಿಯವರಿಗೆ ಅಭಿನಂದನೆಗಳು



PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 1ನೇ ಅಡ್ಡ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ: 2236462.
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor : S.Y.GURUSHANTH